
ಕಲ್ಯಾಣ ಕಿರಣ

ಏಪ್ರಿಲ್ - 2001

ಬೆಲೆ : ರೂ. 5-00





ದ್ವಿತೀಯ ಮಹಿಳಾ ಜಗದ್ಗುರು
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ

ಓಂ ಶ್ರೀ ಗುರು ಬಸವಲಿಂಗಾಯ ನಮಃ
86666

ಸಂಪುಟ 31 | ಬಸವ ಶಕೆ 867-868 | ಆಜೀವ ಸದಸ್ಯತ್ವ 500 ರೂ
ಸಂಚಿಕೆ 4 | ಏಪ್ರಿಲ್-2001 | ವಾರ್ಷಿಕ ಚಂದಾ 50/- ರೂ



ಜಯ ಬಸವರಾಜ ಭಕ್ತ ಜನ ಸುರಭೂಜ
ಜಯತು ಮಹ ಕಾರಣಿಕ ಪರಶಿವನ ಘನತೇಜ
ಜಯತು ಕರುಣಾಸಿಂಧು ಭಜಕಜನ ಬಂಧು
ಜಯ ಇಷ್ಟದಾಯಕ ರಕ್ಷಿಸು ಶ್ರೀ ಗುರು ಬಸವ ॥

ಜಯತು ಜಯ ಬಸವಲಿಂಗ ಶರಣ ಸಾರ್ವಭೌಮನೆ

ಜಯತು ಜಯ ಬಸವಲಿಂಗ ಶರಣ ಸಾರ್ವಭೌಮನೆ
ಜಯತು ಜಯ ಮಂಗಳಾಂಗ ಲಿಂಗದೇವ ಕಂದನೆ ॥ ಪಲ್ಲವಿ ॥

ಕರ್ತ ಕಳುಹೆ ಧರೆಗೆ ಬಂದು ಮರ್ತ್ಯರನ್ನು ಪೊರೆದ ಗುರು
ಕರ್ತನಾಗಿ ಲಿಂಗಾಯತ ಧರ್ಮ ಕೊಟ್ಟ ಕಲ್ಪತರು
ಬಾಗೇವಾಡಿಯಲ್ಲಿ ಜನಿಸಿ ಸಂಗಮದೊಳು ಅಭ್ಯಸಿಸಿ
ಕಲ್ಯಾಣ ಪ್ರಣತೆಯಲ್ಲಿ ಬೆಳಗಿ ವಿಶ್ವಜ್ಯೋತಿಯಾದ ॥ 1 ॥

ದೇವನೊಬ್ಬ ಸೃಷ್ಟಿಕರ್ತ ಪರಮೋನ್ನತ ಎಂದೆಯ್ಯೆ
ಕಾಕು ಪೋಕು ದೈವಂಗಳ ಪೂಜೆ ಖಂಡಿಸಿ ತೊರೆದೆಯ್ಯೆ
ದೇವನವನ ಪೂಜಿಸಲು ಇಷ್ಟಲಿಂಗವಿತ್ತೆಯ್ಯೆ
ಧರ್ಮಕರ್ತನಾಗಿ ಪ್ರೀತಿ ಎಲ್ಲರಿಗೂ ನೀಡ್ದೆಯ್ಯೆ ॥ 2 ॥

ಅನುಭವ ಮಂಟಪವ ಕಟ್ಟಿ ಎಲ್ಲರನ್ನು ಕರೆದೆಯ್ಯೆ
ಅನುಭಾವವೇ ದೇವನನೊಲಿಪ ಸಾಧನವೆಂದು ನುಡಿದೆಯ್ಯೆ
ಕಾಯಕವೇ ಕೈಲಾಸ ಸೂತ್ರವಿತ್ತ ದಿವ್ಯ ಯೋಗಿ
ದಾಸೋಹವೇ ದೇವಧಾಮ ಎಂದು ಸವೆದ ಮಹಾತ್ಯಾಗಿ ॥ 3 ॥

ಇವನು ಯಾರು ಎಂದು ಭೇದ ಗೈದವರನು ಜರಿದ ಪುರುಷ
ಇವನಮ್ಮವ ಎಂದು ಎಲ್ಲರ ಆದರಿಸಿದ ಗುರು ಪರುಷ
ಧರ್ಮದಾತ ಶರಣ ಪ್ರೀತ ಇಷ್ಟಲಿಂಗ ದಾತನೇ
ವಿಶ್ವ ಧರ್ಮ ನೀಡಿ ಮೆರೆದ ಸಚ್ಚಿದಾನಂದ ಕಂದನೆ ॥ 4 ॥

ರಚನೆ : ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
(ಈ ಹಾಡು 'ಶರಣ ದುಂದುಭಿ' ಕೆಸೆಟ್ಟಿನಲ್ಲಿ ಧ್ವನಿ ಮುದ್ರಣಗೊಂಡಿದೆ.)

ಅಕ್ಷರ ಜೋಡಣೆ : ರಮೇಶ್ ಲಿಂಗಾಯತ

★ ಕಲ್ಯಾಣ ಕಿರಣ ★

ಸಂಪುಟ 31 ಬಸವ ಶಕೆ 867-868 ಆಜೀವ ಸದಸ್ಯತ್ವ 500 ರೂ
ಸಂಚಿಕೆ 4 ಏಪ್ರಿಲ್-2001 ವಾರ್ಷಿಕ ಚಂದಾ 50 ರೂ

ಲೇಖನಗಳು ಕಿರಣಗನ್ನಡಿ

ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿಯ ಜಯಂತಿಯು ದಿ. 8-4-2001ರಂದು ಮತ್ತು ವಿಶ್ವಗುರು ಬಸವಣ್ಣನವರ 868ನೆಯ ಜಯಂತಿ ಉತ್ಸವವು ದಿ. 26-4-2001ರಂದು ಒದಗಿ ಬಂದಿದ್ದು ಎಲ್ಲರಿಗೂ ಶುಭಾಶಯಗಳನ್ನು ಅರ್ಪಿಸುತ್ತೇವೆ.

★ ಕಲ್ಯಾಣ ಕಿರಣದ ಸಿಬ್ಬಂದಿ ವರ್ಗ ★

E-mail : viswakalyana@yahoo.com E-mail : matemahadevi@hotmail.com

KALYANA KIRANA- Reg. No. 19988/70. Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 8437234

ಅಕ್ಷರ ಜೋಡಣೆ ಮತ್ತು ಪುಟ ವಿನ್ಯಾಸ : ರಮೇಶ್ ಲಿಂಗಾಯತ

ವಿಶ್ವಗುರು ಬಸವಣ್ಣನವರು (1134-1196)

ವಿಶ್ವಗುರು ಬಸವಣ್ಣನವರು ಪರಮಾತ್ಮನ ಕರುಣೆಯ ಕಂದರಾಗಿ ಅವತರಿಸಿ, ಲೋಕಕ್ಕೆ ಹೊಸ ಧರ್ಮವೊಂದನ್ನು ಕೊಟ್ಟರು. ಇಂಗಳೇಶ್ವರ ಬಾಗೇವಾಡಿಯಲ್ಲಿ ಶೈವಬ್ರಾಹ್ಮಣ ದಂಪತಿಗಳಾದ ಮಾದರಸ-ಮಾದಲಾಂಬಿಕೆಯರ ಮಗನಾಗಿ ಆನಂದನಾಮ ಸಂವತ್ಸರದಲ್ಲಿ ವೈಶಾಖಮಾಸದ ಅಕ್ಷಯ ತೃತೀಯಾದಂದು (30-3-1134) ರೋಹಿಣಿ ನಕ್ಷತ್ರದಲ್ಲಿ ಜನಿಸಿ ಯಾವುದೇ ಅಂಧಶ್ರದ್ಧೆ- ಜಡಸಂಪ್ರದಾಯಗಳನ್ನೊಪ್ಪದೆ ಸತ್ಯಾನ್ವೇಷಕರಾಗಿ ಹೆತ್ತವರನ್ನು, ಬಂಧು ಬಾಂಧವರನ್ನು ತೊರೆದು ವಿದ್ಯಾಕಾಂಕ್ಷಿಯಾಗಿ ಕೂಡಲ ಸಂಗಮದ ಗುರುಕುಲಕ್ಕೆ ಬಂದರು. ಶಾಸ್ತ್ರಾಧ್ಯಯನ, ಯೋಗಾಭ್ಯಾಸಗಳಲ್ಲಿ ಬಾಲ್ಯವನ್ನು ಕಳೆದು ತಾರುಣ್ಯಕ್ಕೆ ಕಾಲಿರಿಸಿದರು. ಜನರಲ್ಲಿ ಮನೆ ಮಾಡಿಕೊಂಡಿದ್ದ ಮೌಢ್ಯತೆ, ಕಂದಾಚಾರ, ಜಾತೀಯತೆಗಳನ್ನು ಕಂಡು ಮನನೊಂದು ಪರಿಹಾರವನ್ನು ಅರಸತೊಡಗಿದರು.

ಒಂದು ದಿನ (14-1-1155) ಪರಮಾತ್ಮನ ದಿವ್ಯ ದರ್ಶನವಾಯಿತು ; ಅನುಗ್ರಹಿತರಾದರು. ಬ್ರಹ್ಮ-ವಿಷ್ಣು-ಮಹೇಶ್ವರರೆಂಬ ತ್ರಿಮೂರ್ತಿಗಳನ್ನು ಮೀರಿದ ಸೃಷ್ಟಿಕರ್ತನೇ ಶ್ರೇಷ್ಠನೆಂದು ಘೋಷಿಸಿ ಆ ದೇವನನ್ನು ಲಿಂಗದೇವ ಎಂದು ಕರೆದರು. 'ನಿರಾಕಾರ ದೇವನಿಗೆ ಮನುಷ್ಯರ, ಪ್ರಾಣಿಗಳ ಆಕಾರ ಕೊಡುವುದು ಸರಿಯಲ್ಲ' ಎಂಬ ಭಾವ ತಳೆದು, 'ದೇವನ ಸಾಕಾರ ಕೃತಿಯೇ ಬ್ರಹ್ಮಾಂಡ, ಇದು ಗೋಲಾಕಾರದಲ್ಲಿದೆ. ಆದ್ದರಿಂದ ದೇವನನ್ನು ವಿಶ್ವದಾಕಾರದಲ್ಲಿ ಪೂಜಿಸುವುದು ಸರಿ' ಎಂದು ಇಷ್ಟಲಿಂಗದ ಪರಿಕಲ್ಪನೆ ಕೊಟ್ಟರು. ದೇವರ ಕುರುಹಾದ ಇಷ್ಟಲಿಂಗವು ಮಾನವನ ಜಾತಿ, ವರ್ಣ, ವರ್ಗ ಭೇದಗಳನ್ನು ಕಳೆದು ಶರಣನನ್ನಾಗಿ ಮಾಡುವ ಸಾಧನವಾಗಬೇಕೆಂದು ಅದನ್ನು ಗಣ ಲಾಂಛನವನ್ನಾಗಿ ಮಾಡಿದರು.

ದಿವ್ಯಾನುಭವ ಪಡೆದು, ನವ ಸಮಾಜ ನಿರ್ಮಾಣದ ರೂಪುರೇಷೆಗಳನ್ನು ತಮ್ಮ ಮನದಲ್ಲಿ ಹೊಂದಿ ಕಲ್ಯಾಣದ ಕಾರ್ಯಕ್ಷೇತ್ರವನ್ನು ಪ್ರವೇಶಿಸಿದರು. ಸೋದರ ಮಾವನ ಮಗಳು ನೀಲಗಂಗಳನ್ನು ವಿವಾಹವಾಗಿ ಕರಣಿಕ ಕಾಯಕ ಕೈಗೊಂಡರು. ಅಲ್ಲಿಂದ ಮುಂದೆ ಭಂಡಾರಿಯಾಗಿ, ಪ್ರಧಾನಿ (ದಂಡನಾಯಕ) ಯಾಗಿ ಕಾಯಕ ನಿರ್ವಹಿಸಿದರು. ಅನುಭವ ಮಂಟಪ ರಚಿಸಿ ಧರ್ಮಪ್ರಚಾರ ಮಾಡಿದರು. ಎಲ್ಲರ ಮನೆ, ಮನಗಳ ಬಾಗಿಲಿಗೂ ಧರ್ಮಗಂಗೆ ಹರಿಯುವಂತೆ ಮಾಡಿದರು. ಇಷ್ಟಲಿಂಗವೆಂಬ ಗಣಲಾಂಛನವನ್ನು ಧರಿಸಿ ಲಿಂಗವಂತರಾದ ಎಲ್ಲ ಶರಣ ಬಂಧುಗಳನ್ನು ಸಮಾನ ಭಾವದಿಂದ ಕಂಡರು. ಹುಟ್ಟಿನಿಂದ ಬ್ರಾಹ್ಮಣರಾಗಿ, ಸಂಸ್ಕಾರದಿಂದ ಶರಣರಾದ ಮಧುವರಸರ ಮಗಳನ್ನು ಹುಟ್ಟಿನಿಂದ ಸಮಗಾರರಾಗಿ ಸಂಸ್ಕಾರದಿಂದ ಶರಣರಾದ ಹರಳಯ್ಯನವರ ಮಗನಿಗೆ ಕೊಟ್ಟು ವಿವಾಹ ಮಾಡಲು ಪ್ರೇರಣೆ ನೀಡಿದರು. ಈ ವಿವಾಹದಿಂದ ಸಂಪ್ರದಾಯವಾದಿಗಳು ಸಿಡಿದೆದ್ದು ಬಿಜ್ಜಳ ಮಹಾರಾಜನನ್ನು ಪ್ರೇರೇಪಿಸಿ ಧರ್ಮಗುರು ಬಸವಣ್ಣನವರಿಗೆ ಗಡಿಪಾರು ಶಿಕ್ಷೆ ನೀಡುವಂತೆ ಮಾಡಿದರು. ಧರ್ಮಪಿತರು ಗಡಿಪಾರು ಶಿಕ್ಷೆ ಸ್ವೀಕರಿಸಿ ಕಲ್ಯಾಣದಿಂದ ಹೊರಟ ನಂತರ ಹರಳಯ್ಯ, ಮಧುವರಸ, ಶೀಲವಂತರ ಬಂಧನವಾಗಿ, ಅವರು ವರ್ಣಾಂತರ ವಿವಾಹದಲ್ಲಿ ಭಾಗಿಗಳಾದುದಕ್ಕಾಗಿ ಕಣ್ಣು ಕೀಳಿಸುವ ಶಿಕ್ಷೆ, ಎಳೆಹೂಟೆ ಶಿಕ್ಷೆಗೆ ಒಳಗಾಗಿ ಪ್ರಾಣಬಿಡಬೇಕಾಯಿತು. ಜಾತಿವಾದಿಗಳು ವಚನ ಸಾಹಿತ್ಯವನ್ನು ನಾಶಮಾಡಲು ಸನ್ನದ್ಧರಾದಾಗ ವೀರಮಾತೆ ಅಕ್ಕನಾಗಲಾಂಬಿಕೆ, ಚಿನ್ಮಯಜ್ಞಾನಿ ಚನ್ನಬಸವಣ್ಣ, ವೀರ ಗಣಾಚಾರಿ ಮಡಿವಾಳ ಮಾಚಯ್ಯನವರು ವೀರಾಗ್ರಣಿಗಳಾಗಿ ಕಾದಾಡಿ ವಚನ ವಾಙ್ಮಯ ನಿಧಿಯನ್ನು ಉಳಿಸಿಕೊಟ್ಟರು. ಅದಿಂದು ನಮ್ಮೆಲ್ಲರ, ಕರ್ನಾಟಕದ, ಭಾರತದ ಹೆಮ್ಮೆಯ ಆಸ್ತಿಯಾಗಿದೆ.

ಇಂಥ ಮಹಾನ್ ನೇತಾರರಾದ ಬಸವಣ್ಣನವರು ಲಿಂಗಾಯತ ಧರ್ಮದ ಸಂಸ್ಥಾಪಕರು; ಧರ್ಮಪಿತರು, ಮಂತ್ರಪುರುಷರು. 62ವರ್ಷ 3 ತಿಂಗಳು 2ದಿವಸಗಳ ಕಾಲ ಇಳೆಯಲ್ಲಿ ಬಾಳಿದ ಬಸವಣ್ಣನವರು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ (ದಿ. 30-7-1196) ಯಂದು ಉರಿಯುಂಡ ಕರ್ಪೂರದಂತೆ ಲಿಂಗೈಕ್ಯರಾದರು.

ವೀರ ವಿರಾಗಿಣಿ ಅಕ್ಕಮಹಾದೇವಿ

ದಾರ್ಶನಿಕ ದೇವಗಂಗೆ, ವೀರ ವಿರಾಗಿಣಿ, ಜಗನ್ಮಾತಾ ಅಕ್ಕಮಹಾದೇವಿಯವರು ವಚನ ವಾಙ್ಮಯ ಕ್ಷೇತ್ರದ ದಾರ್ಶನಿಕ ದಿಗ್ಗಜ. ಲಿಂಗಾಯತ ಧರ್ಮದ ಷಡುಗಣಾಧೀಶರೆಂದರೆ ಧರ್ಮಗುರು ಬಸವಣ್ಣನವರು, 'ಶೂನ್ಯ ಪೀಠಾಧೀಶ ಅಲ್ಲಮ ಪ್ರಭುಗಳು, ಚಿನ್ಮಯ ಜ್ಞಾನಿ ಚನ್ನಬಸವಣ್ಣ, ಬಸವಯೋಗಿ ಸಿದ್ಧರಾಮೇಶ್ವರ, ವೈರಾಗ್ಯನಿಧಿ ಅಕ್ಕಮಹಾದೇವಿ, ವೀರ ಗಣಾಚಾರಿ ಮಡಿವಾಳ ಮಾಚಿದೇವರು. ಶರಣ ಧರ್ಮದ 6 ಆಧಾರ ಸ್ತಂಭಗಳಾಗಿರುವ ಈ ಷಡುಗಣಾಧೀಶರಲ್ಲಿ ಅಕ್ಕಮಹಾದೇವಿಗೂ ಒಂದು ಸ್ಥಾನವಿದೆ ಎಂಬುದು ಇಡೀ ಜಗತ್ತಿನ ಮಹಿಳಾಕುಲ ಹೆಮ್ಮೆ ಪಡಬೇಕಾದ ಸಂಗತಿ. ಪುರುಷ ಪ್ರಧಾನವಾದ ಸಮಾಜವು ಮಹಿಳೆಗೆ ಸಾಮಾಜಿಕ, ಧಾರ್ಮಿಕ ಸಮಾನತೆ ಕೊಡದೆ ಮೂಲೆಗುಂಪು ಮಾಡಿದ್ದ ಸಮಯದಲ್ಲಿ ಕ್ರಾಂತಿಪುರುಷ ಬಸವಣ್ಣನವರು ಮಹಿಳೆಯರಿಗೆ ಸಂಪೂರ್ಣ ಸಮಾನತೆ ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯವನ್ನು ನೀಡಿದರು. ಇದನ್ನು ಬಳಸಿಕೊಂಡು ಅತ್ಯುನ್ನತ ಸ್ಥಾನಕ್ಕೇರಿದ ಮಹಾಮಹಿಳೆ ಅಕ್ಕಮಹಾದೇವಿ. ಈಗಿನ ಶಿವಮೊಗ್ಗಾ ಜಿಲ್ಲೆಯ ಶಿಕಾರಿಪುರ ತಾಲ್ಲೋಕಿನ ಶಿರಾಳಕೊಪ್ಪದ ಬಳಿಯ ಉಡುತಡಿ ಎಂಬಲ್ಲಿ ಓಂಕಾರ ಶೆಟ್ಟಿ ಮತ್ತು ಲಿಂಗಮ್ಮ ಎಂಬ ಶರಣ ದಂಪತಿಗಳ ಮಗಳಾಗಿ ಚೈತ್ರ ಮಾಸದ ಪೌರ್ಣಿಮೆಯಂದು ಮಹಾದೇವಿ ಜನಿಸಿದಳು. ಶ್ರೀ ಗುರುಲಿಂಗದೇವರು ಎಂಬ ಸದ್ಗುರುಗಳಿಂದ ಇಷ್ಟಲಿಂಗದೀಕ್ಷೆ ಪಡೆದು ಪರಮಾತ್ಮನನ್ನೇ ಪತಿ ಎಂದು ಆರಾಧಿಸತೊಡಗಿದಳು. ಅಪೂರ್ವ ಚೆಲುವೆಯಾಗಿದ್ದ ಮಹಾದೇವಿಯ ಮೇಲೆ ಕಣ್ಣು ಬಿದ್ದು ನಾಡದೊರೆ ಕೌಶಿಕನು ಮದುವೆಯಾಗಲು ಬಯಸಿದಾಗ ಅಕ್ಕಮಹಾದೇವಿ ತಾನು ಲೌಕಿಕ ಪತಿಯನ್ನೊಲ್ಲೆ ಎಂದು ನಿರಾಕರಿಸಿದಳು. ರಾಜನು ಬಂಧನದಲ್ಲಿಡಲು ಬಯಸಿದಾಗ ಮೂರು ಕರಾರುಗಳನ್ನು ಹಾಕಿ ಅರಮನೆಗೆ ಹೋಗಿ, ರಾಜನು ಮೂರು ಕರಾರು ಮುರಿಯುತ್ತಲೇ ಅರಮನೆಯ ಬಂಧನವನ್ನು ಕಳಚಿಕೊಂಡು ಹೊರ ನಡೆದಳು. ಶರಣರ ಸತ್ಸಂಗವನ್ನು ಬಯಸಿ ಬಸವ ಕಲ್ಯಾಣಕ್ಕೆ ಧಾವಿಸಿ ಅನುಭವ ಮಂಟಪದಲ್ಲಿ ಶರಣರ ಕಣ್ಮಣಿಯಾಗಿ ಬೆಳಗಿದಳು. ವಿಶ್ವಗುರು ಬಸವಣ್ಣನವರ ಮೋಹದ ಮಗಳಾಗಿ, ತಾಯಿ ನೀಲಾಂಬಿಕೆಯ ಸುಚಿತ್ತದ ಪುತ್ಥಳಿಯಾಗಿ ಎಲ್ಲ ಶರಣರ ಆಧರ-ಗೌರವಗಳಿಗೆ ಪಾತ್ರಳಾದಳು. ಅನುಭವ ಮಂಟಪಕ್ಕೆ ಆಗಮಿಸಿದಾಗ ಉಡುತಡಿಯ ಮಹಾದೇವಿಯಕ್ಕನನ್ನು ತೀವ್ರ ಪರೀಕ್ಷೆಗೆ ಗುರಿಪಡಿಸಿದರೂ ಆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ತೇಜೋಮೂರ್ತಿಯಾಗಿ ಬೆಳಗಿದ ಮಹಾದೇವಿಯನ್ನು " ಅಕ್ಕ "ಎಂದು ಶೂನ್ಯ ಪೀಠಾಧೀಶ ಪ್ರಭುದೇವರು ಗೌರವಿಸಿದಾಗ " ಅಕ್ಕ " ಎಂಬ ಬಿರುದು ಹೊಂದಿ ಅಕ್ಕಮಹಾದೇವಿ ಎಂದು ಖ್ಯಾತನಾಮಳಾದಳು. ಸಗುಣರೂಪದ ಆರಾಧನೆಯಿಂದ ಆಧ್ಯಾತ್ಮಿಕ ಜೀವನವನ್ನು ಆರಂಭಿಸಿದರೂ ನಿರ್ಗುಣೋಪಾಸನೆಯ ಉನ್ನತ ಸ್ಥಿತಿಯನ್ನು ಏರಿದ ಅಕ್ಕಮಹಾದೇವಿ ಅಲ್ಲಮ ಪ್ರಭುದೇವರು ನಿರ್ದೇಶಿಸಿದ ಕದಳಿಯ ಬನ ಎಂಬಲ್ಲಿಗೆ ಹೋಗಿ ಇಚ್ಛಾಮರಣಿಯಾಗಿ ದೇಹವನ್ನು ತೊರೆದು ಉರಿಯುಂಡ ಕರ್ಪುರದಂತೆ ಲಿಂಗದೇವನಲ್ಲಿ ಲೀನವಾದಳು.

-ಮಾತಾಜಿ

ಸತ್ಯ ಹೇಳುವವರು ಬೇಕಾಗಿದ್ದಾರೆ

ಭಾವ ಭ್ರಮೆವಂತರು ಬಾರದಿರಿ, ಜ್ಞಾನಹೀನರು ಬೇಗ ಹೋಗಿ
ತ್ರಿವಿಧ ಮಲಕ್ಕೆ ಕಚ್ಚಿ ಮುಚ್ಚಿ ಹೊಡೆದಾಡುವರತ್ತಲಿರಿ
ನಿರುತ ಸ್ವಯಾನುಭಾವರು ಬನ್ನಿ, ಪರಬ್ರಹ್ಮ ಸ್ವರೂಪರು ಬನ್ನಿ.
ಏಕಲಿಂಗ ನಿಷ್ಠಾಪರ ದೃಢವಂತರು ಬನ್ನಿ ;
ಸನ್ಮಾರ್ಗ ಸತ್ಕ್ರಿಯಾವಂತರು ಬನ್ನಿ, ಎಂದು ಎನಗೆ ಕೊಟ್ಟ
ಕಾಯಕ ಕೂಡಲ ಸಂಗಮ ದೇವರಲ್ಲಿ ಬಸವಣ್ಣ

- ಬ. ತ. ದ - ಪುಟ 600

ಉಗ್ಘಡಿಸುವ ಕಾಯಕದ ಗೊಬ್ಬಿದೇವಯ್ಯನ ವಾಣಿ ಇದು. ಅನುಭವ ಮಂಟಪಕ್ಕೆ ಬರುವ ನಿಜ ಶರಣರು ಹೇಗಿರಬೇಕು ?

ಭಾವ ಭ್ರಮೆವಂತರು ಬಾರದಿರಿ ! ಎಂಥಾ ಎಚ್ಚರಿಕೆ

ಮಾನವನಿಗೆ ದೇವರು ವಿಮರ್ಶಾ ಪ್ರಜ್ಞೆಯನ್ನು ಕೊಟ್ಟಿದ್ದಾನೆ. ಅವನಿಗೆ ಒಂದು ಸತ್ಯವನ್ನು ಮನವರಿಕೆ ಮಾಡಿಕೊಟ್ಟಾಗ ಅವನ ಅಂತರಾತ್ಮವು ಒಪ್ಪಿಕೊಳ್ಳುತ್ತದೆ. ಬುದ್ಧಿಯು ಅನುಮೋದಿಸುತ್ತದೆ. ಆದರೆ ಭಾವದ ಭ್ರಮೆ ಅಡ್ಡಿಮಾಡುತ್ತದೆ. ಸತ್ಯವನ್ನು ಅನುಷ್ಠಾನ ಮಾಡುವ ಧೈರ್ಯವು ಬರದಿರುವುದು ಭಾವದ ಭ್ರಮೆಯಿಂದಲೇ! ಭಯವು ಕಾಡುವುದು ಭ್ರಮೆಯಿಂದಲೆ! ಸಣ್ಣವರು ಸತ್ಯವನ್ನು ಹೇಳಿದಾಗ ದೊಡ್ಡವರಿಗೆ ಅದನ್ನು ಒಪ್ಪಿಕೊಳ್ಳಲು ಪ್ರತಿಷ್ಠೆ ಅಡ್ಡಬರುವುದು ಭಾವದ ಭ್ರಮೆಯಿಂದಲೇ! ಇದಕ್ಕೆ ಬಲ ಕೊಡುವುದು ಜ್ಞಾನ ಹೀನತ್ವ, ನಿಜಕ್ಕೂ ಜ್ಞಾನದ ಮಹತ್ವ ಬಲು ದೊಡ್ಡದು. ಅದು ಬೆಳೆಸುವ ಆತ್ಮಬಲವು ಬಹು ಅದಮ್ಯ! ಪರಿಸರದ ಪ್ರಭಾವದಿಂದ ನಾನು ಬಾಲ್ಯ-ತಾರುಣ್ಯದಲ್ಲಿ ಎಷ್ಟೊಂದು ಮೂಢನಂಬಿಕೆ ತುಂಬಿಕೊಂಡಿದ್ದೆ, ಎಷ್ಟೊಂದು ದೈವ-ದೇವತೆಗಳ ಉಪಾಸನೆ ಮಾಡುತ್ತಿದ್ದೆ. ಆದರೆ ಒಮ್ಮೆ ನಿಜ ದೇವರ ಪರಿಕಲ್ಪನೆ ಉಂಟಾಗುತ್ತಲೇ ಬಹುದೇವತೋಪಾಸನೆಯ ಬೇರುಗಳು ಸಡಲಿ ಮೂಢತ್ವದ ವೃಕ್ಷ ಬುಡ ಸಮೇತ ಉರುಳಿತು. ಜ್ಞಾನದ ಬೆಳಕು ಅಷ್ಟು ಮಹತ್ವಪೂರ್ಣ.

ತ್ರಿವಿಧ ಮಲಕ್ಕೆ ಕಚ್ಚಿ ಮುಚ್ಚಿ ಹೊಡೆದಾಡುತ್ತಲಿರುವವರು ದೇವರನ್ನು ಏಕೆ ಪ್ರೀತಿಸುತ್ತಾರೆ ? ಆದ್ದರಿಂದ ಅಂಥವರಿಂದ ದೂರವಿರಿ ಎನ್ನುತ್ತಾರೆ ಗೊಬ್ಬಿದೇವಯ್ಯನವರು. ತ್ರಿವಿಧ ಮಲಗಳೆಂದರೆ ದುಷ್ಟವೃತ್ತಿಗಳ ಪರಿಣಾಮವಾದ ಕಾರ್ಮಿಕ ಮಲ, ದುರ್ವಿಚಾರದ ಪ್ರತಿಫಲವಾದ ಮಾಯಾಮಲ, ದುರ್ಭಾವದ ಪ್ರತಿಫಲವಾದ ಆಣವ ಮಲ. ಇವುಗಳಲ್ಲಿ ಆಸಕ್ತರಾದವರು ದೇವನ ಕಡೆಗೆ ಚಿತ್ತವನ್ನು ಹರಿಸುವುದುಂಟೆ ? ಪರತತ್ತ್ವವನ್ನು ಅರಿತವರು ಬನ್ನಿ ಎಂದು ಆಹ್ವಾನಿಸುವ ಗೊಬ್ಬಿದೇವಯ್ಯನವರು ಏಕಲಿಂಗ ನಿಷ್ಠಾಪರ ದೃಢವಂತರು ಬನ್ನಿ ಎಂದು ಬಹಳ ಚೆನ್ನಾಗಿ ಆಮಂತ್ರಿಸುತ್ತಾರೆ. ಮನೋದೌರ್ಬಲ್ಯವಿಲ್ಲದ ದೃಢವಂತರಿಗೆ ಮಾತ್ರ ಏಕಲಿಂಗ ನಿಷ್ಠಾಪರತ್ವ ಬರಲು ಸಾಧ್ಯ. ಮಾನಸಿಕ ಸದೃಢತೆ ಇಲ್ಲದವರು ಪಾತಿವ್ರತ್ಯಪೂರ್ಣವಾದ ಭಕ್ತಿಯನ್ನು ಅಳವಡಿಸಿಕೊಳ್ಳಲಾರರೆಂಬುದವರ ಅಭಿಮತ.

"ಸನ್ಮಾರ್ಗ, ಸತ್ಕ್ರಿಯಾವಂತರು ಬನ್ನಿ" ಎಂದು ಅನುಭವ ಮಂಟಪಕ್ಕೆ ಜನರನ್ನು ಬರಮಾಡಿಕೊಳ್ಳುವ ಸ್ವಾಗತಕಾರನ ಪವಿತ್ರ ಕಾಯಕವನ್ನು ಗೊಬ್ಬಿದೇವಯ್ಯನವರು ನಿರ್ವಹಿಸುತ್ತಿದ್ದರು.

ಇಲ್ಲಿ ಒಂದು ಸಂದೇಹ ನಮಗೆ ಬರುತ್ತದೆ. ಅನುಭವ ಮಂಟಪಕ್ಕೆ ಬರುವವರೆಲ್ಲರೂ ಇಷ್ಟೇ ಪ್ರೌಢಮಟ್ಟದವರು ಇರಲು ಸಾಧ್ಯವೇ? ಹಾಗಾದರೆ ಅಜ್ಞಾನಿಗಳು, ಸಂಸ್ಕಾರ ಹೀನರು ಅನುಭವ

ಮಂಟಪಕ್ಕೆ ಬರಲು ಅವಕಾಶವಿರಲಿಲ್ಲವೇ?

ಸಂಸ್ಕಾರ ನೀಡುವುದರಲ್ಲಿ ಎರಡು ಬಗೆಯ ದೃಷ್ಟಿಕೋನಗಳನ್ನು ಧರ್ಮಪಿತ ಬಸವಣ್ಣನವರು ಮತ್ತು ಷಟಸ್ಥಲ ಜ್ಞಾನಿ ಚನ್ನಬಸವಣ್ಣನವರಲ್ಲಿ ಕಾಣುತ್ತೇವೆ. "ಮಾನವನಲ್ಲಿ ಹಲವು ಬಗೆಯ ದೌರ್ಬಲ್ಯಗಳು ಇರುತ್ತವೆ. ಆದ್ದರಿಂದ ಹಂತಹಂತವಾಗಿ ಮೇಲೇರಲು ಅವಕಾಶ ನೀಡಬೇಕು ಎನ್ನುವುದು ಮಾತೃಹೃದಯಿ ಧರ್ಮಪಿತರ ದೃಷ್ಟಿಕೋನ. "ಕೂಡದು, ಒಮ್ಮೆ ದೀಕ್ಷಿತನಾದ ಮೇಲೆ ಎಲ್ಲ ಸಂಸ್ಕಾರಗಳನ್ನು ಸ್ಥಲಗಳನ್ನು ತಕ್ಷಣ ಮೈಗೂಡಿಸಿಕೊಳ್ಳಬೇಕು" ಎಂಬ ಧೋರಣೆ ಚನ್ನಬಸವಣ್ಣನವರದು.

ಅದೇನೇ ಇರಲಿ; ವಿವಿಧ ಮಟ್ಟದ ಎಲ್ಲ ಸಾಧಕರಿಗೆ ಒಟ್ಟಾಗಿ ಅನುಭವ ಗೋಷ್ಠಿಯೊಂದು ನಡೆಯುವುದರ ಜೊತೆಗೆ, ವಿವಿಧ ಹಂತಗಳನ್ನು ಏರಿದವರಿಗೆ ಪರಸ್ಪರ ವಿಚಾರ ವಿನಿಮಯ ಮಾಡಲು, ಉನ್ನತ ಮಟ್ಟದ ಸಾಧನೆ ಕುರಿತು ಮಾರ್ಗದರ್ಶನ ಪಡೆಯಲು ಪ್ರತ್ಯೇಕ ಗೋಷ್ಠಿಗಳು ನಡೆಯುತ್ತಿದ್ದವು ಎಂದು ಸಹ ಊಹಿಸಬಹುದು. ಗೊಬ್ಬಿದೇವಯ್ಯನವರ ಈ ಎಚ್ಚರಿಕೆಯ ವಚನ ಮಹೇಶ್ವರ ಸ್ಥಲದ ತತ್ತ್ವನಿಷ್ಠರಿಗೆ ಚೆನ್ನಾಗಿ ಅನ್ವಯಿಸುತ್ತದೆ ಎಂದು ಆಲೋಚಿಸಬಹುದು.

ಉಗ್ಘಡಿಸುವ ಕಾಯಕ

ಈಗ ನಮ್ಮದೂ ಉಗ್ಘಡಿಸುವ ಕಾಯಕವಾಗಿದೆ. ಓರ್ವರು ದೂರವಾಣಿಯಲ್ಲಿ ಬೆದರಿಕೆಯ ಧಾಟಿಯಲ್ಲಿ ನುಡಿದರು: "ನೀವು ಅನ್ಯರನ್ನು ವಿಮರ್ಶಿಸಲು ಏಕೆ ಹೋಗುವಿರಿ? ನಿಮಗೆ ಯಾರು ಈ ಅಧಿಕಾರ ಕೊಟ್ಟವರು?" ನಾನು ಚಿಂತನೆಗೆ ತೊಡಗಿದೆ. ಆಗ ಶರಣ ಗೊಬ್ಬಿದೇವಯ್ಯನವರ ವಚನದ ಸಾಲು ನೆನಪಾಯಿತು:

"ಸನ್ಮಾರ್ಗ ಸತ್ಕ್ರಿಯಾವಂತರು ಬನ್ನಿ ಎಂದು ಎನಗೆ ಕೊಟ್ಟ ಕಾಯಕ
ಕೂಡಲ ಸಂಗಮದೇವರಲ್ಲಿ ಬಸವಣ್ಣ."

ಅಹುದು, ಧರ್ಮಪಿತರು ವಿಧಿಸಿರುವ ಕಾಯಕವಿದು. ಇನ್ನೊಂದು ವಚನದಲ್ಲಿ ಅವರು ಹೇಳುವರು.

ತಿರುಕರೆನ್ನದಿರಿ ಭೋ ಎನ್ನ ತಂದೆಗಳನು
ತಿರುಕರೆನ್ನದಿರಿ ಭೋ ಎನ್ನ ಬಂಧುಗಳನು
ತಿರುಕರೆನ್ನದಿರಿ ಭೋ ಎನ್ನ ದೇವರನು
ದೇಹಿ ಎಂದರೇ ನಾಸ್ತಿ ಎಂಬವರ ಬೇಹು
ನೋಡ ಬಂದ ಕಾಣಾ, ಲಿಂಗದೇವ. -ಬ.ವ.ದೀ 1137

ಜಂಗಮನದು ವಿಜಿಲೆನ್ಸ್ ಡಿಪಾರ್ಟಮೆಂಟ್ (ವಿಚಕ್ಷಣ ದಳ) ; ಜನರು ತಮ್ಮ ಧರ್ಮಪಥದಲ್ಲಿ ಸರಿಯಾಗಿ ನಡೆಯುತ್ತಿರುವರೇ ಇಲ್ಲವೇ ಎಂಬುದನ್ನು ಗಮನಿಸುವ ಕೆಲಸ ಜಂಗಮನದು. ಸತ್ಯವನ್ನು ಹೇಳುವವರ ಅಗತ್ಯ ಎಂದಿಗಿಂತಲೂ ಇಂದು ಹೆಚ್ಚಾಗಿ ಇದೆ. " ಅಯ್ಯೋ ನಮಗ್ಯಾಕೆ ಬೇಕು? ಸತ್ಯವನ್ನು ಹೇಳಿ ನಾವ್ಯಾಕೆ ನಿಷ್ಠುರರಾಗಬೇಕು ? ಈ ಜಗತ್ತನ್ನು ಸರಿಪಡಿಸಲು ನಮಗಾದೀತೆ ? ಇದು ನಾಯಿಯ ಬಾಲ ! ನಾವು ಸರಿಯಾಗಿದ್ದರೆ ಆಯಿತು." ಈ ಮನೋಭಾವ ಭಾರತೀಯರ ಮನಸ್ಸಿನಲ್ಲಿ ರಕ್ತಗತವಾಗಿದೆ. "ಸತ್ಯವನ್ನು ನುಡಿ, ಪ್ರಿಯವಾದುದನ್ನು ನುಡಿ, ಕಹಿಯಾದ ಸತ್ಯವನ್ನು ಹೇಳಬೇಡ." ಎನ್ನುತ್ತದೆ ಒಂದು ಸುಭಾಷಿತ "ನೂರು ಸುಳ್ಳು ಹೇಳಿ ಒಂದು ಮದುವೆಯನ್ನು ಮಾಡು" ಎಂಬ ಗಾದೆಯು ಸುಳ್ಳಿಗೆ ಪಟ್ಟಕಟ್ಟಿದೆ. ಬಸವ ಧರ್ಮದ ದೃಷ್ಟಿಕೋನ ಈ ಮೇಲಿನ ಮಾತುಗಳಿಂದ ಪೂರ್ತಿ ಬೇರೆಯಾಗಿದೆ.

"ಕಹಿಯಾಗಿದ್ದರೂ ಸರಿ ಸತ್ಯವನ್ನೇ ಹೇಳು." ಈ ಮಾತು ಧರ್ಮಪಿತರ ಕೆಲವು ವಚನ ವಾಕ್ಯಗಳಲ್ಲಿದೆ.

"ಅಧರಕ್ಕೆ ಕಹಿ ಉದರಕ್ಕೆ ಸಿಹಿ
ಲಿಂಗದೇವನ ಶರಣರ ವಚನ ಬೇವ ಸವಿದಂತೆ"
"ನ್ಯಾಯ ನಿಷ್ಠುರಿ ದಾಕ್ಷಿಣ್ಯಪರ ನಾನಲ್ಲ
ಲೋಕ ವಿರೋಧಿ ಶರಣನಾರಿಗಂಜುವನಲ್ಲ"

ಆದ್ದರಿಂದ ಪ್ರಗತಿಪರ ವೈಚಾರಿಕ ಧರ್ಮವಾದ ಬಸವ ಧರ್ಮದ ಸ್ವಾಭಾವಿಕ ನಡೆಯೆ ಸತ್ಯವನ್ನು ಹೇಳುವುದು.

ನಮ್ಮ ಮೇಲಿನ ಅಭಿಮಾನ - ಭಕ್ತಿಯಿಂದ ಕೆಲವರು" ಮಾತಾಜಿ ಎಲ್ಲಾ ಮಠಾಧೀಶರೂ ಕಂಡರೂ ಕಾಣದಂತೆ ಸುಮ್ಮನೆ ಇರುವಾಗ ನೀವೇಕೆ ಸತ್ಯ ಹೇಳಿ ಕೆಟ್ಟವರಾಗುತ್ತೀರಿ?" ಎಂದು ಕರುಳು ಮಿಡಿಸಿಕೊಂಡು ಹೇಳುವರು. ಮತ್ತೊಬ್ಬ ಪ್ರೌಢ ಸಾಧಕರು ಹೇಳಿದರು, "ನೀವು ಹೇಳುವುದು ಪ್ರತಿಯೊಂದು ಅಕ್ಷರವೂ ಸತ್ಯ. ನಮಗೆ ರೂಢಿಯಲ್ಲಿದ್ದ ಕೆಲವು ಆಚರಣೆ ಕಂಡು, ಬಸವ ಧರ್ಮದ ಪ್ರಕಾರ ಇದು ಹೇಗೆ ಸರಿ? ಎಂದು ದ್ವಂದ್ವ ಕಾಡುತ್ತಿತ್ತು. ನಿಮ್ಮ ಮಾತು ಕೇಳಿದಾಗ, ಬರಹ ಓದಿದಾಗ ನಮ್ಮ ಅಂತರಂಗದ ಅಳಲಿಗೆ ಧ್ವನಿ ಕೊಟ್ಟಂತಾಯಿತು. ನಿಮ್ಮಂತಹವರೂ ಸತ್ಯವನ್ನು ಪ್ರತಿಪಾದಿಸದಿದ್ದರೆ ಇನ್ನು ಸತ್ಯವನ್ನು ಹೇಳುವವರು, ಹೇಳಬೇಕಾದವರು ಯಾರು? ನಾವು ನಿಮ್ಮ ಹಿಂದಿದ್ದೇವೆ."

ಇಂಥವರ ಮಾತು ಕೇಳಿದಾಗ "ನಿಜ, ಸತ್ಯ ಹೇಳುವವರ ಅಗತ್ಯ ಬಹಳವಿದೆ." ಎಂದು ದೃಢವಾಗುವುದು.

ಒಬ್ಬ ರಾಜನಿದ್ದ. ಅವನಿಗೆ ಬಟ್ಟೆಯ ಹುಚ್ಚು ಬಹಳ ; ಒಬ್ಬೊಬ್ಬರಿಗೆ ಒಂದು ಹುಚ್ಚು. ಗೃಹಸ್ಥರಿಗೆ ಹೆಣ್ಣು-ಮಣ್ಣು-ಹೊನ್ನಿನ ಹುಚ್ಚು ಕೆಲವು ಸನ್ಯಾಸಿಗಳಿಗೂ ಹೊನ್ನು-ಮಣ್ಣಿನ ಹುಚ್ಚು ಹೆಣ್ಣು-ಮಣ್ಣು-ಹೊನ್ನಿನ ಹುಚ್ಚು ಗೆದ್ದವರೂ ಸಹ ಕೆಲವೊಮ್ಮೆ ಕೀರ್ತಿಯ ಹುಚ್ಚಿಗೆ ಬಲಿಯಾಗುವುದುಂಟು. ಪ್ರಚಾರ, ಕೀರ್ತಿ ಪಡೆದು ಕೊಳ್ಳಲು ಯಥೇಚ್ಛವಾಗಿ ಹಣವನ್ನು ವ್ಯಯಿಸುವುದುಂಟು. ಹಾಗೆ ಆ ರಾಜನಿಗೆ ಬಟ್ಟೆಯ ಹುಚ್ಚು ; ಇನ್ನೂ ಚೆನ್ನಾಗಿರಬೇಕು. ಇನ್ನೂ ಚೆನ್ನಾಗಿರಬೇಕು ಎಂದು ಬಗೆಬಗೆಯ ಪ್ರಯೋಗವನ್ನು ಮಾಡಿಸುತ್ತಲಿದ್ದ. ರಾಜ್ಯದ ಹಿತವನ್ನೂ ಕಡೆಗಣಿಸಿ ಬಟ್ಟೆ ನೇಯಿಸುವ ಪ್ರಯೋಗದಲ್ಲೇ ತಲ್ಲೀನನಾಗಿರುತ್ತಿದ್ದ. ದಿನದಿನಕ್ಕೂ ರಾಜ್ಯದ ಪರಿಸ್ಥಿತಿ ಹದಗೆಡುತ್ತಿರುವುದನ್ನು ಕಂಡು ಪ್ರಧಾನಿ ಚಿಂತಾಕ್ರಾಂತನಾದ. ಒಮ್ಮೆ ಒಬ್ಬ ನೇಕಾರ ಬಂದ. ಕಣ್ಣಿಗೆ ಕಾಣದಿರುವಷ್ಟು ತೆಳ್ಳನೆಯ ಬಟ್ಟೆ ನೇದು ಕೊಡುತ್ತೇನೆ ಒಂದು ಲಕ್ಷ ವರಹಗಳಿಗೆ ಎಂದ. ರಾಜನು ಮುಂಗಡ ಕೊಟ್ಟ. ಎರಡು ತಿಂಗಳಾಯಿತು. ಆ ವಸ್ತ್ರವನ್ನುಟ್ಟು ರಾಜಧಾನಿಯಲ್ಲಿ ಮೆರವಣಿಗೆ ಮಾಡಿಸಿಕೊಳ್ಳಲು ಎಲ್ಲ ಸಿದ್ಧತೆ ನಡೆದವು. ನೇಕಾರ ಬಂದ; ಕೌಪಿನ ಬಿಟ್ಟು ಉಳಿದ ಬಟ್ಟೆ ತೆಗೆಸಿ, ಧೋತ್ರ ಉಡಿಸಿದಂತೆ ಮಾಡಿದ, ಮೇಲೆ ಅಂಗಿ ಹಾಕಿದಂತೆ ಮಾಡಿದ. ರಾಜ ಕೇಳಿದ "ಬಟ್ಟೆ ಕಾಣುತ್ತಿಲ್ಲವಲ್ಲಾ?" ಅಹುದು; ವಿಶೇಷ ವಸ್ತ್ರವಿದು ತೊಟ್ಟವರ ಕಣ್ಣಿಗೆ ಕಾಣದು, ನೋಡುವವರ ಕಣ್ಣಿಗೆ ಕಾಣುತ್ತದೆ. ಅಲ್ಲವೇ ಪ್ರಧಾನಿಗಳೇ ?" ಎಂದ ನೇಕಾರ.

"ಅಹುದು...ಬಹಳ ಚೆನ್ನಾಗಿದೆ. ಹಿಂದೆಂದೂ ಇಂಥ ಬಟ್ಟೆ ತೊಟ್ಟಿಲ್ಲ." ರಾಜನಿಗೆ ಖುಷಿಯಾಯಿತು. ಠೀವಿಯಿಂದ ಪಲ್ಲಕ್ಕಿಯಲ್ಲಿ ಕೂತ. ಎಲ್ಲರೂ ಬಂದು ರಾಜನ ದರ್ಶನ ಪಡೆಯಬೇಕು ಎಂದು ಸುಗ್ರೀವಾಜ್ಞೆ ವಿಧಿಸಿದ. ಜನರು ನಾಚಿ ನೀರಾದರು. ಆದರೆ ಯಾರು ಹೇಳಬೇಕು? ತಲೆ ತಗ್ಗಿಸಿದರು, ಮುಖ ತಿರುವಿಕೊಂಡರು, ಆದರೆ ರಾಜನಿಗೆ ಹೇಳಲು ಯಾರಿಗೂ ಧೈರ್ಯವಿಲ್ಲ; ಜೊತೆಗೆ ಕಾವಲು ಭಟರು ಬೇರೆ ; ಏನು ಹೇಳಿದರೆ ಏನು ಮಾಡುವರೋ ? ನಗಲೂ ಧೈರ್ಯವಿಲ್ಲ. ಮೆರವಣಿಗೆ ಸಾಗಿತ್ತು. ತಾಯಿಯ ಕಂಕುಳಲ್ಲಿದ್ದ ಒಂದು ಮಗು ಹೇಳಿತು, " ಅಮ್ಮಾ ಅಮ್ಮಾ ; ರಾಜ ಬೆತ್ತಲೇ ಇದ್ದಾನೆ ಚೂರೂ ಬಟ್ಟೆಯಿಲ್ಲ. ನಾಚಿಕೆಗೇಡು" ಎಂದಿತು. ತಾಯಿ ಗಾಬರಿಯಿಂದ ಬಾಯಿ ಮುಚ್ಚಿ ಸುಮ್ಮನಿರು

ಎಂದಳು. ರಾಜ ಗಮನಿಸಿದ. ಪ್ರಧಾನಿಯನ್ನು ಕರೆದ, ಏನು ವಸ್ತ್ರ ತೊಟ್ಟಿಲ್ಲವೇ? ಎಂದು ಕೇಳಿದ.

"ತೊಟ್ಟದ್ದೀರಿ ಮಹಾಪ್ರಭು; ತಾಯಿಯ ಹೊಟ್ಟೆಯಿಂದ ಬಂದಾಗ ಯಾವ ವಸ್ತ್ರ ತೊಟ್ಟದ್ದಿರೋ ಅದನ್ನೇ ಈಗಲೂ ತೊಟ್ಟದ್ದೀರಿ" ರಾಜ ಕೋಪ-ನಾಚಿಕೆಗಳ ಮುದ್ದೆಯಾಗಿ ಕಾರಣ ಕೇಳಿದಾಗ "ಬಟ್ಟೆಯ ಹುಚ್ಚು ಬಿಡಿಸಲು ಈ ತಂತ್ರ ಹೂಡಬೇಕಾಯಿತು" ಎಂದು ಕ್ಷಮೆ ಕೇಳಿದ. "ಮರ್ಯಾದೆ ಕಾಪಾಡಿಕೊಳ್ಳಲು ಬಟ್ಟೆಬೇಕು. ಆದರೆ ಅದರದೇ ಹುಚ್ಚಿನಲ್ಲಿ ದೇಶದ ಸಂಕಷ್ಟ ಕುರಿತು ಚಿಂತಿಸಲಿಲ್ಲ. ಆದಕ್ಕಾಗಿ ನಿಮಗೆ ಹೀಗೆ ತಿಳಿಹೇಳಬೇಕಾಯಿತು."

ಪ್ರಧಾನಿ ತಂತ್ರ ಹೂಡದಿದ್ದರೆ, ಆ ಮುಗ್ಧ ಮಗು ಸತ್ಯವನ್ನು ನುಡಿಯದೆ ಇದ್ದರೆ ರಾಜನು ಇನ್ನೆಷ್ಟು ದೂರ ಬತ್ತಲೆಯಾಗಿಯೇ ಸಾಗುತ್ತಿದ್ದನೊ! ಆದ್ದರಿಂದ ಸುಳ್ಳರ ನಾಡಾದ ಭಾರತದಲ್ಲಿ ಕೆಟ್ಟವರು ಎನ್ನಿಸಿಕೊಂಡರೂ ಚಿಂತೆಯಿಲ್ಲ ಸತ್ಯವನ್ನು ನುಡಿಯುವ ಮಂದಿಯ ಅಗತ್ಯ ಬಹಳವಿದೆ. ★

ಕಿರಣ ವಾಹಿನಿ

ಕಲ್ಯಾಣ ಕಿರಣವಿದು ಸ್ಫೂರ್ತಿಯ ಕಿರಣವು
ಮಾತಾಜಿಯ ಉರದಿಂದ ಬಂದ ದೇವ ಕಿರಣವು ॥ ಪ ॥

ಓದುಗರ ಅಜ್ಞಾನ ಕಳೆದು ಸುಜ್ಞಾನ ನೀಡ್ವ ಕಿರಣವು
ಆತ್ಮ-ಆತ್ಮಗಳ ಬೆಸೆವ ದೈವೀವಾಣಿಯಾಗಿ ಬಂದ ಕಿರಣವು
ಸತ್ಯ, ನ್ಯಾಯ, ನಿಷ್ಠೆ ಬೆಳೆಸುವ ದಿವ್ಯ ಕಿರಣವು
ಮಾತೆಯ ಪರಿಶ್ರಮದ ಕರುಣೆಯ ಕಿರಣವು ॥ 1 ॥

ಓದುಗರ ಮನ ಚುಂಬಿಸುವ ಸ್ಪೂರ್ತಿಯ ಕಿರಣವು
ಮನೆಮನೆಗೆ ಹೋಗಿ ಸುಜ್ಞಾನದ ಕಣ್ಣು ತೆರೆಸಿದ ಕಿರಣವು
ಸಾಹಿತಿಗಳ ಎಚ್ಚರಗೊಳಿಸಿದ ದಿವ್ಯ ಕಿರಣವು
ಸಂದೇಹಿಗಳಿಗೆ ಸರಿಯುತ್ತರ ನೀಡುವ ಕಿರಣವು ॥ 2 ॥

ಕಲ್ಯಾಣ ಕಿರಣವು ಆತ್ಮೋದ್ಧಾರಕ್ಕಾಗಿ ಬಂದ ಕಿರಣವು
ಸರ್ವ ಪತ್ರಿಕೆಯವರು ಕಾದು ನೋಡುವ ಕ್ರಾಂತಿ ಕಿರಣವು
ದ್ವೇಷಿಗಳಿಗೆ ಟೀಕೆಗೆ ತಕ್ಕ ಉತ್ತರ ಕೊಡುವ ಕಿರಣವು
ಸಮಾಜ ಕಲ್ಯಾಣಕೆ ತನ್ನನೇ ಅರ್ಪಿಸಿಕೊಂಡ ಕಿರಣವು ॥ 3 ॥

ಎಂಟುನೂರು ವರ್ಷದ ನಂತರ ಬಂದ ಕಿರಣವು
ಲಿಂಗಾನಂದರಲ್ಲಿ ಜನ್ಮತಳೆದು, ಕ್ರಾಂತಿ ಎಬ್ಬಿಸಿದ ಕಿರಣವು
ಮಾತಾಜಿಯೆಂಬ ಜ್ಞಾನ ಜ್ಯೋತಿ ಬೆಳಗುತಿರುವ ಕಿರಣವು
ಪುಣ್ಯವಂತರಿಗೆ ಮಾತ್ರ ದೊರೆಯುವವೀ ಸುಜ್ಞಾನ ಕಿರಣವು ॥ 4 ॥

- ಮಹಾದೇವಿ ಧಾರವಾಡ

ವೀರಶೈವ(ನಕಲಿ ಲಿಂಗಾಯತರ)ರ ವ್ಯರ್ಥ ಬೊಬ್ಬಾಟ

- ಮಾತೆ ಕಸ್ತೂರಿದೇವಿ

ನನಗೆ ಗೊತ್ತು ! ಶಿರೋನಾಮೆ ನೋಡಿದ ನೀವು ಹುಬ್ಬೇರಿಸುತ್ತೀರಿ ಎಂದು. ಆದರೆ ಇದು ಸರಿಯಾಗಿದೆ ಎಂದೇ ನನ್ನ ಭಾವನೆ. ಏಕೆಂದರೆ ಈಗಿನ ವೀರಶೈವ ಅಥವ ಮಾಜಿ ಲಿಂಗಾಯತ ಸಮಾಜದ ವಾಸ್ತವಿಕ ಸ್ಥಿತಿಗತಿಗಳನ್ನು ಗಮನಿಸುತ್ತಿರುವ ನನಗೆ ಇದೇ ಸರಿಯಾದ ತಿಳುವಳಿಕೆ ಎಂದೆನಿಸುತ್ತದೆ. ಇದಕ್ಕೆ ಕಾರಣವು ಇಲ್ಲದಿಲ್ಲ. ಈ ಲೇಖನದ ತಲೆ ಬರಹವನ್ನು ತಮಗೆ ಮನವರಿಕೆ ಮಾಡಿಕೊಡಲು ಅನುಕೂಲವಾಗುವಂಥ ಕೆಲವು ಘಟನೆಗಳನ್ನು - ಅನುಭವಗಳನ್ನು - ಚಿಂತನೆಯನ್ನು ತಮ್ಮ ಮುಂದೆ ಇಡಬಯಸುತ್ತೇನೆ.

ಸದ್ಯದ ಈ ಲೇಖನಕ್ಕೆ ಸ್ಫೂರ್ತಿ ನೀಡಿದ್ದು 10ರ ಮಾರ್ಚ್ 2001ರ ಕನ್ನಡ ಪ್ರಭ ವಾರ್ತೆ. ಪ್ರಕಟಣೆಯ ಸಾರಾಂಶ " ಮಾತೆ ಮಹಾದೇವಿಯವರು ಅಕ್ಕಮಹಾದೇವಿ ಮತ್ತು ಬಸವಣ್ಣ ಅವರ ವಚನಗಳನ್ನು ತಿರುಚಿ ಪ್ರಕಟಿಸಿರುವ ಕೆಸೆಟ್ ಮತ್ತು ಪುಸ್ತಕಗಳನ್ನು ಮುಟ್ಟುಗೋಲು ಹಾಕಿಕೊಂಡು ಅವರನ್ನು ಬಂಧಿಸಬೇಕು. " " ಸುಳ್ಳು ಹೇಳಿದರೂ ನಂಬುವಂತಿರಬೇಕು " ಎಂಬ ಮಾತೊಂದಿದೆ. ಈ ರೀತಿ ಆರೋಪಿಸಿದವರಿಗೆ ಸರಿಯಾಗಿ ಸುಳ್ಳು ಹೇಳಲು ಸಹ ಬರುತ್ತಿಲ್ಲ ಎಂದಂತಾಯಿತು. ಪಾಪ, ಇನ್ನು ವಚನ ಸಾಹಿತ್ಯದಂತಹ ದರ್ಶನ ಶಾಸ್ತ್ರದಲ್ಲಿ ಬರುವ ಸತ್ಯ ಸಂಗತಿಗಳನ್ನು ಇವರ ಮನಸ್ಸು - ಬುದ್ಧಿಗಳು ಹೇಗೆ ಗ್ರಹಿಸಿಯಾವು. ಬರೀ ಆರೋಪಿಸಿದ್ದಷ್ಟೆ ಅಲ್ಲ, ತಮ್ಮ ಸ್ಥಾನ ಮಾನವನ್ನು ಮರೆತು ಅಸಂಬದ್ಧವಾಗಿ, ದ್ವೇಷಾಸೂಯೆಗಳಿಂದ ವ್ಯಕ್ತಿಗತವಾಗಿ ಪೂಜ್ಯ ಮಾತಾಜಿಯವರನ್ನು ನಿಂದಿಸಿದ್ದು. ಅದೂ ಎಲ್ಲಿ? ವಿಧಾನ ಪರಿಷತ್ತಿನಲ್ಲಿ. ಯಾರು ? ಜನಪ್ರತಿನಿಧಿಗಳೆನಿಸಿಕೊಂಡಿರುವ ಪ್ರತಿಪಕ್ಷದ ಸದಸ್ಯರು. ಎಂದು ? ಮಾರ್ಚ್ 9, 2001 ರಂದು. ಇಷ್ಟೇ ಆಗಿದ್ದರೆ ಉದಾಸೀನ ತಾಳಬಹುದಿತ್ತು. ಪತ್ರಿಕೆಯಲ್ಲಿ ಕೆಲವು ಸದಸ್ಯರ-ಹೆಸರುಗಳು ಪ್ರಕಟವಾಗಿದ್ದವು. ಮತ್ತೆ ಇಲ್ಲಿ ಅವರ ಹೆಸರುಗಳನ್ನು ಕಾಣಿಸಿ ನನ್ನ ಲೇಖನಿಯನ್ನು ಮಲಿನಗೊಳಿಸಬಾರದೆಂದು ಬರೆದಿಲ್ಲ. ಆದರೆ ಇವರ ಈ ದುರ್ನಡತೆಗೆ ಲಿಂಗಾಯತ ಸಮಾಜದ ಕೆಲವು ಮಠಾಧೀಶರ ಕೈವಾಡ ಮತ್ತು ಪ್ರಚೋದನೆ ಇದೆ ಎಂಬ ಕೂಗು ಬೇರೆ ಸಾರ್ವಜನಿಕರಿಂದ ಕೇಳಿ ಬರುತ್ತಿದೆ. ಇದು ನಿಜಕ್ಕೂ ಸಮಾಜಕ್ಕೆ ಗೌರವ ತರುವ ಸಂಗತಿಯೆ ? ಎಂಬ ಬಗ್ಗೆ ಚಿಂತಿಸೋಣ. ಇದಕ್ಕೆ ಪೂಜ್ಯ ಮಾತಾಜಿಯವರ ಪ್ರತಿಕ್ರಿಯೆ ಹೀಗಿದೆ :-

" ಇದರಿಂದ ನಾನಾಗಲಿ, ನಮ್ಮ ಶಿಷ್ಯ - ಭಕ್ತವರ್ಗವಾಗಲಿ ವಿಚಲಿತರಾಗಿಲ್ಲ. ಅಪ್ಪ ಬಸವಣ್ಣನವರು ಹೇಳುವುದಿಲ್ಲವೆ ?

ಆರು ಮುನಿದು ನಮ್ಮನೇನು ಮಾಡುವರು ?
ಊರು ಮುನಿದು ನಮ್ಮನೆಂತು ಮಾಡುವುದು ?
ನಮ್ಮ ಕುನ್ನಿಗೆ ಕೂಸ ಕೊಡಬೇಡ.
ನಮ್ಮ ಸೊಣಗಂಗೆ ತಳಿಗೆಯಲಿಕ್ಕ ಬೇಡ !
ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲುದೆ
ನಮಗೆ ನಮ್ಮ ಲಿಂಗದೇವಯ್ಯನುಳ್ಳನ್ನಕ್ಕರ ? - ಬ. ಷ. ದೀ - 749

ಅಂದ ಹಾಗೆ ರಾತ್ರಿ ಹೊತ್ತು ನಿದ್ದೆಗಣ್ಣಿನಲ್ಲಿ ಮಠಾಧೀಶರು ಕನವರಿಸಿದ್ದನ್ನು ಅವರ ಹಿಂಬಾಲಕರಾದ ಪ್ರಜಾ ಪ್ರತಿನಿಧಿಗಳು ಕೂಗಿ ಹೇಳಿ ತನ್ನ ಇರುವನ್ನು ಸ್ಪಷ್ಟಪಡಿಸಿದ್ದಾರೆ ಎಂದಾಯಿತು. ಬಸವ ವಿರೋಧಿಗಳ ಬಗ್ಗೆ ಕೆಡು ನುಡಿಯಾಡಲು ಬಯಸದ ಪೂಜ್ಯ ಮಾತಾಜಿಯವರು ತಮ್ಮ ನಿಲುವನ್ನು ಹೀಗೆ ಸ್ಪಷ್ಟಪಡಿಸುತ್ತಾರೆ. ನಮ್ಮಂಥವರಿಗೆ ಶಾಂತಿ ಮಂತ್ರ ಬೋಧಿಸುತ್ತಾರೆ.

ಕಾಣದ ಠಾವಿನಲ್ಲಿ ಜರಿದರೆಂದರೆ ಕೇಳಿ ಪರಿಣಾಮಿಸಬೇಕು
ಅದೇನು ಕಾರಣವೆಂದಡೆ
ಕೊಳ್ಳದೆ ಕೊಡದೆ ಅವರಿಗೆ ಸಂತೋಷವಹುದಾಗಿ !
ಎನ್ನ ಮನದ ತದ್ದ್ವೇಷವಳಿದು
ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು ಲಿಂಗದೇವಾ ! - ಬ. ವ. ದೀ 252

ಎಂದು ಅತುಳವಾದ ಸಂಯಮವನ್ನು ಪ್ರದರ್ಶಿಸುತ್ತಾರೆ. ಬಸವ ತತ್ತ್ವದ ಅನುಷ್ಠಾನದಲ್ಲಿರುವ ಪೂಜ್ಯರು ಇಂಥ ಘಟನೆಗಳಿಂದ ಧೃತಿಗೆಡದ ಸಮಚಿತ್ತತೆಯನ್ನು ಮೈಗೂಡಿಸಿಕೊಂಡಿದ್ದಾರೆ. ಆದರೆ ನನಗೆ ಈ ರೀತಿ ಇರಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಒಂದು ಲೋಕೋಕ್ತಿ ಹೀಗಿದೆ. '' ಒಬ್ಬ ವೈದ್ಯ ತಾನು ನೀಡುವ ಚಿಕಿತ್ಸೆಯಲ್ಲಿ ಲೋಪವೆಸಗಿದರೆ ಒಬ್ಬ ರೋಗಿಗೆ ಮಾರಕವಾದೀತು. (ಅಂದರೆ ಸತ್ತಾನು) ಆದರೆ ಒಬ್ಬ ಗುರು - ಶಿಕ್ಷಕ ತಪ್ಪು ಮಾರ್ಗದರ್ಶನ ನೀಡಿದರೆ ಒಂದು ಬೃಹತ್ ಜನಾಂಗವೆ ಅದರಿಂದ ನಿರ್ವೀರ್ಯವಾದೀತು (ದುರ್ಬಲವಾದೀತು) ''. ಅಂದಂತೆ ಇಂದು ಬೇರೆ ಯಾವ ಜಾತಿ, ಸಮಾಜ, ಧರ್ಮಗಳಲ್ಲಿಯೂ ಇಲ್ಲದಷ್ಟು ಮಠಾಧೀಶರನ್ನು ಹೊಂದಿರುವ ಲಿಂಗಾಯತ ಸಮಾಜದಲ್ಲಿ ಈಗ ಆಗಿರುವುದು - ಆಗುತ್ತಿರುವುದು ಏನು ? ಲಿಂಗಾಯತರ ಜೀವಾಳವಾದ ವಚನ ಸಾಹಿತ್ಯವನ್ನು ಇಷ್ಟು ದಿನ ಕಡೆಗಣಿಸಿ, ಸಂಸ್ಕ ತ ಶಾಲೆ - ಕಾಲೇಜುಗಳ ಬೆನ್ನು ಹತ್ತಿ, ಅಲ್ಲಿಂದ ತಂದ ಹಳಸಲು ಜ್ಞಾನವನ್ನು ನಮ್ಮ ಮುಂದೆ ಹರಡಿ, ಸಮಾಜವನ್ನು ದಿಕ್ಕು ತಪ್ಪಿಸುತ್ತಿರುವವರು ಯಾರು ? ಎಂಬ ಬಗ್ಗೆ ಮೇಲಿನ ಲೋಕೋಕ್ತಿಯನ್ನು ಆಧಾರವಾಗಿಟ್ಟುಕೊಂಡು ಚಿಂತಿಸೋಣ.

ಬಾಲ್ಯದ ದಿನಗಳು ; ನಮ್ಮದೊಂದು ಆಟದ ಗುಂಪಿತ್ತು. ಅದರಲ್ಲಿ ಎಲ್ಲಾ ಜಾತಿ, ಮತ, ಪಂಥ, ಧರ್ಮದವರು ಲಿಂಗ ಭೇದವನ್ನು ಮರೆತು ಒಂದಾಗಿ ಸೇರಿ ಆಟ ಆಡುತ್ತಿದ್ದೆವು. ಇವರಲ್ಲಿ ನನ್ನ ಸಹಪಾಠಿ ಒಬ್ಬನಿದ್ದ. ಕಾಕತಾಳೀಯವೋ ಎಂಬಂತೆ ಅವನ ಹೆಸರು ರೇಣುಕ. ಆಟದ ಮಧ್ಯೆ ಮತ್ತೊಬ್ಬ ಸಹಪಾಠಿ, ಕುಹಕಿ ರಾಮ ಅವನನ್ನು ಈ ರೀತಿ ಛೇಡಿಸಿದ. '' ಇವರಿಗೆ ದೇವರಿಲ್ಲ - ದಿಂಡರಿಲ್ಲ; ಎದೆ ಮೇಲೆ ಕಲ್ಲು ಕಟ್ಟಿಕೊಂಡಿದಾರೆ ''. ಈ ಮಾತುಗಳು ರೇಣುಕನ ಮೇಲೆ ಏನು ಪರಿಣಾಮ ಬೀರಬಹುದು, ಅವನು ಏನು ಉತ್ತರಿಸಬಹುದು ಎಂದು ನೋಡಿದಾಗ ಚಿಕ್ಕಮುಖ ಮಾಡಿಕೊಂಡು ಅಪಮಾನಿತನಾಗಿ, ತಲೆ ಬಗ್ಗಿಸಿಕೊಂಡು ಗುಂಪನ್ನು ಬಿಟ್ಟು ಅವನು ಮನೆಗೆ ಹೊರಟು ಹೋದ. ಮತ್ತೆ ಆಟಕ್ಕೆ ಬರಲೇ ಇಲ್ಲ. ಸರಿ, ನನಗಿನ್ನು ಆಗ 8-10 ವರ್ಷ. ಈ ಘಟನೆಯ ನಂತರ ನನ್ನ ಮನಸ್ಸಿನಲ್ಲಿ ವಿಚಿತ್ರವಾದ ಕೊರೆತ ಪ್ರಾರಂಭವಾಗಿ ಲಿಂಗಾಯತರು ಎದೆ ಮೇಲೆ ಕಟ್ಟಿಕೊಳ್ಳುವ ಈ ವಿಶೇಷ ಕಲ್ಲಿನ ಬಗ್ಗೆ ಸಹಜ ಕುತೂಹಲ ಮೂಡಿತು. ಅಂದಿನಿಂದಲೂ ನಾನು ಈ ರೀತಿ ಯೋಚಿಸುತ್ತಿದ್ದೆ.

ಎದೆ ಮೇಲೆ ಕಲ್ಲು ಕಟ್ಟಿಕೊಳ್ಳುವುದು ಅಂದರೆ ಏನು ?

'' ಬೇಕಾದಷ್ಟು ಅಮೂಲ್ಯವಾದ ಆಭರಣಗಳಿರುವಾಗ ಅದರೊಂದಿಗೆ ಲಿಂಗಾಯತರು ಈ ಕಲ್ಲನ್ನು ಏಕೆ ಕಟ್ಟಿಕೊಳ್ಳುತ್ತಾರೆ . ? ''

''ರಾಮ 'ಕಲ್ಲು' ಎಂದು ಛೇಡಿಸಿದಾಗ ರೇಣುಕ ಏಕೆ ಹಾಗೆ ಅಪಮಾನವಾದಂತೆ ತಲೆ ಬಗ್ಗಿಸಿಕೊಂಡು ಹೋದ ? ''

''ರಾಮನಿಗೆ ಅವನು ಸರಿಯಾದ ಎದೆಗಾರಿಕೆಯ ಉತ್ತರವನ್ನು ಏಕೆ ಕೊಡಲಿಲ್ಲ ?''

ಅವನ ತಾಯಿ-ತಂದೆ -ಗುರುಗಳು ಈ ಬಗ್ಗೆ ಅವನಿಗೆ ಏನನ್ನೂ ತಿಳಿಸಿಕೊಟ್ಟಿರಲಿಲ್ಲವೆ ? ''

''ಕಂಡವರ ಕೈಯಲ್ಲಿ ಹೀಗೆ ಅನ್ನಿಸಿಕೊಂಡು ಅವಮಾನಿತರಾಗಿ ಇವರು ಬದುಕುತ್ತಿರುವುದು ಏಕೆ ?''

ಈ ಪ್ರಶ್ನೆಗಳು ನನ್ನ ಮನದ ಮೂಲೆಯಲ್ಲಿ ಸುಪ್ತವಾಗಿ ಅಡಗಿ ಕುಳಿತಿದ್ದವು. ಈ ಬಗ್ಗೆ ಯಾರನ್ನಾದರೂ

ಕೇಳಿದರೆ ಯಾರೂ ತೃಪ್ತಿಕರವಾದ ಉತ್ತರ ನೀಡುತ್ತಿರಲಿಲ್ಲ. ನನ್ನ ಜೀವನದ 22-23 ವರ್ಷಗಳ ದೀರ್ಘ ಕಾಲದ ನಂತರ ಮೇಲಿನ ಪ್ರಶ್ನೆಗಳಿಗೆ ಸರಿಯಾದ, ತಾತ್ತ್ವಿಕವಾದ, ಸರಳ ಸುಂದರವಾದ, ಮನ - ಬುದ್ಧಿ - ಭಾವ ತಣಿಯುವಂತೆ ಉತ್ತರ ಕೊಟ್ಟದ್ದು - ಪರಿಹಾರ ತೋರಿಸಿದ್ದು ಯಾರು ಗೊತ್ತೆ ? ಪೂಜ್ಯ ಶ್ರೀ ಬಸವಾತ್ಮಜೆ ಯವರ ಬಸವ ವಚನ ದೀಪ್ತಿ

ಬಸವ ವಚನ ದೀಪ್ತಿಯಲ್ಲಿ ತಮ್ಮ ಅನುಯಾಯಿಗಳ ಬಗ್ಗೆ ಧರ್ಮಪಿತರು ಹೀಗೆ ಕೊಂಡಾಡುತ್ತಿದ್ದಾರೆ. ಆತ್ಮ ಬಲವನ್ನು ತುಂಬುತ್ತಿದ್ದಾರೆ.

ಗೀತವ ಬಲ್ಲಾತ ಜಾಣನಲ್ಲ ; ಮಾತು ಬಲ್ಲಾತ ಜಾಣನಲ್ಲ
ಜಾಣನು ಜಾಣನು -
ಆತ ಜಾಣನು ; ಲಿಂಗವ ನೆರೆ ನಂಬಿದಾತ ;
ಆತ ಜಾಣನು ; ಜಂಗಮಕ್ಕೆ ಧನವ ಸವೆಸುವಾತ ;
ಆತ ಜಾಣನು ; ಜವನ ಬಾಯಲು ಬಾಲವ ಕೊಯ್ದು ಹೋದಾತ :
ಆತ ಜಾಣನು ; ನಮ್ಮ ಲಿಂಗದೇವನ ಶರಣನು ! - ಬ. ವ. ದೀ - 155

ಈ ಪುಸ್ತಕ ಜನ್ಮ ತಾಳಿ 4-5 ವರ್ಷಗಳಾಗುತ್ತ ಬಂತು. ಆದರೂ ಎಷ್ಟು ಜನ ಲಿಂಗವಂತರ ಮಕ್ಕಳಿಗೆ ತಾವು ಕಟ್ಟಿಕೊಳ್ಳುವ ಇಷ್ಟಲಿಂಗದ ಬಗ್ಗೆ ಜ್ಞಾನವಿದೆ. ತಾಯಿ ತಂದೆಯರಿಗೆ ಇದ್ದರಲ್ಲವೆ ಮಕ್ಕಳಿಗೆ ತಿಳಿಸುವುದು. ಸಂಪ್ರದಾಯವೆಂಬಂತೆ, ಯಾಂತ್ರಿಕವಾಗಿ ಲಿಂಗವನ್ನು ಧರಿಸುತ್ತಾರೆ. ಮತ್ತೆ ಕೆಲವರು ಇದರ ಬಗ್ಗೆ ವ್ಯರ್ಥ ಭೀತಿ ಬೆಳೆಸಿಕೊಂಡಿದ್ದಾರೆ. ಇನ್ನು ಕೆಲವರು ಇದರ ಚಿಂತೆ ಏಕೆಂದು ಗೋಡೆಯ ಮೇಲೋ ಪೂಜಾಗೃಹದಲ್ಲಿಯೋ ಇರಿಸಿ ನಿರ್ಲಿಪ್ತರಾಗಿದ್ದಾರೆ. ಇಷ್ಟಲಿಂಗದ ಪ್ರಾಥಮಿಕ ಜ್ಞಾನವು ಇಲ್ಲದ ಲಿಂಗಾಯತ ಸಮಾಜದ ಅಜ್ಞಾನದ ದುರಂತಕ್ಕೆ ಕಾರಣರಾರು ?

ಈಗ ಅನ್ನಿಸುತ್ತಿದೆ. ''ಬಸವ ವಚನ ದೀಪ್ತಿ''ಯಂತಹ ಪುಸ್ತಕ ಮೊದಲೇ ಬೆಳಕು ಕಂಡಿದ್ದರೆ ಚನ್ನಾಗಿತ್ತು. ಇದರಿಂದ ರೇಣುಕನಂಥವರು ಅಪಮಾನಿತರಾಗುವುದು ತಪ್ಪುತ್ತಿತ್ತು. ಇತರರ ಮುಂದೆ ತಲೆ ಎತ್ತಿ ಬಾಳಲು ಸಹಾಯವಾಗುತ್ತಿತ್ತು. ಆದರೆ ಇದು ಇಂದಿಗೂ ಏಕೆ ಸಾಧ್ಯವಾಗುತ್ತಿಲ್ಲ ? ಪೂಜ್ಯ ಮಾತಾಜಿಯವರಿಗಿಂತಲೂ ವಯಸ್ಸಿನಲ್ಲಿ, ಜ್ಞಾನದಲ್ಲಿ, ಬುದ್ಧಿಯಲ್ಲಿ, ಅನುಭವದಲ್ಲಿ ಹಿರಿಯರಾದ ತಲೆನರೆತ, ನಡುಬಾಗಿದ, ದುಪ್ಪಟ್ಟು ಆಸ್ತಿ ಹಣ ಅಂತಸ್ತು, ಜನಬೆಂಬಲವಿರುವ ಮಠಾಧೀಶರು ಈ ಸಮಾಜದಲ್ಲಿ ಎಷ್ಟು ಜನ ಇಲ್ಲ ?! ಇದುವರೆಗೂ ಅವರಲ್ಲಿ ಯಾರೂ ಇಂಥ ಪ್ರಯತ್ನವನ್ನು ಏಕೆ ಮಾಡಿಲ್ಲ ? ತಡವಾದರೂ ಚಿಂತೆಯಿಲ್ಲ. ಅಪರೂಪವೋ ಎಂಬಂತೆ ನಿರಂತರವಾದ ವಚನ ಸಾಹಿತ್ಯದ ಅವಿಶ್ರಾಂತ ಅಧ್ಯಯನ - ಸಂಶೋಧನೆಯ ಫಲವಾದ ಬಸವ ವಚನ ದೀಪ್ತಿಯನ್ನು ಪೂಜ್ಯ ಮಾತೆಯವರು ಹೊರ ತಂದಾಗ '' ನಮ್ಮ ಸಮಾಜಕ್ಕೆ ಕೀರ್ತಿ ತರುವ ಕೆಲಸವಾಗಿದೆ '' ಎಂದು ಸಂತೋಷ ಪಡುವುದು ಬಿಟ್ಟು ಮತ್ಸರ, ದ್ವೇಷದಿಂದ ಸಮಾಜದಲ್ಲಿ ಗೊಂದಲವನ್ನು ಬಿತ್ತಿ ಬೆಳೆಯುವುದು ಏಕೆ ? ಸಬಲ - ಸಹೃದಯ - ಚಿಂತನಶೀಲ ಜನಾಂಗವೊಂದನ್ನು ಸೃಷ್ಟಿಸಲು ಶಕ್ತಿಯಿಲ್ಲದ ಇವರು ಸ್ವಾರ್ಥದಿಂದ ಶ್ರಮಗಳ್ಳರಾಗಿದ್ದಾರೆ. ಇಂಥವರು ಪೂಜ್ಯ ಮಾತಾಜಿಯವರ ಕಾರ್ಯಗಳನ್ನು ವಿರೋಧಿಸುವದೇಕೆ ?

ಜನ ಸಾಮಾನ್ಯರ ವಿಷಯ ಒತ್ತಟ್ಟಿಗಿರಲಿ. ಈ ಸಮಾಜದ ಗಣ್ಯರು, ಸುಶಿಕ್ಷಿತರೂ, ಸಾಹಿತಿಗಳು, ಮಠಾಧೀಶರಿಗೂ ಸಹ ಇಷ್ಟಲಿಂಗದ ಬಗ್ಗೆ ಸರಿಯಾದ ಪರಿಕಲ್ಪನೆ - ಅರಿವು ಇಲ್ಲ ಎಂದರೆ ನೀವು ನಂಬುತ್ತೀರಾ ? ನಂಬಲೇಬೇಕು. ಏಕೆಂದರೆ ವಿದೇಶಗಳಿಗೆ ಇವರು ಹೋದಾಗ, ಅಲ್ಲಿಯ ಜನ ಪ್ರಶ್ನೆ ಕೇಳಿದಾಗ ಇಷ್ಟಲಿಂಗದ ಬಗ್ಗೆ ಇವರು ಕೊಟ್ಟಿರುವ ಉತ್ತರ ಹೀಗಿದೆ.

"It is a type of Stone "

"Sthavaralinga and Istalinga are same.
There is no any difference between them ".

ಹೀಗೆ ಹೇಳಲು ಇವರೇ ನಮಗೆ ಬೇಕಾಗಿತ್ತೆ ? ತಮ್ಮ ನೆಲದಲ್ಲಿ ಲಿಂಗದೇವನ ಮರ್ಯಾದೆ ಕಳೆದಿರುವ ಇವರು ಪರದೇಶದಲ್ಲೂ ಮಾನ ತೆಗೆದು ತಮ್ಮ ಅಜ್ಞಾನವನ್ನು ಪ್ರದರ್ಶಿಸಿ ಬಂದಿರುವ ಸಂಗತಿಗಳು ಸಾಕಷ್ಟು ವರದಿಯಾಗಿವೆ. ಈ ಬಗ್ಗೆ ಪ್ರಾಮಾಣಿಕವಾಗಿ ಚಿಂತಿಸಬೇಕು - ತಿಳಿದುಕೊಳ್ಳಬೇಕು ಎಂಬ ಕನಿಷ್ಠ ಸಂಯಮ - ತಾಳ್ಮೆಯಿಂದ ಕೂಡಿದ ಅಧ್ಯಯನಶೀಲತೆಯೂ ಇವರಿಗಿಲ್ಲವೆ ?

ವಚನಗಳು ಕೂಲಿ ಪಂಡಿತರು ಬರೆದ ಬಾಡಿಗೆ ಮಾತುಗಳಲ್ಲ. ಅವು ಇಹ - ಪರದ ಬದುಕನ್ನು ಸರಳ ಸುಂದರವಾಗಿ ಪ್ರತಿಬಿಂಬಿಸುವ ಜೀವನಾನುಭವದ ರಸಘಟ್ಟ ಎಂದು ಈ ಜನ ಏಕೆ ಅರ್ಥಮಾಡಿಕೊಳ್ಳುತ್ತಿಲ್ಲ ? ಬೇರೆ ಯಾವ ಜಾತಿ, ಮತ, ಪಂಥ, ಧರ್ಮ ಭಾಷೆಗಳವರಿಗೂ ಲಭ್ಯವಿಲ್ಲದ ಅತ್ಯಮೂಲ್ಯವಾದ ಕೊಡುಗೆಗಳಾದ ಮಹಾ ಭಾಗ್ಯ ಗುರು ಬಸವಣ್ಣ ; ಇಂಥ ಮಹಾಗುರುವಿನಿಂದ ಉದಯವಾದ ಇಷ್ಟಲಿಂಗ ಮತ್ತು ಚಿನ್ನದ ಗಣಿಯಂತಿರುವ ವಚನ ಪರುಷ ನಮ್ಮದಾಗಿದೆ ಎಂದು ಇವರೇಕೆ ಎದೆತಟ್ಟಿಕೊಂಡು ಹೇಳಲು ಹಿಂಜರಿಯುತ್ತಿದ್ದಾರೆ ?

ಧರ್ಮಪಿತರ ಸತತವಾದ ಚಿಂತನೆ - ಸಾಧನೆಯ ಕಾರ್ಯಾಗಾರದಲ್ಲಿ ಸಾಮಾಜಿಕವಾಗಿ, ತಾತ್ವಿಕವಾಗಿ, ಧಾರ್ಮಿಕವಾಗಿ, ಆಧ್ಯಾತ್ಮಿಕವಾಗಿ ರೂಪು ತಳೆದ ಇಷ್ಟಲಿಂಗವನ್ನು ನೋಡುತ್ತಾ - ಪೂಜಿಸುತ್ತಾ ಅದರ ಭಾವವನ್ನು ಅನುಭವಿಸುತ್ತಾ ಆನಂದಿಸುವುದು ಅದೆಷ್ಟು ಸೊಗಸು ! ಅದಕ್ಕೆ ಇರಬೇಕು ಷಣ್ಮುಖ ಸ್ವಾಮಿಗಳು ಹೀಗೆ ಉದ್ಗರಿಸಿದ್ದು !!

ಜಗವನೊಳಕೊಂಡ ಲಿಂಗವು
ಸೊಗಯಿಸಿರ್ದೆನ್ನ ಕರಸ್ಥಲಕ್ಕೆ ಬಂದಿರಲು
ಕಂಡು ಹಗರಣವಾಯಿತ್ತೆನಗೆ !
ಗುರು ಲಿಂಗ ಜಂಗಮ ಸ್ವರೂಪವಾಗಿ
ಮೂರ್ತಿಗೊಂಡಿತು ನೋಡಾ !
ಆಹಾ ಎನ್ನ ಪುಣ್ಯವೇ ! ಆಹಾ ಎನ್ನ ಭಾಗ್ಯವೇ ?!
ಆಹಾ ಅಖಂಡೇಶ್ವರಾ !
ನಿಮ್ಮ ಘನವ ಕಂಡು ಎನ್ನ ಮನಕ್ಕೆ ಮಂಗಳವಾಯಿತ್ತು ನೋಡಾ

ಇತ್ತೀಚೆಗೆ ನನಗೊಂದು ಪ್ರಬಲವಾದ ಅನುಮಾನ ಕಾಡುತ್ತಿದೆ. ಅದನ್ನು ಒಂದು ದೃಷ್ಟಾಂತದ ಮೂಲಕ ವಿವರಿಸುತ್ತೇನೆ. ನಾವು ಹಿಂದು - ವೀರಶೈವ - ಲಿಂಗಾಯತರೆಂದು ಹೇಳಿಕೊಳ್ಳುತ್ತಿರುವ ಜನರು, ಎದೆ (?) ಮೇಲೆ ಲಿಂಗ ಧರಿಸಿಕೊಂಡು ಇತ್ತ ಬಸವ ತತ್ವದಂತೆಯೂ ನಡೆಯದೆ, ಅತ್ತ ವೀರಶೈವ ಮತದಂತೆಯೂ ವರ್ತಿಸದೆ, ಏಕ ಕಾಲದಲ್ಲಿ ಲಿಂಗಾಯತ ಮತ್ತು ವೀರಶೈವ ಎರಡೂ ಸಮಾಜಕ್ಕೂ ದ್ರೋಹ ಬಗೆಯುತ್ತಿರುವ ಇವರಿಂದ ಮುಂದೆ ಶುದ್ಧ ಲಿಂಗಾಯತರಾಗಲಿ ಅಥವ ಶುದ್ಧ ವೀರಶೈವರಾಗಲಿ ಏನನ್ನು ನಿರೀಕ್ಷಿಸಬೇಕು ? ಇವರು ಹೀಗೇಕೆ ತಾವು ಆತ್ಮವಂಚನೆ ಮಾಡಿಕೊಂಡು ಸಮಾಜವನ್ನು ದಿಕ್ಕು ತಪ್ಪಿಸುತ್ತಿದ್ದಾರೆ ?

ಒಂದು ದಿನ ಪ್ರಶಸ್ತಿ ವಿಜೇತ ಶಿಕ್ಷಕರೊಬ್ಬರು ನಮ್ಮಲ್ಲಿಗೆ ಬಂದಿದ್ದರು. ಅವರು ಸರ್ಕಾರದ ಖರ್ಚಿನಲ್ಲಿ ವಿದೇಶ ಪ್ರವಾಸಕ್ಕೆ ಹೋಗಿದ್ದರಂತೆ. ಕಾರಣ ಅಲ್ಲಿನ ಗುಡ್ಡಗಾಡು - ಬುಡಕಟ್ಟು ಜನಾಂಗವನ್ನು ಸಂದರ್ಶಿಸಿ ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕಾಗಿತ್ತಂತೆ. ಸರಿ. ಅದರಂತೆ ತಯಾರಿಸಿದ ವರದಿ ಮತ್ತು ಬುಡಕಟ್ಟು ಜನಾಂಗದ ಫೋಟೋ ಆಲ್ಬಂನ್ನು ನಮಗೆ ತೋರಿಸಿದರು. ಪಾಪ,

ಆ ಜನರಿಗೆ ಆಧುನಿಕ ನಾಗರಿಕತೆಯ ಯಾವ ವಿಷಯವು ಗೊತ್ತಿಲ್ಲ. ಅಷ್ಟೆ ಅಲ್ಲ ಬಟ್ಟೆ ಧರಿಸುವುದು ಸಹ ತಿಳಿಯದು. ಈ ಬಗ್ಗೆ ನಾನು ಸಹಜವಾಗಿ ಪ್ರಶ್ನಿಸಿದೆ.

ನಾನು : ' ಬುಡಕಟ್ಟು ಜನಾಂಗವನ್ನು ಆಧುನಿಕ ಜೀವನಕ್ಕೆ ಹೊಂದುವಂತೆ ಎಲ್ಲಾ ರೀತಿಯಿಂದಲೂ ಪ್ರಗತಿಪರವಾಗಿ ಮೇಲೆತ್ತುವ ಯಾವ ಯೋಜನೆಯನ್ನು ಅಲ್ಲಿನ ಸರ್ಕಾರ ಕೈಗೊಂಡಿಲ್ಲವೆ ? '

ಶಿಕ್ಷಕ : ಇಲ್ಲ. ಉದ್ದೇಶ ಪೂರ್ವಕವಾಗಿಯೇ ಅವರನ್ನು ಹಾಗೇ ಉಳಿಸಿಕೊಂಡು ಬಂದಿದ್ದಾರೆ.

ನಾನು : ಏಕೆ ?

ಶಿಕ್ಷಕ : ಏಕೆಂದರೆ ಮುಂಬರುವ ಸುಶಿಕ್ಷಿತ, ಪ್ರಗತಿಪರ ಜನರಿಗೆ

" ಒಂದು ಕಾಲದಲ್ಲಿ ಇಂಥ ಅಜ್ಞಾನ, ಅನಾಗರಿಕ, ಅಸಂಸ್ಕೃತ ಜನಾಂಗವೊಂದು ಇತ್ತು " ಎಂದು ಪ್ರತ್ಯಕ್ಷವಾಗಿ, ಪ್ರಾಯೋಗಿಕವಾಗಿ ತೋರಿಸಲೆಂದೇ ಅವರನ್ನು ಮೊದಲಿದ್ದಂತೆ ರಕ್ಷಿಸಿಕೊಂಡು ಬಂದಿದ್ದಾರೆ.

ಸರಿ, ಪಾಪ ಈ ಜನರಿಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪಾದೋದಕವಿಲ್ಲ, ಪ್ರಸಾದವಿಲ್ಲ. ಅದಕ್ಕೆ ಅವರು ಹಾಗಿದ್ದಾರೆ. ಆದರೆ ಇವೆಲ್ಲವೂ ಇದ್ದು ಒಂದು ಕಾಲದಲ್ಲಿ ಅತ್ಯಂತ - ಉಚ್ಛ್ರಾಯ ಸ್ಥಿತಿಯಲ್ಲಿದ್ದ ಲಿಂಗಾಯತರು ಇಂದು ಏಕೆ ಇಷ್ಟು ನಿರ್ವೀರ್ಯರಾಗಿದ್ದಾರೆ ? ಬಹುಶಃ ಮುಂಬರುವ ಸತ್ವಯುತವಾದ ಬಸವ ತತ್ವದ ರಸಪಾಕವನ್ನು ಉಂಡು ಅತ್ಯಂತ ಪ್ರಗತಿಪರವಾಗಿ ರೂಪುಗೊಳ್ಳುವ ಜನಾಂಗವೊಂದಕ್ಕೆ " ದೇವ ಬಲ, ಗುರುಬಲ, ವಚನ ಬಲ ಎಲ್ಲವನ್ನು ಕಳೆದುಕೊಂಡ ಸಮಾಜವೊಂದು ಹೀಗೂ ಇರಬಲ್ಲುದು " ಎಂದು ಪ್ರತ್ಯಕ್ಷವಾಗಿ ತೋರಿಸಲೆಂದೇ ಈ ಮಠಾಧೀಶರು ತಮ್ಮ ಅನುಯಾಯಿಗಳಿಗೆ ವಚನ ಪರುಷವು ಸೋಂಕದಂತೆ ಎಚ್ಚರವಹಿಸಿ, ಕಾಯುತ್ತಾ ರಕ್ಷಿಸಿಕೊಂಡು ಬಂದಿರಬಹುದೇ ? ಎಂದೆನಿಸುತ್ತಿದೆ. ಇವರು ತಮ್ಮೊಳಗಿನ ಸ್ವಾರ್ಥ ಮತ್ತು ಅಹಂ ತೃಪ್ತಿಗಾಗಿ, ರಕ್ಷಣಾಕಾರ್ಯವನ್ನು ಹಿಂದೆಯೂ ಮಾಡಿದ್ದಾರೆ, ಈಗಲೂ ಮಾಡುತ್ತಿದ್ದಾರೆ ಮುಂದೆಯೂ ಮಾಡುತ್ತಾರೆ. ಇದಕ್ಕೆ ಕೊನೆ ಎಂಬುದಿಲ್ಲ.

ಓ !! ಅದ್ಯಾರು ಹಸಿ ಸುಳ್ಳು ಹೇಳುತ್ತಿರುವುದು " ಪೂಜ್ಯ ಮಾತಾಜಿಯವರು ವಚನಗಳನ್ನು ತಿರುಚಿದ್ದಾರೆ, ಅಂಕಿತವನ್ನು ತಿದ್ದಿದ್ದಾರೆ. ಕೃತಿ ಚೌರ್ಯ ಮಾಡಿದ್ದಾರೆ." ಎಂದು. ಶರಣ ಬಂಧುಗಳೇ ಈ ರೀತಿ ಬೊಬ್ಬೆ ಹಾಕುತ್ತಿರುವವರನ್ನು ಕರೆದು ತನ್ನಿರಿ. ಏಕೆಂದರೆ ನಾನು ಅವರಿಗೆ ಹೇಳಬೇಕಾಗಿದೆ. "ಮಾತಾಜಿಯವರು ವಚನಗಳನ್ನು ತಿರುಚಿಲ್ಲ, ಅಂಕಿತಗಳನ್ನು ತಿದ್ದಿಲ್ಲ ಬದಲಿಗೆ ವಚನಾಂಕಿತಗಳ ಸುಧಾರಣೆ ತಂದಿದ್ದಾರೆ. " ಎಂದು. ಏಕೆ ಗೊತ್ತೆ ? ಜಗನ್ಮಾತಾ ಮಹಾದೇವಿಯಕ್ಕನವರು ನಮಗೆ ಈ ರೀತಿ ಹೇಳಿಕೊಟ್ಟಿದ್ದಾರೆ.

ಗಗನದ ಗುಣ್ಪ ಚಂದ್ರಮ ಬಲ್ಲುದಲ್ಲದೆ
ಕಡೆಯಲಿದ್ದಾಡುವ ಹದ್ದು ಬಲ್ಲುದೆ ಅಯ್ಯಾ ?
ನದಿಯ ಗುಣ್ಪ ತಾವರೆ ಬಲ್ಲುದಲ್ಲದೆ
ಕಡೆಯಲಿದ್ದ ಹೊನ್ನಾವರಿಕೆ ಬಲ್ಲುದೆ ಅಯ್ಯಾ ?
ಚನ್ನಮಲ್ಲಿಕಾರ್ಜುನಯ್ಯಾ, (ಮಹಾದೇವಿಯಕ್ಕ ಪ್ರಿಯ ಲಿಂಗದೇವಾ)
ನಿಮ್ಮ ಶರಣರ ನಿಲುವ ನೀವೇ ಬಲ್ಲಿರಲ್ಲದೆ
ಈ ಕೋಣನ ಮೈ ಮೇಲಣ ಸೊಳ್ಳೆಗಳೆತ್ತ ಬಲ್ಲವಯ್ಯಾ.

ಆದ್ದರಿಂದ ಅಜ್ಞಾನಿಗಳು, ಅರೆ ಬರೆ ಜ್ಞಾನಿಗಳು ಎಂಬ ಕೋಣಗಳ ಮೈ ಮೇಲಿರುವ ಹಿಂಬಾಲಕರು ಎಂಬ ಬಾಡಿಗೆ ಸೊಳ್ಳೆಗಳ ಆರ್ಭಟಕ್ಕೆ ನಾವು ಇನ್ನು ಮುಂದೆ ತಲೆಕೆಡಿಸಿಕೊಳ್ಳುವುದಿಲ್ಲ. ಏಕೆ

ಗೊತ್ತೆ ? ಬಸವ ರಕ್ಷೆ ಎಂಬ ಸೊಳ್ಳೆಪರದೆ ಹಾಕಿಕೊಂಡು ಲಿಂಗಧ್ಯಾನವೆಂಬ ರಗ್ಗು ಹೊದ್ದುಕೊಂಡು ಹಾಯಾಗಿ ಮಲಗುತ್ತೇವೆ. ಲಿಂಗಾಯತ ಧರ್ಮದ ಮಠಾಧೀಶರೇ, ತಮಗೂ ನಾವು ಶುಭರಾತ್ರಿಯನ್ನು ಕೋರುತ್ತೇವೆ. ಆದರೆ ಲಿಂಗದೇವನು ನಿಮ್ಮನ್ನು ನಿದ್ರಿಸಲು ಬಿಡುವುದಿಲ್ಲವಲ್ಲ. ಕಾರಣ ಪೂಜ್ಯ ಮಾತಾಜಿಯವರು ಮತ್ತೆ ಹೊಸದಾಗಿ ಆಗಾಗ ಏನಾದರೂ ಕ್ರಾಂತಿಕಾರಿ ವಿಚಾರಗಳನ್ನು ಪ್ರತಿಪಾದಿಸುತ್ತಲೇ ಇರುತ್ತಾರೆ. ಅಂಥ ವಿಚಾರಗಳನ್ನು ಪ್ರತಿಭಟಿಸಲು ತನ್ಮೂಲಕ ಪ್ರಚಾರ ಮಾಡಿಸಲು ಲಿಂಗದೇವನಿಗೆ ಮತ್ತು ಧರ್ಮಪಿತರಿಗೆ ನಿಮ್ಮ ಅಗತ್ಯ ಬಹಳವಿದೆ. ಆದ್ದರಿಂದ ತಾವು ಎಚ್ಚರವಾಗೇ ಇರಿ. ಮರೆತು ಮತ್ತೆ ಎಲ್ಲಾದರೂ ನಿದ್ದೆ ಮಾಡೀರಿ ಜೋಕೆ !! ಜೈ ಜೈ ನಾನಿನ್ನು ಬರುತ್ತೇನೆ. ಮತ್ತೊಮ್ಮೆ ಎಂದಾದರೂ ಇದೇ ರೀತಿ ಭೇಟಿಯಾಗಲು ಪೂಜ್ಯ ಮಾತಾಜಿ ನಿಮಗೂ - ನಮಗೂ ಅವಕಾಶ ಕಲ್ಪಿಸುತ್ತಿರಲಿ ಎಂದು ಆಶಿಸೋಣವಲ್ಲವೆ ?

- ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ.

(ವಿ.ಸೂ : ಪೂಜ್ಯ ಮಾತೆ ಕಸ್ತೂರಿಯವರ ಲೇಖನಗಳನ್ನು ಬಹಳ ಜನ ಮೆಚ್ಚುತ್ತಿದ್ದಾರೆ. ಆದರೆ ಅವರ ಹೆಸರಿನಲ್ಲಿ ನಾನು ಬರೆಯುತ್ತಿದ್ದೇನೆ ಎಂದು ಕೆಲವರು ಸಂದೇಹಿಸಿದ್ದಾರೆ. ಮಾತೆ ಕಸ್ತೂರಿಯವರಲ್ಲಿ ಆಕರ್ಷಣೀಯವಾದ ಮತ್ತು ವೈಚಾರಿಕ ಬರವಣಿಗೆಯ ಪ್ರತಿಭೆ ಇದ್ದು ಅವರೇ ಲೇಖನಗಳನ್ನು ಬರೆಯುತ್ತಾರೆ ಎಂದು ಸ್ಪಷ್ಟಪಡಿಸುತ್ತೇನೆ. - ಮಾತಾಜಿ)

ಐವತ್ತಾರರ ಅದಮ್ಯ ಚೇತನ
ಪೂಜ್ಯ ಶ್ರೀ ಮಾತೆ ಮಹಾದೇವಿಯವರಿಗೆ ನುಡಿ ನಮನ

ಹುಟ್ಟಿದ ನಕ್ಷತ್ರದ ಗುಣವೋ
ಬೆಳೆದ ಪರಿಸರದ ಪ್ರಭಾವವೋ
ಬಸವನ ಬಗೆಗಿರುವ ಹುಚ್ಚು
ಅಂಥ ಸಂಪ್ರದಾಯದ ಬಗೆಗಿರುವ ರೊಚ್ಚು
ಅಕ್ಕಮಹಾದೇವಿಯ ಕೆಚ್ಚು, ಜ್ವಾಲಾಮುಖಿಯಾಗಿ ಸಿಡಿಯುತ್ತಿದೆ
ಎದುರಾದುದನು ಸುಡುತಿದೆ ! ಈ ತಾಯಿಯ ಭವ್ಯ ಭವಿಷ್ಯವನು
ಲಿಂಗದೇವನೇ ಬಲ್ಲ.
ಈ ಅದಮ್ಯ ಚೈತನ್ಯದ ಚಿಲುಮೆ ಬಹುಕಾಲ ಚಿಮ್ಮುತಿರಲಿ !
ಜನ ಮನದ ಕೊಳೆಯ ತೊಳೆಯುತಿರಲಿ !

-ಅನಾಮಿಕ

ಚಿತ್ರದುರ್ಗದ ಶ್ರೀಗಳಿಗೊಂದು ಬಿನ್ನಹ

-ಕೆ. ವೀರೇಶ, ತಿಮ್ಮಪ್ಪಯ್ಯನ ಹಳ್ಳಿ

ಪೂಜ್ಯರೆ, ಈ ಹಿಂದೆ ತಾವುಗಳು ಜಗದ್ಗುರು ಪದವನ್ನು ತೆಗೆದು ಹಾಕಿ ಭಕ್ತರ ಗಮನ ಸೆಳೆದಿರಿ. ಅದು ನಮಗೆ ಅಷ್ಟಾಗಿ ನೋವಾಗಲಿಲ್ಲ. ಇವರಿಗೆ ಆ ಶಕ್ತಿ ಇರಲಾರದೆಂದೆ ಈ ತೀರ್ಮಾನಕ್ಕೆ ಬಂದಿರಬಹುದೆಂದು ಭಾವಿಸಿದೆವು. ಆದರೆ ಈಗ ತಾವುಗಳು ಸ್ವಾಮಿ ಎನ್ನುವ ಪದವನ್ನು ತೆಗೆದು ಶರಣ, ಶರಣ ಶಿವಮೂರ್ತಿ ಎಂದು ಘೋಷಿಸಿಕೊಂಡಿರಂತೆ, ಇದು ತಮಗೆ ಎಷ್ಟು ಆನಂದ ತಂದಿದೆಯೋ ನಾ ಕಾಣೆ. ಇದರಿಂದ ಸಮಾಜಕ್ಕೆ ಮುಖ್ಯವಾಗಿ ಪೀಠಾಭಿಮಾನಿಗಳಿಗೆ ಆಗುವ ನೋವನ್ನು ತಾವು ಯೋಚಿಸಬೇಕಿತ್ತು. ತಾವು ಸಮಾಜದ ಹಿತ ಅಥವಾ ಅಹಿತ ಕುರಿತು ಯಾವುದೇ ಹೇಳಿಕೆಯನ್ನು ಕೊಡಿ, ನಾವು ಬೇಡ ಎನ್ನುವುದಿಲ್ಲ. ಆದರೆ ಪೀಠದ ಘನತೆಯನ್ನು ಸ್ಥಾನವನ್ನು ಮರೆತು ತಾವು ಹೀಗೆಲ್ಲ ಘೋಷಿಸಿಕೊಳ್ಳುವುದು ಸರಿಯಲ್ಲ ಎಂದು ನಮ್ಮ ಭಾವನೆ. ಸ್ವಾಮಿಗಳೆಂದರೆ ನಡೆದಾಡೊ ದೇವರುಗಳು ಎಂದು ಸಮಾಜ ನಂಬಿದೆ. ಈ ನಂಬಿಕೆಗೆ ಪ್ರತಿಫಲ ಕೊಡುವುದು ತಮ್ಮಗಳ ಕರ್ತವ್ಯ. ಈ ಹಿಂದೆ ಈಗಾಗಲೆ ಸಾಕಷ್ಟು ತಪ್ಪುಗಳನ್ನು ಮಠ ಮಾನ್ಯಗಳು ಮಾಡಿವೆ. ಅಂದು ಬಸವಣ್ಣನವರು ರಚಿಸಿದ ಶೂನ್ಯ ಪೀಠವ ಪರಂಪರೆಯ ಮಠಗಳು, ಧರ್ಮದ ಅಥವಾ ಧರ್ಮವನ್ನು ಸೂಚಿಸುವ ಯಾವುದೇ ಪದವನ್ನು ಬಳಸದೇ ಮಠಗಳಿಗೆ ಬೇರೆಯದೇ ಹೆಸರುಗಳನ್ನು ಕರೆದು, ಜನಗಳನ್ನು ದಿಕ್ಕು ತಪ್ಪಿಸಿದೆ. ಬೇರಾವ ಧರ್ಮದಲ್ಲೂ ಇಂತಹ ಅಜಾಗರೂಕತೆ ನಡೆದುದಿಲ್ಲ. ಎಲ್ಲ ಧರ್ಮಗಳಲ್ಲಿಯೂ ಪ್ರಾರ್ಥನಾ ಮಂದಿರವಿರಲಿ ಬೇರಾವುದೇ ಇರಲಿ, ವಿಶ್ವದಾದ್ಯಂತ ಒಂದೇ ಹೆಸರಿನಲ್ಲಿರುವುದನ್ನು ನೀವು ಗಮನಿಸಿರಬಹುದು- ಜೈನ ಬಸದಿಗಳು, ಚರ್ಚ್‌ಗಳು, ಮಸೀದಿಗಳು, ಗುರುದ್ವಾರಗಳು.. ಹೀಗೆ ಹಲವಾರು ಬೇರೆ ಹೆಸರಿನ ಚರ್ಚ್‌ಗಳು ಇದ್ದರೂ ಸಹಿತ ಪೂಜೆ, ಪ್ರಾರ್ಥನೆ, ಕಟ್ಟುಪಾಡುಗಳು, ನಿಬಂಧನೆಗಳು ಒಂದೇ ಆಗಿರುತ್ತವೆ. ಆದರೆ ನಮ್ಮ ಮಠಗಳು ಸಲ್ಲಿಸಿರುವ ಸೇವೆ ಕಲಿಸಿರುವ ಶಿಸ್ತನ್ನು ನೆನಸಿಕೊಂಡರೆ ನಿಜಕ್ಕೂ ಆ ಪದವನ್ನು ಬಳಸಿರುವುದೇ ಉತ್ತಮ. ಈ ನಿಟ್ಟಿನಲ್ಲಿ ನಿಜವಾದ ಕಾರ್ಯ ಮಾಡಿದವರು ಪರಮ ಪೂಜ್ಯ ಲಿಂಗಾನಂದ ಸ್ವಾಮಿಗಳು ಮತ್ತು ಮಾತಾಜಿಯವರು. ಇವರು ಬಸವ ಧರ್ಮ ಪೀಠ ರಚಿಸಿದುದೇ ಅಲ್ಲದೆ ಎಲ್ಲೆಡೆಯಲ್ಲೂ ಬಸವ ಮಂಟಪಗಳ ತಯಾರಿಯ ತರಾತುರಿಯಲ್ಲಿದ್ದಾರೆ. ಅವರು ನೇರವಾಗಿ ಶರಣ ಧರ್ಮವನ್ನು ಗುರುತಿಸುವಂತೆ ತಯಾರಿಸಿದ ಬಸವ ಧರ್ಮ ಪೀಠವನ್ನು ಟೀಕಿಸುವುದೇ ಅಲ್ಲದೆ, ಕಟ್ಟಿರುವ ಬಸವ ಮಂಟಪವನ್ನು ಕಬಳಿಸುವುದರಲ್ಲಿಯೂ ಯಶಸ್ಸನ್ನು ಕಂಡಂಥವರು ಸಮಾಜದ ಕೆಲವರು. ಧರ್ಮಕ್ಕಾಗಿ ಪ್ರಾಣಗಳನ್ನು ಕೊಟ್ಟ ಶರಣರೆಲ್ಲಿ? ಬೆಳೆಯಬೇಕಾದ ಧರ್ಮವನ್ನೂ ಸರಿಯಾದ ದಾರಿಯಲ್ಲಿ ಬೆಳೆಯಲು ಬಿಡದೆ, ಪೂಜೆ ಪ್ರಾರ್ಥನೆ ಮಾಡಿ ಆನಂದ ಪಡೆಯುವ ನಿಜ ಭಕ್ತರಿಗೆ ವಿಘ್ನವನ್ನುಂಟು ಮಾಡಿ ಶರಣರೆನಿಸಿಕೊಳ್ಳುವ ನಾವೆಲ್ಲಿ?

ಒಂದು ಮಹಾನ್ ಧರ್ಮದ ವೈಶಿಷ್ಟ್ಯ ಪೂರ್ಣವಾದ ಶೂನ್ಯ ಪೀಠದ ಪರಂಪರೆಯುಳ್ಳ ಪೀಠ ನಿಮ್ಮದೆಂದು ಹೇಳಿಕೊಳ್ಳುವ ನೀವು, ಪೀಠದ ಮರ್ಯಾದೆಯನ್ನು ಮರೆತು ಸಿಕ್ಕಂತೆ ಹೆಸರು ಬರೆದುಕೊಂಡು ಬಳಸಿಕೊಂಡರೆ, ಭಕ್ತರು ಪೀಠಕ್ಕೆ ಗೌರವ ಕೊಡುವ ಬಗೆಯೆಂತು? ಕಾವಿ ಧರಿಸಿದ ಒಬ್ಬ ಜಂಗಮ ಕೇವಲ ಲಿಂಗಾಯತರಿಗಷ್ಟೇ ಅಲ್ಲ. ಎಲ್ಲ ವರ್ಗ, ವರ್ಣದ ಜನ ಆತನನ್ನು ನಡೆದಾಡೋ ದೇವರೆಂದು ಗುರುತಿಸಿದುದೇ ಅಲ್ಲದೇ ಆತನಲ್ಲಿ ದೇವರನ್ನು ಕಾಣಲು ಯತ್ನಿಸುತ್ತದೆ. ಇಂತಹ ಜಂಗಮ ಸ್ಥಾನವನ್ನು ತುಚ್ಛೀಕರಿಸಿ ಸ್ವಾಮಿ ಪದವನ್ನೂ ತ್ಯಜಿಸುವುದು ನ್ಯಾಯವೇ? ದೈಹಿಕವಾಗಿ ಒಬ್ಬ ವ್ಯಕ್ತಿಗೆ ಯಾರೂ ಗೌರವ ಕೊಡುವುದಿಲ್ಲ ಆತನ ಸ್ಥಾನಕ್ಕೆ ಪ್ರತಿಭೆಗೆ ಗೌರವ ಕೊಡುತ್ತಾರೆ. ಇದು ಕೂಡ ಹಾಗೆ ನಿಮ್ಮ ಸ್ಥಾನಕ್ಕೆ ಸ್ವಾಮಿ, ಗುರು ಎನ್ನುವ ಪದದ ಗೌರವ ಇದೆ. ಎಲ್ಲಕ್ಕಿಂತ ಮುಖ್ಯವಾಗಿ ಈ ಪೀಠ, ಈ ಸ್ಥಾನ ಯಾರ ಸ್ವಂತದ್ದೂ

ಅಲ್ಲ-ತಿಳಿದಂತೆ ಹೇಳಿಕೆ ಕೊಡಲು. ಈಗಾಗಲೇ ಮೇಲೆ ತಮಗೆ ಪೂಜ್ಯರೇ ಎಂದು ಸಂಬೋಧಿಸಿದ್ದೇನೆ. ಹಾಗೆ ಗುರುತಿಸಬೇಕಾಗಿರುವುದು ನಿಮ್ಮ ಸ್ಥಾನಕ್ಕೆ ಶೋಭೆ; ಹಾಗಲ್ಲದೆ ಶರಣ ಸ್ಥಾನ ತುಂಬುವುದು ನಿಮ್ಮ ವೈಯಕ್ತಿಕ. ನೀವು ತ್ಯಜಿಸಿರುವ ಈ ಪದ ಬೇರೆ ಸ್ವಾಮಿಗಳಿಗೆ ಅಪಮಾನ ಮಾಡಲು ಸಾಧನವಾದೀತಲ್ಲವೇ? ವಿಶ್ವಗುರು ಬಸವಣ್ಣನವರ ಸಂದೇಶವನ್ನು ಪೂರ್ಣವಾಗಿ ಅರ್ಥೈಸಿಕೊಂಡು ಸಮಾಜಕ್ಕೆ ದಾರಿದೀಪವಾಗಿ ಧರ್ಮದ ಪಟುವಾಗಿ, ಗುರು ಸ್ಥಾನದಲ್ಲಿರುವವರನ್ನು ಜಗದ್ಗುರು ಎನ್ನುತ್ತಾರೆ. ಏಕೆಂದರೆ, ಜಗತ್ತಿನ ಎಲ್ಲ ಭಾಗದಲ್ಲೂ ಮೌಲ್ಯಗಳನ್ನು ಎತ್ತಿ ತೋರಿಸುವ ಕೆಲಸ ಇವರದಾಗಿರುತ್ತದೆ. ಇದನ್ನರಿತೇ ಲಿಂಗಾನಂದ ಸ್ವಾಮಿಗಳು ಮತ್ತು ಮಾತಾಜಿಯವರು ಮಹಾಜಗದ್ಗುರು ಪೀಠವನ್ನು ಸ್ಥಾಪಿಸಿದ್ದು. ಬಸವ ಧರ್ಮಪೀಠ ಅಥವಾ ಬಸವ ಮಂಟಪ ಎನ್ನುವ ಕಲ್ಪನೆಯೇ ಇದುವರೆಗೂ ಅನೇಕ ಪ್ರಶಸ್ತಿಗಳನ್ನು ರಾಜಕೀಯವಾಗಿ ಗಳಿಸಿಕೊಂಡ ಮಠಾಧೀಶರಿಗೆ ಹೊಳೆಯಲಿಲ್ಲ. ಹೀಗಿರುವ ಸಮಾಜದಲ್ಲಿ ಜಾಗೃತಿಯನ್ನುಂಟು ಮಾಡಿದ ಪರಮ ಪೂಜ್ಯರಿಗೆ ನಿಂದನೆ ಟೀಕೆ ಟಿಪ್ಪಣಿಗಳ ಬಹುಮಾನ. ಇದೇ ಶರಣ ಸಂಸ್ಕೃತಿಯೇ? ಪರಮ ಪೂಜ್ಯ ಲಿಂಗಾನಂದ ಸ್ವಾಮಿಗಳನ್ನು ಮತ್ತು ಮಾತಾಜಿಯವರನ್ನು ತಾತ್ವಿಕವಾಗಿ ನಿಂದಿಸುವವರನ್ನು ನೋಡಿದರೆ ನನಗೊಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಒಂದು ಊರಿನಲ್ಲಿ ಇಬ್ಬರು ಬ್ರಾಹ್ಮಣರಿದ್ದರಂತೆ. ಒಬ್ಬ ಬ್ರಾಹ್ಮಣ ಯಾವಾಗಲೂ ಜನಗಳಿಗೆ ತಿಳಿಯದ ಹಾಗೆ ಮಾಂಸ ತಿನ್ನುವುದು, ಮದ್ಯ ಕುಡಿಯುವುದು ಮಾಡುತ್ತಿದ್ದ. ಇನ್ನೊಬ್ಬ ನಿಷ್ಠಾವಂತ ಬ್ರಾಹ್ಮಣ ಕೋಳಿ ಮೊಟ್ಟೆ ವ್ಯಾಪಾರವನ್ನು ಕಾಯಕವಾಗಿ ಕೈಕೊಂಡಿದ್ದ. ಸತ್ಯ ಶುದ್ಧತೆಯಿಂದ ಬದುಕುತ್ತಿದ್ದ. ಆತನನ್ನು ಶ್ರೀಮಂತ ಬ್ರಾಹ್ಮಣ- ಮಾಂಸ ಮದ್ಯವನ್ನು ತಿನ್ನುತ್ತಿದ್ದವನು ಈತನನ್ನು ಧರ್ಮದ್ರೋಹಿ, ಮುಟ್ಟಬಾರದ ವಸ್ತುವನ್ನು ಮಾರಾಟ ಮಾಡುತ್ತಿದ್ದಾನೆ ಎಂದು ಆರೋಪಿಸುತ್ತಿದ್ದನಂತೆ. ಹಾಗಾಗಿದೆ ಈ ಸಮಾಜದ ಸ್ಥಿತಿ. ಆದರೂ ಪ್ರಾಜ್ಞರು, ಯಾವಾಗಲೂ ಚಿಂತನೆಯನ್ನೇ ಮಾಡುವ ಜನ, ಇಂತಹ ಬೂಟಾಟಿಕೆಗಳನ್ನು ನಂಬುವುದಿಲ್ಲ. ಅಲ್ಲ ಸ್ವಾಮೀಜಿ, ಯಾರಾದರೂ ಭಕ್ತರು ಶರಣು ಮಾಡಿದರೆ ಪ್ರತಿ ಶರಣು ಮಾಡಬೇಕೆನ್ನುವ ಪ್ರಜ್ಞೆಯೇ ಇರದವರೆಲ್ಲರೂ ಶರಣರೆನಿಸಿಕೊಳ್ಳಲು ಸಾಧ್ಯವೇ? ಈಗ ತಮ್ಮನ್ನೇ ತೆಗೆದುಕೊಳ್ಳಿ 70-80 ವರ್ಷ ವಯಸ್ಸಿನ ಹಿರಿಯ ಸ್ವಾಮೀಜಿಗಳಿಂದೆಲ್ಲ ನಮಸ್ಕಾರ ಮಾಡಿಸಿಕೊಳ್ಳುತ್ತಿದ್ದೀರಲ್ಲ ಇದು ಬಸವ ತತ್ತ್ವವೇ? ಸ್ವಾಮೀಜಿ ನಾವುಗಳು ತಮ್ಮಿಂದ ತಮ್ಮ ಮಠದಿಂದ, ಬಹಳ ಸೇವೆಯನ್ನು ನಿರೀಕ್ಷಿಸಿದವರು. ಆದರೆ ನಾವಂದುಕೊಂಡಷ್ಟು ಸೇವೆಯ ಮಟ್ಟ ತಲುಪುವುದಿರಲಿ, ಇನ್ನು ಮುಂದಾದರೂ ಸರ್ಪಭೂಷಣ ಮಠ ಹಾಗೂ ಚಿತ್ರದುರ್ಗದ ಬಸವ ಮಂಟಪದಂಥ ಘಟನೆ-ದೌರ್ಜನ್ಯದಿಂದ ವಶಪಡಿಸಿಕೊಳ್ಳುವಂಥ ಕಾರ್ಯ ನಡೆಯದಿರಲಿ ಎಂದು ಬಸವ ತಂದೆಯಲ್ಲಿ ಪ್ರಾರ್ಥಿಸುವಂತಾಗಿದೆ. ತಮ್ಮ ಬಗ್ಗೆ ನಮಗೆ ಯಾವುದೇ ವೈಯಕ್ತಿಕ ದ್ವೇಷವಿಲ್ಲ. ಆದರೆ ನಮ್ಮದು ಪೀಠ ನಮ್ಮವರು ಸ್ವಾಮೀಜಿ, ಇಂಥವರ ಬಗ್ಗೆ ಓಹೋ ಆ ಸ್ವಾಮೀಜಿ ! ಎಂದು ವ್ಯಂಗ್ಯವಾಗಿ ಯಾರೂ ನುಡಿಯಬಾರದಲ್ಲವೇ? ಶರಣ ಸಂಸ್ಕೃತಿ ಉತ್ಸವವೆಂದು ಲಕ್ಷಾಂತರ ರೂಪಾಯಿ ಪಟಾಕಿ ಸುಡುವವರು ತಾವು. ದೇಶ - ವಿದೇಶಗಳಲ್ಲಿ ಇಷ್ಟ ಲಿಂಗಗಳನ್ನು ಕೊಟ್ಟು ಬಂದ ತಾವು ತಮ್ಮ ಮಠದಲ್ಲಿ ಎಷ್ಟು ಜನ ಕೆಲಸಗಾರರು ಇಷ್ಟಲಿಂಗ ಧರಿಸಿದ್ದಾರೆ ಪಾದೋದಕ ಪ್ರಸಾದ ತೆಗೆದುಕೊಳ್ಳುತ್ತಾರೆಂದು ಗಮನಿಸಿಲ್ಲವೆಂದು ಕಾಣುತ್ತದೆ. ರಾಮಕೃಷ್ಣ ಪರಮಹಂಸರ ಬೆಲ್ಲದ ಉದಾಹರಣೆ ತಮಗೆ ತಿಳಿದಿರಬಹುದು. ನಮ್ಮ ಮನೆಯಲ್ಲಿ ಆಚರಣೆಯಿಲ್ಲದ ನಮಗೆ ಬೇರೆಯವರಿಗೆ ಹೇಳುವ ನೈತಿಕ ಹಕ್ಕಿಲ್ಲ. ಬೆಂಗಳೂರಿನ ತಿಪ್ಪ ಶೆಟ್ಟಿ ಮಠದಲ್ಲಿ ಈಗಲೂ ಸ್ಥಾವರ ಲಿಂಗ, ನಂದಿ ವಿಗ್ರಹ ಪೂಜೆ ನಿಂತಿಲ್ಲ. ಅದು ತಮ್ಮ ಮಠ ತಾನೇ ? ಇಂತಹ ನ್ಯೂನತೆಗಳು ಅನೇಕವಿದ್ದು ಮತ್ತೆ ಶರಣರೆನ್ನಿಸಿಕೊಳ್ಳುವ ಆಸೆ. ಇದು ಆಸೆಯೋ ಸಮಾಜವನ್ನು ಮರುಳುಗೊಳಿಸುವ ರೀತಿಯೋ ತಿಳಿಯದು.

ಅದೇನೇ ಇರಲಿ, ಇಂತಹ ಕ್ರಾಂತಿಗಳನ್ನು ಮಾಡಿದ ತಾವು ಮಾಡುವುದಾದರೆ ಇನ್ನೊಂದು ಮಹಾನ್ ಕ್ರಾಂತಿ ಮಾಡಿ. ಶರಣ ಎನ್ನುವ ಪದ ತಾವೇ ಜೋಡಿಸಿಕೊಳ್ಳುವುದಲ್ಲ, ನೇಮಿಸಿಕೊಳ್ಳುವುದಲ್ಲ; ಗಳಿಸಿಕೊಳ್ಳುವುದು. ಆದರೇನಂತೆ ತಾವು ಘೋಷಿಸಿಕೊಂಡಿದ್ದೀರಿ. ಸಂತೋಷ. ಆದರೆ ತಾವು ಒಂದು ಪವಿತ್ರವಾದ ಜಗದ್ಗುರು ಪೀಠದ ಅಧ್ಯಕ್ಷರಾಗಿ ಹಾಗೆ ಕರೆಸಿಕೊಳ್ಳುವುದು ಸರಿಯಲ್ಲ. ಆದ್ದರಿಂದ ತಾವುಗಳು ಯಾರಾದರೂ ಸಮರ್ಥರಾದ ಬೇರೊಬ್ಬರನ್ನು ನಿಮ್ಮ ಪೀಠಕ್ಕೆ ಆಯ್ಕೆ ಮಾಡಿ, ತಾವುಗಳು ಶರಣರಾಗಬಹುದು. ಆದಷ್ಟು ಬೇಗ. ಈ ನಿಲುವನ್ನು ಹೊಂದಿದರೆ ಶರಣರೆನಿಸಿಕೊಳ್ಳಲು ಸಾಧ್ಯವಾಗಬಹುದು. ಅನಂತ ಕೋಟಿ ಶರಣು ಶರಣಾರ್ಥಿಗಳೊಂದಿಗೆ, -ಕೆ. ವೀರೇಶ. ತಿಮ್ಮಪ್ಪಯ್ಯನಹಳ್ಳಿ

ಲಿಂಗದಲಳವಟ್ಟ ಲಿಂಗೈಕ್ಯನ ನಿಲುವ ಭಾವಭ್ರಮಿತರೆತ್ತ ಬಲ್ಲರು ?
ಬಲ್ಲವರು ಬಲ್ಲರು, ಎಲ್ಲರೆತ್ತ ಬಲ್ಲರು ? ಕೂಡಲ ಚನ್ನಸಂಗಯ್ಯನಲ್ಲಿ ಶಬ್ದ ಸೂತಕಿಗಳವರೆತ್ತ ಬಲ್ಲರು ?

ಪರಮ ಪೂಜ್ಯ ಜಗದ್ಗುರು ಮಾತಾಜಿಯವರ ಪವಿತ್ರ ಪಾದಾರವಿಂದಗಳಿಗೆ ಶರಣು ಶರಣಾರ್ಥಿಗಳು. ಸೃಷ್ಟಿಕರ್ತ ಲಿಂಗದೇವ ಹಾಗೂ ಅಪ್ಪ ಬಸವಣ್ಣನವರ ಅನುಗ್ರಹದಿಂದ ನಾವುಗಳು ಆರೋಗ್ಯದಿಂದಿದ್ದೇವೆ. ತಮ್ಮ ಕಾರಣಿಕ ಹುಟ್ಟಿನ 56ನೇ ವರ್ಧಂತಿಗೆ ಶುಭವನ್ನಾರೈಸುವುದರ ಜೊತೆಗೆ, ತಮ್ಮ ಧ್ಯೇಯೋದ್ದೇಶಗಳಿಗೆ ಮಂಗಳವಾಗಲೆಂದು ಪ್ರಾರ್ಥಿಸುತ್ತ, ಈ ಜಡ್ಡುಗಟ್ಟಿದ ಸಮಾಜವನ್ನು ತಿದ್ದಲು ಲಿಂಗದೇವ ತಮಗೆ ಸರ್ವಶಕ್ತಿಯನ್ನು ಕರುಣಿಸಲೆಂದು ಸಂಕಲ್ಪಿಸುತ್ತೇನೆ. ಎಲ್ಲ ದೇವತೆಗಳು ಶಕ್ತಿ ದೇವತೆಗೆ ತಮ್ಮ ಆಯುಧಗಳನ್ನು ಕೊಟ್ಟಂತೆ ಸರ್ವ ಶರಣರು ತಮ್ಮ ಯೋಗ ಶಕ್ತಿಯನ್ನು ತಮಗೆ ಕರುಣಿಸಲಿ.

ಕೆ. ವೀರೇಶ, ರಾಷ್ಟ್ರೀಯ ಬಸವ ದಳ, ತಿಮ್ಮಪ್ಪಯ್ಯನ ಹಳ್ಳಿ

ಬಸವ ಧರ್ಮ ಪೀಠದ ದಾಸೋಹ ನಿಧಿಗೆ 1111/- ರೂ. ಗಳನ್ನು ಸಲ್ಲಿಸಿದ ಬೆಂಗಳೂರಿನ ದಾಸೋಹಿಗಳು

ಶರಣರುಗಳಾದ :

ರಮಣಮ್ಮ ಕೆ.ಎಂ. ಸುಬ್ಬಾರೆಡ್ಡಿ	ಕು. ಶ್ರೀದೇವಿ D/o ಸಿ. ವೀರಭದ್ರಪ್ಪ
ಲತಾ ಕೃಷ್ಣಪ್ಪ	ವೈ. ವಿ. ರಾಜಮ್ಮ
ಎಲ್. ಎಸ್. ಹರ್ಷ	ಎಸ್. ಪಿ. ವಿಜಯಕುಮಾರ್
ರತ್ನಾ. ಎಂ. ಬಸವರಾಜ್	ಮಧುಮತಿ ಸಿದ್ದರಾಮಪ್ಪ ಮೆಣಸಿನಕಾಯಿ
ಸರ್ವಮಂಗಳಾ ಶಿವಣ್ಣ ದಿನ್ನೂರ್	ಜೆ. ಶಾಮ್
ಟಿ. ಜಿ. ಉಮಾಶಂಕರ್	ಜೆ. ಸುಷ್ಮಾ
ಹರಿಣಿ ನರಸಿಂಹಯ್ಯ	ಮೃತ್ಯುಂಜಯ
ಚಂದ್ರಕಲಾ ಡಾ॥ ಜಯಪ್ರಕಾಶ್ ದಿನ್ನೂರ್	S/o ಲಕ್ಷ್ಮೀದೇವಮ್ಮ ರುದ್ರಮುನಿಯಪ್ಪ
ಸವಿತಾ. ಎಂ. ಬೆಂಗೇರಿ	ಎಸ್. ಸಂಜಯ್
ಪ್ರಭಾವತಿ ಕೋದಂಡರಾಂ	ಗಂಗಮ್ಮ ಗಂಗಾಧರ ನಿಡಗುಂದಿ
ಶಿಲ್ಪಾ ಲಿಂಗರಾಜ್	ಶಿವರುದ್ರಯ್ಯ
ವಿ. ಕೆ. ಪಾಟೀಲ್	ರತ್ನಮ್ಮ. ಕೆ, ತಿಪ್ಪಯ್ಯ
ಸಿ. ವೀರಭದ್ರಪ್ಪ	ಪ್ರೇಮಾ ನಂಜುಂಡಪ್ಪ
ನಿರ್ಮಲಾ. ಎಂ. ನಾಗರಾಜು	ಕೆ. ಎಂ. ಪಾಟೀಲ್
ಸರೋಜಮ್ಮ ರೇವಣಪ್ಪ	ಶಾರದಾ ವಿಜಯಕುಮಾರ್

ಈ ಎಲ್ಲಾ ಶರಣ ಬಂಧುಗಳಿಗೆ ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪದವನ್ನು ಕರುಣಿಸಲೆಂದು ಹಾರೈಸುತ್ತೇವೆ. -ಮಾತಾಜಿ

ಜಗದ್ಗುರು ಮಾತೆ ಮಹಾದೇವಿಯವರ ವಚನ ಸಾಹಿತ್ಯದ ಸೈದ್ಧಾಂತಿಕ ಸೂತ್ರೀಕರಣಕ್ಕೆ ರಾಷ್ಟ್ರೀಯ ಬಸವ ದಳದ ಬೆಂಬಲ

ಕನ್ನಡ ಸಾಹಿತ್ಯದ ಸಿರಿವಂತಿಕೆಯನ್ನು ಹೆಚ್ಚಿಸಿರುವ ವಚನ ಸಾಹಿತ್ಯವು ವಿಶ್ವಗುರು ಬಸವಣ್ಣನವರು ಕೊಟ್ಟ ಲಿಂಗಾಯತ ಧರ್ಮದ ಮಾರ್ಗದರ್ಶಕ ಸಂವಿಧಾನ. ಜಾತಿ ಮತ ಪಂಥ ಭೇದವಿಲ್ಲದೆ ಎಲ್ಲ ಮಾನವರ ಹಕ್ಕು ಬಾಧ್ಯತೆಗಳನ್ನು ಎತ್ತಿ ಹಿಡಿಯುವ ವಚನ ಸಾಹಿತ್ಯ ಸಂವಿಧಾನವು ಸೈದ್ಧಾಂತಿಕವಾಗಿ ಕ್ರೋಢೀಕರಣಗೊಳ್ಳಬೇಕಾದ ಕಾಲದಲ್ಲಿ ವರ್ಣಾಂತರ ವಿವಾಹದಿಂದ ಕಲ್ಯಾಣದಲ್ಲಿ ಕ್ರಾಂತಿಯಾಗಿ ಸೂತ್ರೀಕರಣ ಕಾರ್ಯವು ಅರ್ಧಕ್ಕೆ ನಿಂತಿತು. ನಂತರ ವಚನ ಸಾಹಿತ್ಯವು ಬೆಳಕಿಗೆ ಬಂದರೂ ಸಾಕಷ್ಟು ಆಗಂತುಕ ಮಾಲಿನ್ಯ ಸೇರಿಬಿಟ್ಟಿತು.

ಅಧ್ಯಯನ ಶೀಲರು, ವಿದ್ವಾಂಸರೂ, ತತ್ತ್ವಜ್ಞಾನ ವಿದ್ಯಾರ್ಥಿನಿಯೂ, ಶ್ರೇಷ್ಠ ಬರಹಗಾರರೂ ಆದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ವಚನ ಸಾಹಿತ್ಯವನ್ನು ಈಗ ವ್ಯವಸ್ಥಿತವಾಗಿ ಸೈದ್ಧಾಂತಿಕವಾಗಿ ಪ್ರತಿಪಾದಿಸಿ ಸಮಾಜದ ಮುಂದೆ ಇಡುತ್ತಿದ್ದಾರೆ. ಅವರ ಜೀವಿತದ ಘನ ಉದ್ದೇಶವೇ ವಿಶ್ವಗುರು ಬಸವಣ್ಣನವರು, ಜಗನ್ಮಾತಾ ಅಕ್ಕಮಹಾದೇವಿ ಮತ್ತು ಅನುಭವ ಮಂಟಪದ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಜಗತ್ತಿಗೆ ಪ್ರಚುರ ಪಡಿಸುವುದು. ಪೂಜ್ಯ ಮಾತೆಯವರ ಶ್ರೇಷ್ಠ ಸಾಧನೆಯಿಂದಾಗಿ ಇಂದು ಲಕ್ಷಾಂತರ ಮಂದಿ ಅವರ ಸಾಹಿತ್ಯ ಓದಿ, ಅದರ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದಾರೆ. ವಚನ ಶಾಸ್ತ್ರದಲ್ಲಿ ಬರುವ ದೇವರ ಸೈದ್ಧಾಂತಿಕ ಹೆಸರು ಲಿಂಗದೇವ ಎಂಬುದನ್ನು ಬಸವಣ್ಣನವರ ವಚನಗಳ ಆಧಾರದ ಮೇಲೆ ಪ್ರಚಾರಕ್ಕೆ ತಂದಾಗಲೂ ಅನೇಕ ಮಠಾಧೀಶರು ವಿರೋಧಿಸಿದರು. ಆದರೆ ಬಸವಾನುಯಾಯಿಗಳಿಗೆ ಸತ್ಯವು ಮನದಟ್ಟಾಗಿ ವ್ಯಾಪಕವಾಗಿ ಪೂಜೆ-ಪ್ರಾರ್ಥನೆಗಳಲ್ಲಿ ಲಿಂಗದೇವ ಪದ ಈಗ ಅಳವಟ್ಟಿದೆ.

ಶರಣ ವಾಣಿ ಧ್ವನಿ ಸುರುಳಿ ಕುರಿತು : ಶರಣ ವಾಣಿ ಧ್ವನಿ ಸುರುಳಿಯಲ್ಲಿ ಅಕ್ಕಮಹಾದೇವಿಯ ವಚನಾಂಕಿತವಾದ ಚನ್ನಮಲ್ಲಿಕಾರ್ಜುನ ಪದ ತೆಗೆಯದೆ ಈ ಪದದ ಲಕ್ಷ್ಯಾರ್ಥವೇನು ಎಂಬುದನ್ನು ಮಹಾದೇವಿಯಕ್ಕ ಪ್ರಿಯ ಲಿಂಗದೇವ ಎಂಬ ವಿವರಣೆ ಮೂಲಕ ದರ್ಶನ ಶಾಸ್ತ್ರವನ್ನು ಮನವರಿಕೆ ಮಾಡಿಕೊಟ್ಟಿರುವುದು ಬಸವಾನುಯಾಯಿಗಳಿಗೆ ಅಪಾರ ಸಂತೋಷವನ್ನು ತಂದುಕೊಟ್ಟಿದೆ.

ತತ್ತ್ವಜ್ಞಾನ-ಅನುಭಾವ ಶಾಸ್ತ್ರಗಳಲ್ಲಿ ಪರಿಣಿತರಾಗಿ ಅಧಿಕೃತವಾಗಿ ಮಾತನಾಡಬಲ್ಲ, ಬರೆಯಬಲ್ಲ ಜಗದ್ಗುರು ಮಾತೆ ಮಹಾದೇವಿಯವರ ಸಾಹಿತ್ಯದಲ್ಲಿ ಆಸಕ್ತಿ ಇಲ್ಲದವರು ಓದಬೇಕಾಗಿಲ್ಲ. ಅವರ ಸಾಹಿತ್ಯದಲ್ಲಿ ಶ್ರದ್ಧೆ ಇರುವ ಬಸವ ತತ್ತ್ವಾನುಯಾಯಿಗಳು ಓದಿ, ಅಳವಡಿಸಿಕೊಂಡರೆ ಅದನ್ನು ವಿರೋಧಿಸುವ ಹಕ್ಕು ಯಾರಿಗೂ ಇಲ್ಲ. ಆದ್ದರಿಂದ ರಾಜಕೀಯ ಪ್ರೇರಿತ ವೀರಶೈವವಾದಿಗಳು ಅನವಶ್ಯಕ ಹುಯಿಲು ಎಬ್ಬಿಸಬಾರದಾಗಿ ರಾಷ್ಟ್ರೀಯ ಬಸವ ದಳವು ವಿನಂತಿಸುತ್ತದೆ. ವೈಯಕ್ತಿಕ ದ್ವೇಷ-ಮಾತ್ಸರ್ಯಗಳಿಂದ ಪೂಜ್ಯ ಮಾತೆಯವರ ಬಗ್ಗೆ ನಿಂದಿಸುತ್ತಾ ಹೋದರೆ ವೀರಶೈವವಾದಿಗಳ ವಿರುದ್ಧ ರಾಷ್ಟ್ರೀಯ ಬಸವ ದಳವೂ ಬಹಿರಂಗ ಪ್ರತಿಭಟನೆ ತೋರಿಸಬೇಕಾದ ಅನಿವಾರ್ಯತೆ ಒದಗುತ್ತದೆ ಎಂದು ತಿಳಿಸುತ್ತ, ಪ್ರಜಾಪ್ರಭುತ್ವವು ವಿಚಾರ-ವಾಕ್- ಆಚಾರ ಸ್ವಾತಂತ್ರ್ಯ ನೀಡಿರುವುದನ್ನು ಸದುಪಯೋಗ ಮಾಡಿಕೊಳ್ಳಲು ಎಲ್ಲರಿಗೂ ಅವಕಾಶವಿದೆ ಎಂಬುದನ್ನು ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳದ ಪರವಾಗಿ ಸ್ಪಷ್ಟಪಡಿಸುತ್ತೇನೆ.

ಶರಣ. ವೀರಣ್ಣ ಕೊರ್ಲಹಳ್ಳಿ
ಅಧ್ಯಕ್ಷರು, ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳ

1. ಗೋಜು ಗೊಂದಲಗಳ ಆಗರ ಡಾ॥ ಚಿದಾನಂದರ (ಅಪಕ್ವ) ಚಿಂತನಾ ಸಾಗರ

ಖ್ಯಾತ ಸಂಶೋಧಕರೆಂದು ಪ್ರಚಾರ ಗಿಟ್ಟಿಸಿಕೊಂಡಿರುವ ಡಾ ॥ ಎಂ. ಚಿದಾನಂದ ಮೂರ್ತಿಯವರು, ಸಿದ್ಧಗಂಗಾ ಮಠಾಧ್ಯಕ್ಷರಾದ ಡಾ ॥ ಶ್ರೀ ಶಿವಕುಮಾರ ಸ್ವಾಮಿಗಳಿಗೆ ಅರ್ಪಿಸಿರುವ " ವೀರಶೈವ ಧರ್ಮ: ಭಾರತೀಯ ಸಂಸ್ಕೃತಿ " ಎಂಬ ಇತ್ತೀಚಿನ ಪುಸ್ತಕ ಓದುಗರಿಗೆ ಅರೆ ಹುಚ್ಚು ಹಿಡಿಸುವಲ್ಲಿ ಪ್ರಭಾವಶಾಲಿಯಾಗಿದೆ.

ವೀರಶೈವ ಧರ್ಮ, ಲಿಂಗಾಯತ ಧರ್ಮ, ವೀರಶೈವರು ಹಿಂದೂಗಳು, ಲಿಂಗಾಯತರು ಹಿಂದೂಗಳಲ್ಲ ಇತ್ಯಾದಿ ವಿಷಯಗಳ ಚರ್ಚೆಗಳ ಹಿನ್ನೆಲೆಯಲ್ಲಿ ಪುಸ್ತಕ ರಚನೆಗೆ ಕೈ ಹಾಕಿರುವ ಚಿ. ಮೂ ಅವರು ನಿಜವಾಗಲೂ ಮತಿಭ್ರಮಣೆಗೊಂಡಿದ್ದಾರೆ ಎಂಬುದು ಆ ಪುಸ್ತಕದ ಪುಟಪುಟಗಳಲ್ಲೂ ಗೋಚರವಾಗುತ್ತದೆ.

ಅವರ ಅಸಂಬದ್ಧ ಹೋಲಿಕೆಗಳು ಯಾವುದೇ ವಿಚಾರವನ್ನು ಸ್ಪಷ್ಟ ಪಡಿಸದೆ ಮತ್ತಷ್ಟು ಗೊಂದಲಕ್ಕೀಡು ಮಾಡುತ್ತವೆ. ತಮ್ಮ ಪೂರ್ವ ನಿರ್ಧಾರಿತ ಅವೈಚಾರಿಕ, ಅವೈಜ್ಞಾನಿಕ, ಅಸ್ಪಷ್ಟ ವಿಚಾರಗಳನ್ನು ಜನತೆಯ ತಲೆಯಲ್ಲಿ ತಂಬಲು ಅನಗತ್ಯವಾದ ಅನೇಕ ಐತಿಹಾಸಿಕ ವಿವರಗಳನ್ನು ಉದಾಹರಿಸುವ ಸಂಶೋಧಕರೆಂದು ಕರೆಸಿಕೊಳ್ಳಬೇಕೆಂಬ ಹಂಬಲವುಳ್ಳ ಚಿ. ಮೂಯವರು ಜೀವಂತ ಜನಪದ ಸಾಹಿತ್ಯವನ್ನು, ವೈಚಾರಿಕ ವಚನ ಸಾಹಿತ್ಯವನ್ನು ಸಂಪೂರ್ಣವಾಗಿ, ಸಮರ್ಪಕವಾಗಿ ಬಳಸಿಕೊಳ್ಳದಿರುವುದು ಅವರ ನಯ ವಂಚಕತನವನ್ನು ತೋರಿಸುತ್ತದೆ.

" ಲಿಂಗಾಯತ ಧರ್ಮ " ಒಂದು ಸ್ವತಂತ್ರ ಧರ್ಮ. ಅದು ಬಸವಣ್ಣನವರಿಂದ ಸ್ಥಾಪಿತವಾದ " ವಿಶ್ವ ಧರ್ಮ " ಎಂಬುದಕ್ಕೆ ಜನಪದ ಸಾಹಿತ್ಯ, ವಚನ ಸಾಹಿತ್ಯ ಸಾಕ್ಷೀಭೂತವಾಗಿದೆ. ಇದನ್ನು ಮರೆ ಮಾಚುವ ಚಿ. ಮೂ. ಅವರು ವೀರಶೈವ, ಲಿಂಗಾಯತ, ಹಿಂದೂ ಇತ್ಯಾದಿ ಶಬ್ದಗಳನ್ನು ಹಿಗ್ಗಾ ಮುಗ್ಗಾ ಬಳಸಿ ಯಾವುದನ್ನೂ ಸ್ಪಷ್ಟವಾಗಿ ತಿಳಿಸುವ ಎದೆಗಾರಿಕೆ ತೋರದೆ ಎಲ್ಲರನ್ನೂ ಒಲೈಸುವ ನೆಪದಲ್ಲಿ " ಸಂಶೋಧಕ " ಎಂಬ ಪಟ್ಟವನ್ನು ಭದ್ರಪಡಿಸಿಕೊಳ್ಳಬೇಕೆಂಬ ದುರಾಸೆಯಿಂದ ಸತ್ಯವನ್ನರುಹದೆ ಸಮಾಜದ ಕಣ್ಣಿಗೆ ಮಣ್ಣೆರಚುವ ಕೆಲಸಕ್ಕೆ ಕೈ ಹಾಕಿದ್ದಾರೆ.

ಲಿಂಗಾಯತ ಧರ್ಮ, ಅದರ ಸ್ಥಾಪಕರು, ಸಾಹಿತ್ಯ, ವೈಶಿಷ್ಟ್ಯ ಇತ್ಯಾದಿ ವಿಷಯಗಳ ಬಗ್ಗೆ ತಿಳಿಸುವಲ್ಲಿ ಅಸಮರ್ಥರಾದ ಚಿ. ಮೂಗಳು " ಪಂಚಾಚಾರ್ಯರು ಪೌರಾಣಿಕ ವ್ಯಕ್ತಿಗಳು ಅವರಿಂದ ಧರ್ಮ ಸ್ಥಾಪಿತವಾಯಿತು ಎಂಬ ಉಲ್ಲೇಖ ಎಲ್ಲೂ ಇಲ್ಲ " (ಪುಟ 274) ಎಂಬ ಹಳೆಯ ಸತ್ಯವನ್ನು ಹೇಳುವಲ್ಲಿ ಮಾತ್ರ ಸಮರ್ಥರೆನಿಸಿಕೊಂಡಿದ್ದಾರೆ.

ತಮ್ಮ ಪುಸ್ತಕದುದ್ದಕ್ಕೂ ವಚನ ಸಾಹಿತ್ಯವನ್ನು ತಪ್ಪು ತಪ್ಪಾಗಿ ವ್ಯಾಖ್ಯಾನಿಸಿ, ಸ್ಪಷ್ಟವಾಗಿ ಅರ್ಥ ತಿಳಿಯದೆ ಎಲ್ಲೆಂದರಲ್ಲಿ ಹೇಗೆಂದರೆ ಹಾಗೆ ಅವುಗಳನ್ನು ಬಳಸಿರುವ ಚಿ. ಮೂ ಅವರು ತಮ್ಮ ಪ್ರಸ್ತಾವನೆಯ ಕೊನೆಯ ಭಾಗದಲ್ಲಿ " ವಿಶೇಷವಾಗಿ ನನ್ನ ಲಿಂಗಾಯತ ಪ್ರಿಯ ಬಂಧುಗಳು ಇದನ್ನು ತಾಳ್ಮೆಯಿಂದ ಓದಬೇಕು " ಎಂದು ಮನವಿ ಮಾಡಿಕೊಂಡಿದ್ದಾರೆ. ಬಹುಶ: ಅಖಿಲ ಭಾರತ ವೀರಶೈವ ಮಹಾಸಭೆ ಚಿ. ಮೂ ರವರಿಗೆ ಬಹಿಷ್ಕಾರ ಹಾಕಿದ್ದಕ್ಕೆ ಈ ಮನವಿ ಇರಬೇಕೆಂದೆನಿಸುತ್ತದೆ. ಆದರೇನಂತೆ ಗೊಂದಲದಲ್ಲೇ ಪ್ರಾರಂಭವಾಗಿ ಗೊಂದಲ್ಲೇ ಮುಂದೆ ಸಾಗಿ ಗೊಂದಲದಲ್ಲೇ ಮುಕ್ತಾಯವಾಗುವ ಸಂಶೋಧಕ ಚಿ. ಮೂ ಅವರ ಈ ಪುಸ್ತಕ ಎಂತಹ ಓದುಗನಿಗೂ ಬೋರ್ (ತಲೆ ಚಿಟ್ಟು) ಹಿಡಿಸುವಂತಿರುವುದು ಅತ್ಯಂತ ವಿಷಾದನೀಯ ಸಂಗತಿ.

ಅವರು ಸಂಶೋಧಕರೆಂದು ಈವರೆಗೂ ಭ್ರಮೆಗೊಂಡಿದ್ದವರ ತಲೆಯ ಭ್ರಾಂತಿಯನ್ನು ಕಳೆಯುವಲ್ಲಿ ಮಾತ್ರ ಈ ಕೃತಿ ಯಶಸ್ವಿಯಾಗಿದೆ ಎಂದು ಸ್ಪಷ್ಟವಾಗಿ ಹೇಳಬಹುದು.. -ಸುಜ್ಞಾನಪ್ರಭು

ಪತ್ರ - 2. ಮಠಾಧೀಶರಿಗೆ ಮಾಡೋಕ್ಕೆಲ್ಸವಿಲ್ವೆ?

ಬಸವಣ್ಣನವರ ಹೆಸರನ್ನು ಉಪಯೋಗಿಸಿಕೊಂಡು ತಮ್ಮ ಸ್ವಪ್ರತಿಷ್ಠೆಯನ್ನು ಮೆರೆಯುತ್ತಿರುವ ಕೆಲವು ಮಠಾಧೀಶರು, ಬಸವಣ್ಣನವರನ್ನೇ ತಮ್ಮ ಉಸಿರಾಗಿಸಿಕೊಂಡು ಬಸವಾದಿ ಶರಣರ ವೈಚಾರಿಕ ವಿಚಾರಧಾರೆಗಳನ್ನು ಜನತೆಗೆ ತಿಳಿಸುವ ಸಲುವಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿರುವ ಬಸವ ಧರ್ಮ ಪೀಠಾಧ್ಯಕ್ಷರಾದ ಪರಮಪೂಜ್ಯ ಮಹಾಜಗದ್ಗುರು ಮಾತೆ ಮಹಾದೇವಿಯವರ ಕ್ರಾಂತಿಕಾರಕ ನಿಲುವುಗಳ ಬಗ್ಗೆ ಅಪಸ್ವರ ಹಾಡುವುದು ಸರ್ವಸಾಮಾನ್ಯ ಹಾಗೂ ಸರ್ವ ವೇದ್ಯವಾಗಿದೆ.

ಇತ್ತೀಚೆಗೆ ಅಕ್ಕಮಹಾದೇವಿಯವರ ವಚನಾಂಕಿತ ಬದಲಾವಣೆಗೆ ಸಂಬಂಧಪಟ್ಟಂತೆ ಚಿತ್ರದುರ್ಗದ ಮುರುಘಾಮಠದ ಶರಣರು, ಗೊ.ರು.ಚನ್ನಬಸಪ್ಪನವರು ಪ್ರತಿಭಟನೆ, ಮೆರವಣಿಗೆಯಲ್ಲಿ ತಲ್ಲೀನರಾದುದನ್ನು ನೋಡಿದರೆ ಇವರಿಗೆ ಮಾಡೋಕೆ ಬೇರೆ ಕೆಲಸ ಇಲ್ವೇ ಎಂಬ ಸಂದೇಹ ಬರುತ್ತದೆ. ಇಷ್ಟೆ ಅಲ್ಲದೆ ನೆಲಮಂಗಲದಲ್ಲಿ ಸಿದ್ಧಗಂಗಾ ಮಠದ ವತಿಯಿಂದ ಜರುಗಿದ ಗ್ರಾಮಾಂತರ ಬಸವ ಜಯಂತಿ ಕಾರ್ಯಕ್ರಮದಲ್ಲಿ ಹಾಗೂ ತುಮಕೂರುನಗರದ ಹಿರೇಮಠದಲ್ಲಿ ಜಿಲ್ಲಾ ಶರಣ ಸಾಹಿತ್ಯ ಅಧ್ಯಕ್ಷ ಹ.ಬ. ಮಹದೇವಪ್ಪ ಮುಂತಾದ ''ಘನತೆವೆತ್ತ'' ಮಹಾಮಹಿಮರು ಉಪಸ್ಥಿತರಿದ್ದ ಕಾರ್ಯಕ್ರಮದಲ್ಲಿ ಮತ್ತು ಅನೇಕ ಇತರೆ ಸಣ್ಣಪುಟ್ಟ ಸಮಾರಂಭದಲ್ಲಿ ಮಾತೆ ಮಹಾದೇವಿಯವರನ್ನು ಟೀಕಿಸುತ್ತಾರೆ ಎಂಬುದನ್ನು ಗಮನಿಸಿದರೆ ಅವರವರ ಕಾರ್ಯಕ್ರಮದ ಔಚಿತ್ಯವನ್ನು ಬದಿಗೊತ್ತಿ ಮಾತೆ ಮಹಾದೇವಿಯವರನ್ನು ಟೀಕಿಸುವಲ್ಲೇ ಸಮಯ ಹರಣ ಮಾಡುವ ಇಂತಹ ಸ್ವಾಮಿಗಳಿಂದ, ಸಾಹಿತಿಗಳಿಂದ ಸಮಾಜ ಹೇಗೆ ಉದ್ಧಾರವಾದೀತು? ಎನ್ನಿಸದಿರದು.

ಬಸವಣ್ಣನವರ ವಿಚಾರಗಳನ್ನು ಸಮಾಜಕ್ಕೆ ತಿಳಿಸುವ ಕೆಲಸದಲ್ಲಿ ಮಗ್ನರಾಗದೆ ತಮ್ಮ ನಡೆ-ನುಡಿ, ಆಚಾರ-ವಿಚಾರಗಳನ್ನು ಧರ್ಮದ ಒರೆಗಲ್ಲಿಗೆ ತಿಕ್ಕ ತೀಡಿ ನೋಡಿಕೊಳ್ಳುವ ಕೆಲಸಕ್ಕೆ ಕೈಹಾಕದೆ ಇತರರನ್ನು ಟೀಕಿಸುವ ಇಂತಹವರ ಯೋಗ್ಯತೆಯನ್ನು ಅಳೆದುನೋಡುವ ಕಾಲ ಸನ್ನಿಹಿತವಾಗಿದೆ. ಕಾರಣ ಸಮಾಜ ಇಂದು ಜಾಗೃತವಾಗಿದೆ. ಆದ್ದರಿಂದ ಮಠಾಧೀಶರು ಜನತೆಯಿಂದ ಪಾಠಕಲಿಯದೆ ಜನತೆಗೆ ಧರ್ಮದ ತಿಳುವಳಿಕೆಯ ಪಾಠ ಕಲಿಸುವಲ್ಲಿ ಕ್ರಿಯಾಶೀಲರಾದಾಗ ಮಾತ್ರ ಗೌರವಾದರಗಳಿಗೆ ಲಭ್ಯವಾಗುವರೆಂಬುದನ್ನು ಮನಗಾಣಬೇಕಾಗಿದೆ.

-ಸುಜ್ಞಾನಪ್ರಭು

ಪತ್ರ - 3. ಸಿದ್ಧಗಂಗಾ ಶ್ರೀಗಳಿಗೆ ಬಹಿರಂಗ ಪತ್ರ : ಅರ್ಥಪೂರ್ಣ ಹಾಗೂ ಅನಿವಾರ್ಯ

ಪರಮ ತಪಸ್ವಿ, ನಡೆದಾಡುವ ದೇವರು, ತ್ರಿವಿಧ ದಾಸೋಹ ಮೂರ್ತಿ ಎಂಬ ಪ್ರಶಂಸೆಗೆ ಪಾತ್ರರಾಗಿರುವ ಪೂಜ್ಯ ಸಿದ್ಧಗಂಗಾ ಶ್ರೀಗಳ ಶೈಕ್ಷಣಿಕ ಕ್ಷೇತ್ರದ ಸಾಮಾಜಿಕ ಸೇವೆ ಅದ್ಭುತವಾಗಿರುವುದು ಸರ್ವ ವೇದ್ಯ. ಆದರೆ ಬಸವಾದಿ ಶರಣರ ಧಾರ್ಮಿಕ ಪಥದಲ್ಲಿ ಸಾಗಿ ಬಂದಿರುವ ಅವರು ಶರಣರ ತತ್ತ್ವನಿಷ್ಠೆಯನ್ನು ಅನುಷ್ಠಾನಗೊಳಿಸುವಲ್ಲಿ ಸಂಪೂರ್ಣವಾಗಿ ಕ್ರಿಯಾಶೀಲರಾಗದಿರುವುದು ವಿಷಾದನೀಯ ಸಂಗತಿ. ಅವರ ಶೈಕ್ಷಣಿಕ ಕ್ಷೇತ್ರದ ಸಾಮಾಜಿಕ ಸೇವೆ ಸ್ತುತ್ಯರ್ಹವಾದರೂ ಧಾರ್ಮಿಕ ಕ್ಷೇತ್ರದಲ್ಲಿ, ಬಸವಣ್ಣನವರ ಹೆಸರನ್ನು ಬಳಸುತ್ತಾ ಶರಣರ ತತ್ತ್ವಾದರ್ಶಗಳಿಗೆ ತದ್ವಿರುದ್ಧವಾದ ಆಚರಣೆಗನ್ನು ಅನುಸರಿಸುತ್ತಿರುವ ಸಿದ್ಧಗಂಗಾ ಶ್ರೀಗಳನ್ನು, ಯಾವ ಮಠಾಧೀಶರೂ ಅವರ ವಯಸ್ಸಿನ ಹಿರಿತನಕ್ಕೆ ಬೆಲೆಕೊಟ್ಟು ಅವರನ್ನು ಎಚ್ಚರಿಸುವ ಕಾರ್ಯವನ್ನು ಇದುವರೆಗೂ ಮಾಡದೇ ಇದ್ದುದರಿಂದ ಬಸವ ಧರ್ಮ ಪೀಠದ ಮಹಾಜಗದ್ಗುರು ಮಾತೆ ಮಹಾದೇವಿಯವರು ಆ ಕಾರ್ಯವನ್ನು ಮಾಡಿರುವುದು ಅರ್ಥಪೂರ್ಣ ಹಾಗೂ ಅನಿವಾರ್ಯವಾಗಿದೆ ಎಂಬುದು ಅನೇಕ ಚಿಂತನಶೀಲ ವ್ಯಕ್ತಿಗಳ ಸ್ಪಷ್ಟ ಅಭಿಪ್ರಾಯವಾಗಿದೆ. ಅವರು ಪ್ರತಿಪಾದಿಸಿರುವ ಬಹಿರಂಗ ಪತ್ರದಲ್ಲಿ ವೈಯಕ್ತಿಕ ದ್ವೇಷ ಎಳ್ಳಷ್ಟೂ ಇಲ್ಲದೆ ತಾತ್ತ್ವಿಕ ದೋಷವನ್ನು

ಎತ್ತಿಹಿಡಿದಿರುವುದು ಗಮನಾರ್ಹ ಅಂಶವಾಗಿದೆ. ಚಿದಾನಂದಮೂರ್ತಿಗಳಂತಹ ಖ್ಯಾತ ಸಂಶೋಧಕರು ಶರಣರ ತತ್ತ್ವನಿಷ್ಠೆಯ ಸೂಳ್ನುಡಿಗಳನ್ನು ಗಾಳಿಗೆ ತೂರಿ ಸಿದ್ಧಗಂಗಾ ಶ್ರೀಗಳದ್ದೇ ಸತ್ಯವಾಕ್ಯಗಳೆಂದು ಪ್ರತಿಪಾದಿಸುತ್ತಿರುವ ವೈಖರಿಯನ್ನು ನೋಡಿದಾಗ ಬಸವಾದಿ ಶರಣರ ತತ್ತ್ವನಿಷ್ಠೆಗೆ ಸಿದ್ಧಗಂಗಾ ಶ್ರೀಗಳು ತಮ್ಮ ನಡವಳಿಕೆಗಳನ್ನು ಒರೆ ಹಚ್ಚಿ ನೋಡಿಕೊಳ್ಳುವ ಹಿನ್ನೆಲೆಯಲ್ಲಿ ಬಹಿರಂಗ ಪತ್ರ ಪ್ರಕಟಿಸುವುದರಲ್ಲಿ ಯಾವುದೇ ತಪ್ಪಿಲ್ಲ. ಆದ್ದರಿಂದ ಸಕಲ ಜೀವಾತ್ಮರಿಗೂ ಅನ್ವಯವಾಗುವ ಸರಳ, ವೈಚಾರಿಕ ವಿಮರ್ಶಾತ್ಮಕ ಹಾಗೂ ವೈಜ್ಞಾನಿಕ ತಳಹದಿಯ ಮೇಲೆ ವಿಶ್ವಗುರು ಬಸವಣ್ಣನವರಿಂದ ಸ್ಥಾಪಿಸಲ್ಪಟ್ಟ ''ಲಿಂಗಾಯತ ಧರ್ಮ''ದ ತತ್ತ್ವಾದರ್ಶಗಳನ್ನು ಗಾಳಿಗೆ ತೂರದೆ ''ಧರ್ಮೋ ರಕ್ಷತಿ ರಕ್ಷಿತಃ'' ಎಂಬ ಅಮೃತ ವಾಣಿಯನ್ನು ಗಮನದಲ್ಲಿಟ್ಟುಕೊಂಡು ಪ್ರಚಾರ, ಪ್ರಶಂಸೆ, ಕೀರ್ತಿ ವಾರ್ತೆಗೆ ಬದುಕದೆ ಸಾಮಾಜಿಕ ಸೇವೆಯ ನೆಪದಲ್ಲಿ ಧರ್ಮವನ್ನೇ ಕಲುಷಿತಗೊಳಿಸುವ ಕೆಲಸಕ್ಕೆ ಕೈಹಾಕದೆ, ಸ್ವಪ್ರತಿಷ್ಠೆಯನ್ನು ಮೆರೆಯದೆ ಶರಣರ ತತ್ತ್ವನಿಷ್ಠೆಯನ್ನು ಮೆರೆಸುವಲ್ಲಿ ಪ್ರತಿಯೊಬ್ಬ ಲಿಂಗಾಯತ ಮಠಾಧೀಶರು ಕ್ರಿಯಾಶೀಲರಾಗಬೇಕೆಂಬುದು ಜನತೆಯ ವಿನಮ್ರ ಮನವಿ.

ಸುಜ್ಞಾನ ಪ್ರಭು, ಕಾರ್ಯದರ್ಶಿ, ರಾ.ಬ.ದಳ, ತುಮಕೂರು

ಪರಮ ಪೂಜ್ಯ ಮಾತಾಜಿಯವರ 56ನೆಯ ವರ್ಧಂತಿ ನಿಮಿತ್ತ ನುಡಿ ನಮನ

ಜೋ ಜೋ ಜೋ ಜೋ
ಮಾತೆ ಮಹಾದೇವಿ ಜೋ ಜೋ ॥ ಪ ॥
ಚಿನ್ಮೂಲಾದ್ರಿಯಲ್ಲಿ ನೀವು ಉದಿಸಿ ಬಂದಿರಿ
ಮೃಣ್ಮಯ ಬದುಕಿನ ಬನ್ನವ ಗೆಲಿದಿರಿ
ಬಸವ ಮಹಾಮನೆಯ ಮಗಳಾಗಿ ನಿಂದಿರಿ
ಬಸವ ಧರ್ಮಕ್ಕೆ ಕೀರ್ತಿಯ ತಂದಿರಿ ॥ 1 ॥
ಭಕ್ತಿಜ್ಞಾನ ವೈರಾಗ್ಯ ಸಂಗಮದಿ ಮಿಂದಿರಿ
ವಿಶ್ವಧರ್ಮ ಪ್ರವಚನ ಲೋಕಕ್ಕೆ ಸಾರ್ದಿರಿ
ಗುರುಲಿಂಗಾನಂದರ ಕೀರ್ತಿಯ ಬೆಳಗಿಸಿ
ಬಸವ ಧರ್ಮ ಪೀಠ ಏರಿದ ತಾಯಿ ॥ 2 ॥
ವರುಷ ಐವತ್ತೈದು ತುಂಬಿ ನಿಂತ ತ್ಯಾಗಿ
ಐವತ್ತಾರಕ್ಕೆ ಪಾದಾರ್ಪಣ ಮಾಡಿದ ಯೋಗಿ
ಭಕ್ತಿಪೂರ್ವಕವಾಗಿ ನಮನ ಮಾಡುವೆ
ಪರಶಿವನ ಸತಿಯಾಗಿ ಮೆರೆವ ಶ್ರೀದೇವಿ ॥ 3 ॥

-ಪೂಜ್ಯ ಸಿದ್ದೇಶ್ವರಾನಂದ ಸ್ವಾಮಿಗಳು
ಜಗದ್ಗುರು ಅಲ್ಲಮ ಪ್ರಭು ಮಠ, ಚಟ್ನಳ್ಳಿ, ತಾ-ಜಿ : ಬೀದರ

★ ಬಸವ ಜಯಂತಿಯ ಶುಭಾಶಯ ಕಳಿಸಿರಿ ★

ವಿಶ್ವಗುರು ಬಸವಣ್ಣನವರು ಹುಟ್ಟಿದ್ದು ವೈಶಾಖ ಮಾಸದ ರೋಹಿಣಿ ನಕ್ಷತ್ರದಲ್ಲಿ. 2001ನೆಯ ಇಸವಿಯ ಏಪ್ರಿಲ್ 26ರಂದು ಬಸವ ಜಯಂತಿ ಒದಗಿ ಬಂದಿದೆ. ನಿಮ್ಮ ಪರಿಚಿತರು, ಬಂಧು ಮಿತ್ರರು, ಆತ್ಮೀಯರು ಮುಂತಾದವರಿಗೆಲ್ಲ ಬಸವ ಜಯಂತಿಯ ಶುಭಾಶಯಗಳನ್ನು ಮರೆಯದೆ ಕಳಿಸಿ, ಅವರಿಗೆ ಶುಭ ಕೋರಿರಿ.

ಶರಣ ವಾಣಿ ಕುರಿತು ಲೀಲಾದೇವಿ ರೇಣುಕ ಪ್ರಸಾದ ಪ್ರತಿಭಟಿಸಿದ್ದಕ್ಕೆ ಪ್ರತಿಕ್ರಿಯೆ

ಓ ತಾಯಿ ಲೀಲಾದೇವಿ
ನಿಮ್ಮ - ನಮ್ಮ ವೈರ, ದ್ವೇಷ ಇಂದು ನಿನ್ನೆಯದಲ್ಲ
1968ರಲ್ಲಿ ಮಹಿಳಾ ಜಗದ್ಗುರು ಪೀಠ ಮಾಡುತ್ತೇವೆ
ಎಂದು ಶರಣ ಭೂಮಿ ಬಸವ ಕಲ್ಯಾಣದ ಅಷ್ಟ ಶತಮಾನೋತ್ಸವದ
ವೇದಿಕೆಯ ಮೇಲೆ ಬಸವ ಪ್ರೇರಣೆಯಿಂದ ನಾನು ಘೋಷಿಸಿದಾಗ
ನಿಮ್ಮ ಮಾವನವರು ಸಿಡಿದೆದ್ದು ಬಂದು
ಶೂದ್ರಳಾದ ಸ್ತ್ರೀ ಹೇಗೆ ಗುರುವಾಗಬಲ್ಲಳು ?
ಎಂದು ಕೇಳಿದ ದಿನದಿಂದಲೂ ಅಲ್ಲ.
ಇದು 800ವರ್ಷಗಳ ಹಿಂದಿನ ದ್ವೇಷ
ನಾರಾಯಣ ಕ್ರಮಿತ ಎಂಬ ಪುರೋಹಿತನ ಸಂತತಿ ನೀವು
ಕೊಂಡೆಯ ಮಂಚಣ್ಣನೆಂಬ ರಾಜಕೀಯ ಸ್ಪರ್ಧಿಯ ಪ್ರತಿನಿಧಿ ನೀವು
ಬಸವಣ್ಣನ ಹೆಸರಿನಲ್ಲಿ ತುತ್ತೂರಿ ಓದಿ
ಸಾಮಾಜಿಕ, ರಾಜಕೀಯ, ಆರ್ಥಿಕ ಲಾಭ ಮಾಡಿಕೊಳ್ಳುತ್ತಿರುವ
ನಿಮ್ಮ ವಂಶಕ್ಕೆ, ಕುಟುಂಬಕ್ಕೆ ವಚನ ಸಾಹಿತ್ಯದ ದಂದುಗವೇಕೆ ?
ಪವಿತ್ರಾತ್ಮರಾದ ನಮ್ಮ ಶರಣರನ್ನು ಸಂದಿಗೊಯ್ಕಲಾಗಿ ಹುಟ್ಟಿದ
ನಿಮ್ಮ ಮೈದುನ ಮಹಾಚೈತ್ರದ ಮೂಲಕ ಹಿಗ್ಗಾ ಮುಗ್ಗಾ ನಿಂದಿಸಿದ್ದರೂ
ಬಂಧು ಪ್ರೇಮದ ಅಂಧತನದಿಂದ ಆ ಕೃತಿ ಸಮರ್ಥಿಸಿಕೊಂಡ
ನಿನಗೇಕೆ ತಾಯಿ ಶರಣ ಸಾಹಿತ್ಯದ ಬಗ್ಗೆ ಈ ಪರಿಯ ಕಾಳಜಿ ? !
ವೀರ ವಿರಾಗಿಣಿ ಅಕ್ಕಮಹಾದೇವಿಯನ್ನು ಬೆತ್ತಲೆ ತಿರುಗಿದ ಹುಚ್ಚಿ
ಎಂದು ನಿಮ್ಮ ಮೈದುನ ಬರೆದಾಗ ನಿಮಗಾಗಲಿಲ್ಲವೆ ಸಂಕಟ ?
ನಿಮ್ಮ ಮೈದುನ ಏರಿಸಿದ ಬೈಗುಳದ ಹಾವು ಶರಣರಿಗೆ ಹೂವೆ ?
ನಾವು ಶರಣರಿಗೆ ಏರಿಸುವ ಗೌರವದ ಹೂವು ನಿಮ್ಮ ದೃಷ್ಟಿಯಲ್ಲಿ ಹಾವೆ ?
ವೀರ ಮಾತೆ ಅಕ್ಕನಾಗಲಾಂಬಿಕೆಯನ್ನು ನೀತಿಗೆಟ್ಟ ಹೆಂಗಸು
ಎಂದು ನಿಮ್ಮ ಮೈದುನ ಮೂದಲಿಸಿದಾಗ ನಿಮಗೆ ಸಿಟ್ಟು ಬರಲಿಲ್ಲವೆ ?
ನಿಮ್ಮೆಲ್ಲರ ಶರಣ ಪ್ರೇಮ ನಮಗಿಂದು ಅರ್ಥವಾಗಿದೆ ತಾಯಿ, ಅರ್ಥವಾಗಿದೆ.
ಶರಣ ಪ್ರೇಮದ ಸೋಗಿನಲ್ಲಿ ಕೈ ತುಂಬ ಸಂಪಾದಿಸಿದ್ದೀರಿ.
ಇನ್ನು ನಿಮಗೆ ನಮ್ಮ ಶರಣರ ಕಾಳಜಿ ಬೇಡ
ನೀವುಂಟು, ನಿಮ್ಮ ವೀರಶೈವವುಂಟು
ನಿಮಗೆ ವೇದಾಗಮಗಳುಂಟು, ಶ್ರುತಿ ಸ್ಮೃತಿಗಳುಂಟು
ಶರಣರ ಸಂತಾನ ನಾವು ಶರಣರ ಕರುಳ ಕುಡಿಗಳು ನಾವು
ಆ ಪವಿತ್ರಾತ್ಮರ ಕರುಳ ಕರೆ ನಮ್ಮನ್ನು ಸೆಳೆಯುತ್ತಿದೆ.
ಇನ್ನು ಶರಣರು, ವಚನ ಸಾಹಿತ್ಯದ ತಂಟೆಗೆ ಬರದೆ
ವೀರಶೈವರಾದ ನೀವು ನಿಮ್ಮ ಪಾಡಿಗೆ ಇರಿ.
ನಮ್ಮ ತಾಳ್ಮೆಯನ್ನು ಕೆಣಕದಿರಿ, ಶರಣು ಶರಣಾರ್ಥಿ.

-ಮಾತಾಜಿ

ದೃಷ್ಟಾಂತ ಕಥೆ : ಲಿಂಗಾಯತ ಧರ್ಮದ ಹಂಸಪಕ್ಷಿ

-ಮಾತಾಜಿ

ಒಮ್ಮೆ ನಾನೊಂದು ಮಕ್ಕಳ ಕಥೆ ಓದಿದ್ದೆ. ಆಂಗ್ಲ ಭಾಷೆಯಲ್ಲಿ ಸುಂದರ ಚಿತ್ರಗಳೊಡನೆ ಆ ಕಥೆ ಮುದ್ರಣವಾಗಿತ್ತು. ಒಂದು ಕಾಡಿನ ಒಂದು ಭಾಗದಲ್ಲಿ ಒಂದು ಕೊಳವಿತ್ತು. ಅಲ್ಲಿ ನೂರಾರು ಬಾತುಕೋಳಿಗಳಿದ್ದವು. ಅವು ಗುಂಪುಗುಂಪಾಗಿ ಆ ಕೆಸರಿನ ನೀರಿನಲ್ಲಿ ಮುಳುಗಿ ಏಳುತ್ತ ಹರ್ಷಿಸುತ್ತಿದ್ದವು. ಈ ಕೊಳಕ್ಕೆ ಮಾನಸ ಸರೋವರದಂತಹ ಒಂದು ನಿಷ್ಕಲಂಕ ಸರೋವರದ ಸಂಪರ್ಕವು ಹರಿಯುವ ನೀರಿನ ಝರಿಯ ಮೂಲಕ ಇತ್ತು.

ಒಂದು ದಿನ ಬಿಳಿಯದಾದ ಒಂದು ಮರಿ ತೇಲುತ್ತಾ ಬಂದು ಈ ಕೊಳವನ್ನು ಸೇರಿಕೊಂಡಿತು. ಆಗ ಅಲ್ಲಿದ್ದ ಬಾತುಕೋಳಿಗಳು ಕೋಪದಿಂದ ಹಾರಾಡಿದವು. " ನೀನು ನಮ್ಮಂತೆ ಇಲ್ಲ. ತುಂಬಾ ಕುರೂಪಿಯಾಗಿದ್ದೀಯ. ನಿನಗೆ ಇಲ್ಲಿರಲು ಅವಕಾಶವಿಲ್ಲ. ಹೊರಟು ಹೋಗು " ಎಂದು ಜಗಳ ತೆಗೆದವು. ಅದಕ್ಕೆ ಏನು ಮಾಡಬೇಕೋ ತಿಳಿಯಲಿಲ್ಲ. " ಎಲ್ಲಿಗೆ ಹೋಗಬೇಕು ನನಗೆ ತಿಳಿಯುತ್ತಿಲ್ಲ. ನನ್ನ ಪಾಡಿಗೆ ನಾನಿರುತ್ತೇನೆ. " ಎಂದು ಗೋಗರೆಯಿತು. ಆಗ ಕೆಲವು ಬಾತುಕೋಳಿಗಳು ತುಂಟಾಟದ ತರಲೆ ಮರಿಗಳಿಗೆ ಹೇಳಿದವು. " ಇರಲಿ ಬಿಡಿ, ಇಷ್ಟು ದೊಡ್ಡ ಕೊಳದಲ್ಲಿ ಅದೊಂದು ಮರಿ ಇದ್ದರೇನಂತೆ. " ಅಂತೂ ಆ ಬಾತುಕೋಳಿಗಳು ಇದನ್ನು ಮೂದಲಿಸುತ್ತಲೇ ಇದ್ದವು. ನಿನ್ನ ಬಣ್ಣ ಚೆನ್ನಾಗಿಲ್ಲ. ನಿನ್ನ ಕೊಕ್ಕು ಚೆನ್ನಾಗಿಲ್ಲ, ಕತ್ತು ಡೊಂಕಾಗಿದೆ, ಹೊಟ್ಟೆ ಡುಮ್ಮ ಎಂದು. ಕೊರಗುತ್ತಲೇ ಹೊರ ಹೋಗುವ ದಾರಿ ತಿಳಿಯದೆ ಆ ಪಕ್ಷಿ ಕೊಳಕು ನೀರಿನಲ್ಲೇ ಅಸಹನೀಯ ವೇದನೆ ಅನುಭವಿಸುತ್ತಾ ಕಾಲ ಕಳೆಯುತ್ತಿತ್ತು.

ಒಂದು ದಿನ ಆಕಾಶ ಶುಭ್ರವಾಗಿತ್ತು. ವಾತಾವರಣ ಪ್ರಶಾಂತವಾಗಿತ್ತು. ಐದಾರು ಹಂಸ ಪಕ್ಷಿಗಳು ಹಾರಾಡುತ್ತ ಕೆಳಗಿದ್ದ ಪಕ್ಷಿಯನ್ನು ಗಮನಿಸಿದವು. ನೂರಾರು ಬಾತುಕೋಳಿಗಳ ಹಿಂಡಿನಲ್ಲಿ ಒಂದು ಹಂಸೆ ; ಎಲ್ಲರೂ ತನ್ನನ್ನು ಕುರೂಪಿ ಎಂದು ಮೂದಲಿಸುವುದು ಕಂಡು ಅದು ಬಿಕ್ಕಿ ಬಿಕ್ಕಿ ಅಳುವ ಶಬ್ದ ಕೇಳಿತು.

" ಓ --- ಬಂಧು, ಹೀಗೇಕೆ ಅಳುತ್ತಿರುವೆ ? "

" ನನ್ನ ಜನ್ಮ ವ್ಯರ್ಥ. ನಾನು ಬಲು ಕುರೂಪಿಯಂತೆ ---- "

" ಇಲ್ಲ ಇಲ್ಲ--- ನೀನು ಬಲು ಸುಂದರ. ನಿನ್ನ ಬಣ್ಣ ನೋಡು ಶುಭ್ರ ಧವಳ. ಕತ್ತು ಕಮಲನಾಳದಂತೆ ನೀಳ. ರೆಕ್ಕೆಗಳೋ ವಿಸ್ತಾರ. ನೀನು ಹಾರಬಲ್ಲೆ ; ಬಾತುಕೋಳಿಗಳ ಜೊತೆ ಸೇರಿ ಹಾರಲಾರದೆ ಕುಳಿತಿದ್ದೀಯ. ಹೀಗೆ ಹಾರು. ನಿನ್ನ ಸ್ಥಳ ಈ ಕೊಳಚೆ ಗುಂಡಿಯಲ್ಲ ಮಾನಸ ಸರೋವರ ; ಬಾ ನಾವು ಕರೆದೊಯ್ಯುತ್ತೇವೆ. " ಆಶ್ಚರ್ಯಗೊಂಡ ಹಂಸೆ ಮೇಲೇರಿ, ಬಾತುಕೋಳಿಗಳಿಗೆ ಇಷ್ಟುದಿನ ಆಶ್ರಯ ನೀಡಿದ್ದಕ್ಕೆ ಧನ್ಯವಾದ ಹೇಳಿ ಬಾನಿನಲ್ಲಿ ಮೇಲೇರಿತು.

ಹಿಂದು ಸಮಾಜದ ಕೊಳದಲ್ಲಿ ಆನೇಕ ಜಾತಿ, ಮತ, ಪಂಥ ಪಂಗಡಗಳೆಂಬ ಬಾತುಕೋಳಿಗಳ ಮಧ್ಯೆ ಸೇರಿಕೊಂಡು ಮೂದಲಿಕೆಗೆ ಒಳಗಾಗಿತ್ತು ಲಿಂಗಾಯತ ಧರ್ಮದ ಹಂಸೆ. " ಇವರು ಸೂತಕ ಆಚರಿಸೋಲ್ಲ, ಮುಟ್ಟು ಮೈಲಿಗೆ ಇಲ್ಲ ; ಕಾಕು ಪೋಕು ದೈವಂಗಳ ಪೂಜೆ ಮಾಡಲ್ಲ. ಪವಿತ್ರವೆಂದು ನದಿಗಳಲ್ಲಿ ಮುಳುಗೇಳಲ್ಲ. ಕಲ್ಲು ಕಟ್ಕಂತಾರೆ. " ಹೀಗೆಲ್ಲ ಮೂದಲಿಕೆಗೆ ಒಳಗಾಗಿದ್ದ ಲಿಂಗಾಯತ ಧರ್ಮ ಬಣ ಧರ್ಮ (Tribal Religion) ಎಂಬ ಬಾತುಕೋಳಿಯಲ್ಲ ವಿಶ್ವಧರ್ಮ (Universal Religion) ಎಂಬ ಹಂಸ ಪಕ್ಷಿ ಎಂಬುದೀಗ ನಮಗೆಲ್ಲ ಮನವರಿಕೆಯಾಗುತ್ತಿದೆ. ಜಾಗತಿಕ ಧರ್ಮಗಳ ತೌಲನಿಕ ಅಧ್ಯಯನ ಮಾಡಿದಾಗ ಇದರ ಸ್ವರೂಪ ಅರ್ಥವಾಗುತ್ತಿದೆ. ಆದ್ದರಿಂದ ಇದು ಇನ್ನು ಜಗತ್ತಿನ ದಾರ್ಶನಿಕ ಆಗಸದಲ್ಲಿ ಹಾರಾಡುವ ಹಂಸ ಪಕ್ಷಿಯಾಗಲು ಅವಕಾಶ ಮಾಡಿಕೊಡಬೇಕು. ★

ಸಮಸ್ಯೆ ?- ಸಮಾಧಾನ !

ಮಂಜುನಾಥ ಬ. ಬಂಡಿ, ಅಮೀನಗಡ. -ಬಸವಣ್ಣನವರು ದಯಾಶೀಲರು, ಕರುಣಾಮೂರ್ತಿಗಳು ದಯವೇ ಬೇಕು ಸಕಲ ಪ್ರಾಣಿಗಳಲ್ಲಿ ಎಂದವರು. ಆದರೆ ಅವರು ಕುದುರೆಯ ಮೇಲೇಕೆ ಸವಾರಿ ಮಾಡುತ್ತಿದ್ದರು. ಕುದುರೆ ಸವಾರಿ ಪ್ರಾಣಿ ಹಿಂಸೆಯಲ್ಲವೆ ?

★ ಕೆಲವು ಪ್ರಾಣಿಗಳು ಕೆಲವೊಂದು ಕಾರ್ಯದಿಂದಲೇ ಮನುಷ್ಯನಿಗೆ ಉಪಕಾರಿಗಳಾಗಿವೆ. ಅವುಗಳ ಜೀವನವೂ ಸಾರ್ಥಕವಾಗುತ್ತದೆ. ಕುದುರೆ, ಕತ್ತೆ, ಒಂಟೆ, ಎತ್ತು, ಆನೆ, ನಾಯಿ ಮುಂತಾದುವು ಕೆಲವು ಕೆಲಸಗಳಿಂದಲೇ ಸಮಾಜಕ್ಕೆ ನೆರವಾಗುತ್ತವೆ. ಕುದುರೆ ಒಂದು ವಾಹನ, ಅದನ್ನು ಏರುವುದು ಹಿಂಸೆಯಲ್ಲ. ಕುದುರೆಯು ಎಳೆಯಬಹುದಾದ ಅಥವಾ ಹೊರಬಹುದಾದ ಭಾರಕ್ಕಿಂತ ಹೆಚ್ಚು ಹೇರಿ, ದಂಡಿಸಿ ಅದನ್ನು ಎಳೆಸಿದರೆ ಅದು ಹಿಂಸೆ. ತನ್ನ ಆಹಾರಕ್ಕಾಗಿ ಅದನ್ನು ಕೊಂದು ತಿಂದರೆ ಹಿಂಸೆ, ಹತ್ತಿ ಸವಾರಿ ಮಾಡಿದರೆ ಹಿಂಸೆಯಾಗದು

-ಬಸವಣ್ಣನವರು ಅಹಿಂಸಾವಾದಿಗಳು ; ತಮ್ಮ ಸಂಕಲ್ಪ ಮಾತ್ರದಿಂದಲೇ ಎಷ್ಟೋ ಜನರನ್ನು ಪರಿವರ್ತಿಸುತ್ತಿದ್ದರು. ಅಂದಾಗ ಅವರು ಸೊಂಟದಲ್ಲಿ ಕತ್ತಿಯನ್ನು ಏಕೆ ಸಿಕ್ಕಿಸಿಕೊಳ್ಳುತ್ತಿದ್ದರು ? ಅಥವಾ ಅದು ಕಲಾಕಾರನ ಕಲ್ಪನೆಯೊ ?


★ ಧರ್ಮಪಿತ ಬಸವಣ್ಣನವರು ಮುಖ್ಯವಾಗಿ ಅನುಭಾವಿಗಳು, ಭಕ್ತಿಜೀವಿಗಳು, ಸಮಾಜ ಸುಧಾರಕರು, ವಚನಕಾರರು ಇಂಥ ಭಂಗಿಯಲ್ಲಿ ಅವರ ಭಾವಚಿತ್ರ ಆಗಬೇಕಿತ್ತು. ಆದರೆ ಕಲಾರಂಗದಲ್ಲಿ ತುಂಬಾ ಹಿಂದುಳಿದಿದ್ದ ಲಿಂಗಾಯತರು ಶಿವಾಜಿ ಮಹಾರಾಜರ ಫೋಟೋ ನೋಡಿ , ಕೆಳದಿಯ ಶಿವಪ್ಪನಾಯಕನ ಫೋಟೋ ನೋಡಿ ಅಶ್ವಾರೂಢ ಬಸವಣ್ಣನವರನ್ನು, ಕತ್ತಿ ಹಿಡಿದು ಕುಳಿತ ಓರ್ವ ರಾಜನನ್ನು ನೋಡಿ ಬಸವಣ್ಣನವರ ಫೋಟೋ ಬರೆಸಿದರು. ವಚನ ಸಾಹಿತ್ಯವು ಬೆಳಕಿಗೆ ಬಂದಾಗ ಅದನ್ನು ಓದುತ್ತಾ ಹೋದಾಗ ಧರ್ಮಪಿತರ ರೂಪದ ಕಲ್ಪನೆ ಬಂದು ಇಗೀಗ ಬಹಳ ಸುಂದರವಾದ, ಭಾಕ್ತಿಕ ಕಲ್ಪನೆಯ ಫೋಟೋ ಹೊರಬಂದಿವೆ. ಹಿಂದಿನ ಕಾಲದಲ್ಲಿ ಜನರು ಆತ್ಮರಕ್ಷಣೆಗಾಗಿ ಬೆತ್ತ, ಕತ್ತಿ, ಕೃಪಾಣ, ಈಟಿ ಮುಂತಾದುವನ್ನು ಸಹಜವಾಗಿ ಹಿಡಿದುಕೊಳ್ಳುತ್ತಿದ್ದರು. ಹಾಗೆ ಬಸವಣ್ಣನವರು ಕತ್ತಿ ಹಿಡಿದಿರಲೂಬಹುದು. ಅಲ್ಲದೆ ಅವರು ಪ್ರಧಾನಿಯೂ, ದಂಡನಾಯಕರೂ ಆಗಿದ್ದರು. ಆ ಹುದ್ದೆಯ ಸಮವಸ್ತ್ರ (Uniform) ಕಿರೀಟ ಮತ್ತು ಕತ್ತಿಗಳು ; ಇಷ್ಟವಿರಲಿ ಬಿಡಲಿ ಆ ರೀತಿ ಪೋಷಾಕು ಧರಿಸಬೇಕಿತ್ತು

ಎಸ್.ಆರ್. ಶಿವಶಂಕರ್, ಮೈಸೂರು. - ಪ್ರಜಾ ನುಡಿ ಎಂಬ ಪತ್ರಿಕೆಯಲ್ಲಿ ಭೀಮಣ್ಣ ಖಂಡ್ರೆಯವರ ಒಂದು ಪತ್ರಿಕಾ ಹೇಳಿಕೆ ಪ್ರಕಟವಾಗಿದೆ. ತಮ್ಮ ಮೇಲೆ ತುಂಬಾ ಆಕ್ರೋಶ ವ್ಯಕ್ತಪಡಿಸಿದ್ದಾರೆ. ನೀವು ಮಠಾಧಿಪತಿಗಳೇ ಅಲ್ಲ ; ಎಲ್ಲ ಮಠಾಧಿಪತಿಗಳೂ ವೀರಶೈವದ ಪರವಾಗಿದ್ದು, ವೀರಶೈವ ಮಹಾಸಭೆಗೆ ಸಹಕಾರ ನೀಡುತ್ತಿದ್ದಾರೆ ಎಂದು ಹೇಳಿದ್ದಾರೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು ?

★ ವೀರಶೈವ ಮಹಾಸಭೆ ಎಂಬ ಸಂಸ್ಥೆ ಲಿಂಗಾಯತ ಧರ್ಮಕ್ಕೆ ಹೊಂದದ ವೀರಶೈವ ಪದವನ್ನು ಕೃತಕವಾಗಿ ತಂದು ಸೇರಿಸಿ ಪ್ರಚಾರ ಮಾಡುತ್ತ ಸ್ವಂತ ಸಮಾಜಕ್ಕೆ ದೂರಗಾಮಿ ದುಷ್ಪರಿಣಾಮಕ್ಕೆ ಕಾರಣವಾಗುತ್ತಿದ್ದರೂ ಈ ಬಗ್ಗೆ ಚಕಾರ ಎತ್ತದ ಮಠಾಧೀಶರು ಭೀಮಣ್ಣ ಖಂಡ್ರೆಯವರಿಗೆ ಬಲು ಮೆಚ್ಚು ಆಗಿರಬಹುದು. ವೀರಶೈವ ಮಹಾಸಭೆಯ ದ್ವಂದ್ವ ನಿಲುವನ್ನು ನಾವು ಬಯಲಿಗೆ ಇಡುತ್ತಿರುವುದರಿಂದ ನಮ್ಮ ಮೇಲೆ ಆಕ್ರೋಶ ವ್ಯಕ್ತಪಡಿಸುವುದು ಸ್ವಾಭಾವಿಕ.

ನಾವು ಮಠಾಧಿಪತಿಗಳಲ್ಲವೇ ಅಲ್ಲ, ಘಟಾಧಿಪತಿಗಳು, ಜನಾಧಿಪತಿಗಳು. ಒಂದು ಮಠವನ್ನು

- 29 ನೇ ಪುಟಕ್ಕೆ ಮುಂದುವರೆದಿದೆ



56ನೆಯ ವರ್ಧಂತಿಯಂದು ಪೂಜ್ಯ ಮಾತಾಜಿಯವರಿಗೆ
ಶರಣ - ಶರಣೆಯರಿಂದ ಪುಷ್ಪ ವೃಷ್ಟಿ



ಬೆಂಗಳೂರಿನ ಬಸವೇಶ್ವರ ನಗರದ ವಿವೇಕಾನಂದ ಪಾರ್ಕಿನಲ್ಲಿ ದಿ. 13-3-2001ರಂದು ಪೂಜ್ಯ ಮಾತಾಜಿಯವರ 56ನೆಯ ವರ್ಧಂತಿ ಆಚರಿಸಿದಾಗ.



56ನೆಯ ವರ್ಧಂತಿಯಂದು ಭರತ ನಾಟ್ಯ ಪ್ರದರ್ಶಿಸಿದ ಮಕ್ಕಳಿಗೆ ಆಶೀರ್ವಾದ



ಬಸವ ಮಂಟಪ ವಾಸಿ ಮಕ್ಕಳಿಂದ ರತ್ನ ಸಿಕ್ಕಿತಮ್ಮ ಎಂಬ ಹಾಡಿನ ನೃತ್ಯಾಭಿನಯ



ಬೆಂಗಳೂರಿನಲ್ಲಿ 56ನೆಯ ವರ್ಧಂತಿ ಆಚರಣೆ
ಎಡದಿಂದ ಬಲಕ್ಕೆ : ಸಂಪುಟಾಣೆ, ಜಯರಾಜ್ ವಕೀಲರು, ಗಣನಾಯಕಿ ದೇವಿಕಾ ಶರಣಪ್ಪ, ಪೂಜ್ಯ ಮಾತಾಜಿ, ಎಸ್. ಜಿ. ಹೊಳೀಕಟ್ಟಿ, ಎನ್. ಪುಟ್ಟರುದ್ರ ಜಗನ್ನಾಥ ಪನಸಾಲೆ, ವೀರಣ್ಣ ಕೊರ್ಲ್ಲಳ್ಳಿ.



ಧಾರವಾಡದಲ್ಲಿ 56ನೆಯ ವರ್ಧಂತಿ ಆಚರಣೆ
ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿರುವ ಚಾಕಲಬ್ಬಿ ವಕೀಲರು, ಪೂಜ್ಯ ಬಸವ ಕುಮಾರ ಸ್ವಾಮಿಗಳು, ಪೂಜ್ಯ ಮಾತೆ ಗಂಗಾದೇವಿ, ಪೂಜ್ಯ ಬಸವರತ್ನಾದೇವಿ

- 24 ನೇ ಪುಟದಿಂದ.....

ಹಿಡಿದು ಕುಳಿತು ಅದರ ಸುತ್ತಲಿನ ಪ್ರದೇಶದಲ್ಲಿ ಮಾತ್ರ ರಾಜಕೀಯ ಪ್ರಭಾವ ಬೀರುವ ಮಠಾಧೀಶರಾಗದೆ ನಾವು ಭೌತಿಕ ಪ್ರದೇಶದ ಎಲ್ಲೆ ದಾಟಿ ಕಾರ್ಯ ಮಾಡುತ್ತಿರುವವರು. ಭೀಮಣ್ಣ ಖಂಡ್ರೆಯವರ ದೃಷ್ಟಿಯಲ್ಲಿ ಮಠಾಧಿಪತಿಗಳೆಂದರೆ ಆಯಾ ಜಿಲ್ಲೆ, ತಾಲ್ಲೋಕು ಗ್ರಾಮಗಳಲ್ಲಿ ಪ್ರಭಾವಶಾಲಿಗಳಾಗಿರುವವರು ಎಂದಿರಬಹುದು. ನಾವು ಈ ವ್ಯಾಪ್ತಿ ಮೀರಿರುವುದರಿಂದ 'ಕೇವಲ' ಮಠಾಧೀಶರಲ್ಲ ಎಂದು ಗೌರವಿಸಿದ್ದಾರೆ, ಇದನ್ನು ಪರೋಕ್ಷ ಅಭಿನಂದನೆ ಎಂದು ತಿಳಿಯಿರಿ

ಮಾತೆ ಕಸ್ತೂರಿದೇವಿ, ಬಸವ ಗಂಗೋತ್ರಿ - ವೀರಶೈವ ಮಹಾಸಭಾ ಪರವಾಗಿ ಜನಗಣತಿ ಪ್ರಚಾರಕ್ಕೆ ಓರ್ವರು ಬಂದಿದ್ದರು. ಆ ಕರಪತ್ರದಲ್ಲಿ "ಲಿಂಗಾಯಿತ" ಬರೆಯಲು ಸೂಚಿಸಲಾಗಿತ್ತು. ತಾವು ನೋಡಿದರೆ "ಲಿಂಗಾಯಿತ" ಶಾಸ್ತ್ರೀಯವಾಗಿ ತಪ್ಪು ಪ್ರಯೋಗ. ಧರ್ಮದ ಹೆಸರೂ ಲಿಂಗಾಯತ, ಅನುಯಾಯಿಯ ಹೆಸರೂ ಲಿಂಗಾಯತ ಎನ್ನುತ್ತೀರಿ. ಇದರಿಂದ ಜನರಲ್ಲಿ ಗೊಂದಲ ಹುಟ್ಟದೆ ?

★ ವೀರಶೈವ ಮಹಾಸಭೆಯವರಿಗೆ ಭಾಷಾ ಶಾಸ್ತ್ರ, ವ್ಯಾಕರಣ ಏಕೆ ಬೇಕು ? ನಾವು ಏನು ಹೇಳುತ್ತೇವೆಯೋ ಅದನ್ನು ವಿರೋಧಿಸುವುದು ಅವರ ಕೆಲಸ, ಏನನ್ನು ಮಾಡಬಾರದು ಎನ್ನುತ್ತೇವೆಯೋ ಅದನ್ನು ಮಾಡಬೇಕೆಂದು ಹಠ ತೊಟ್ಟು ಹೇಳುತ್ತಾರೆ. ಲಿಂಗಾಯತ-ವೀರಶೈವ ಎರಡೂ ಸಮನಾರ್ಥವಾದ ಪದಗಳಲ್ಲ. ಲಿಂಗಾಯತವು ಒಂದು ಸ್ವತಂತ್ರ, ಸ್ವಾವಲಂಬಿ ಪರಿಪೂರ್ಣ ಧರ್ಮ ; ವೀರಶೈವವು ಕೇವಲ ಒಂದು ಶೈವ ಪ್ರಭೇದ (Sect) ಎಂದು ಮನವರಿಕೆ ಮಾಡಿಕೊಟ್ಟರೂ ಹಠ ತೊಟ್ಟು ಎರಡನ್ನೂ ಸಮಾನಾರ್ಥದಲ್ಲಿ ಬಳಸುತ್ತಿದ್ದಾರೆ. ಲಿಂಗಾಯಿತ ತಪ್ಪು ಪ್ರಯೋಗ ಎಂದರೂ ಅದನ್ನೇ ಬಳಸುತ್ತಾರೆ. ಆದ್ದರಿಂದ ಅಂಥ ಅತಿ ಬುದ್ಧಿವಂತರನ್ನು ಕುರಿತು ಸರ್ವಜ್ಞ ಕವಿ ಹೀಗೆ ಹೇಳುತ್ತಾನೆ ನೋಡಿರಿ

ಒಂದುವನು ಎರಡೆಂಬ । ಹಂದಿ ಹೆಬ್ಬುಲಿ ಎಂಬ
ನಿಂದ ದೇಗುಲವ ಮರನೆಂಬ ಮೂರ್ಖನು
ಅಂದಂತೆ ಅನ್ನಿ ಸರ್ವಜ್ಞ ॥

ವನಜಾ ಶ್ರೀನಿವಾಸ್, ಬೆಂಗಳೂರು. -ಲಂಕೇಶ್ ಅವರ ನಿಧನದೊಡನೆ ಅಂತಹ ಕೀಳುಮಟ್ಟದ ಸಾಹಿತ್ಯ ಸಂಸ್ಕೃತಿಗೆ ಪೂರ್ಣವಿರಾಮ ಬೀಳುಬಹುದು ಎಂದುಕೊಂಡಿದ್ದೆವು. ಆದರೆ ಗೌರಿ ಲಂಕೇಶ್ ಅದೇ ಸಂಸ್ಕೃತಿಯನ್ನೇ ಮುಂದುವರಿಸಿದ್ದಾರಲ್ಲ.

★ ಹಾವು ಹಾಕಿದ ಮರಿಗಳು ಹಾವೇ ಇರುತ್ತವಲ್ಲದೆ ಹಾವಿನ ಹೊಟ್ಟೆಯಲ್ಲಿ ಗಿಳಿ ಮರಿ ಹುಟ್ಟಲು ಸಾಧ್ಯವೇ ?

- ಫೆಬ್ರವರಿ 28, 2001ರ ಲಂಕೇಶ್ ಪತ್ರಿಕೆಯಲ್ಲಿ ನಿಮ್ಮ ಬಗ್ಗೆ ಕೆಲವೊಂದು ಕಪೋಲ ಕಲ್ಪಿತ ಕಥೆ ಉದಾ: ಜೆ. ಎಚ್. ಪಟೇಲರನ್ನು ಭೇಟಿ ಮಾಡಿದ್ದು, ಸಮಾಧಿಗಾಗಿ ಜಾಗ ಮಾಡಿದ್ದು, ಎಲ್ಲ ಸುಳ್ಳೇ ಇವೆ. ಆದರೂ ನೀವು ಆ ಪತ್ರಿಕೆ ವಿರುದ್ಧ ಕಾನೂನು ಕ್ರಮ ಏಕೆ ಕೈಗೊಳ್ಳುವುದಿಲ್ಲ ?

★ ದಿನ ನಿತ್ಯ ಸಹಸ್ರಾರು ಜನ, ಶರಣ ಮೇಳದಲ್ಲಿ ಲಕ್ಷಾಂತರ ಮಂದಿ ಬಂದು ಕೂಡಲ ಸಂಗಮದಲ್ಲಿರುವ ಬಸವ ಧರ್ಮ ಪೀಠದ ಕಾರ್ಯ ಚಟುವಟಿಕೆ ನೋಡುತ್ತಾರೆ. ನೀವೇ ನಡೆದಾಡುವ ವಾರ್ತಾಪತ್ರಿಕೆಗಳಾಗಿ ಸತ್ಯ ಸಂಗತಿಯನ್ನು ಪ್ರಚಾರ ಮಾಡುತ್ತೀರಿ. ಅಂದಾಗ ಸುಳ್ಳಿನ ಬಗ್ಗೆ ಏಕೆ ತಲೆ ಕೆಡಿಸಿಕೊಳ್ಳೋಣ ? ಪಾಪ ! ಆ ಗೌರಮ್ಮ ನಮ್ಮ ಮೇಲಿಟ್ಟ ಅಭಿಮಾನ ತಿಳಿದುಕೊಳ್ಳಿ ಮುಖಪುಟದ ಮೇಲೆ ಎಂಥಾ ಚೆನ್ನಾಗಿರುವ ಬಹುವರ್ಣೀಯ ಭಾವಚಿತ್ರ ಮುದ್ರಿಸಿದ್ದಾರೆ. ನಮಗಾಗಿ ಅಷ್ಟೊಂದು ಖರ್ಚು ಮಾಡಿಕೊಂಡಿದ್ದಕ್ಕೆ ಅಭಿನಂದಿಸೋಣ. ನಮ್ಮ ಫೋಟೋ ಮುದ್ರಿಸಿದಾಗ ಹೆಚ್ಚು ಪತ್ರಿಕೆ ಖರ್ಚಾದರೆ ನಮ್ಮಿಂದ ಅವರಿಗೆ ಅಷ್ಟು ಉಪಕಾರವಾಯಿತಲ್ಲಾ ಎಂದು ಸಂತೋಷ ಪಡೋಣ. ಧರ್ಮ

ಪಿತರು ಹೇಳಿಲ್ಲವೆ ?

ಕಾಣದ ಠಾವಿನಲ್ಲಿ ಜರಿದರೆಂದಡೆ
ಕೇಳಿ ಪರಿಣಾಮಿಸಬೇಕು - ಅದೇನು ಕಾರಣ ?
ಕೊಳ್ಳದೆ ಕೊಡದೆ ಅವರಿಗೆ ಸಂತೋಷವಹುದಾಗಿ
ಮನದ ತದ್ವೇಷವನಳಿದು ನಿಮ್ಮ ಶರಣರಿಗೆ
ಶರಣೆಂಬುದ ಕರುಣಿಸು ಲಿಂಗದೇವ - ಬ.ವ.ದೀ. 252

ಸಾಗರ್ ಶ್ರೀಕಂಠಮೂರ್ತಿ, ಅರಸೀಕೆರೆ -ಕೆಲವು ಮಠಾಧೀಶರು, ಮಾತ್ರವೇಕೆ ಬಹುಪಾಲು ಮಠಾಧೀಶರು ನಡೆಸುವ ಉತ್ಸವ, ಸಮ್ಮೇಳನಗಳಲ್ಲಿ ಬರೀ ರಾಜಕಾರಣಿಗಳೇ ತುಂಬಿರುತ್ತಾರೆ. ಸಭಿಕರಾದರೋ ಜ್ಞಾನಾಕಾಂಕ್ಷಿಗಳಾಗಿ ಎಷ್ಟೋಂದು ಹಣವನ್ನು ಖರ್ಚು ಮಾಡಿಕೊಂಡು ಏನಾದರೂ ಜ್ಞಾನ ಸಿಕ್ಕೀತೇನೋ ಎಂದು ಬರುತ್ತಾರೆ. ರಾಜಕಾರಣಿಗಳ ಪೊಳ್ಳು ಭಾಷಣ ಕೇಳಿ ನಿರಾಶರಾಗಿ ಹೋಗುತ್ತಾರೆ. ಧಾರ್ಮಿಕ ಸಭೆಗಳಿಗೆ ಅಷ್ಟೋಂದು ರಾಜಕಾರಣಿಗಳ ಅವಶ್ಯಕತೆ ಇರುವುದೆ ?

★ ಜನರಿಗೆ ಇಲ್ಲದಿದ್ದರೂ ಕಾರ್ಯಕ್ರಮ ಸಂಯೋಜಕರಿಗೆ ಇರುತ್ತದೆ. ಏಕೆಂದರೆ ರಾಜಕಾರಣಿಗಳ (ಅ)ಮೃತವಾಣಿಯಲ್ಲಿ ಆಶ್ವಾಸನೆಗಳ ಸುಧೆ ಇರುತ್ತದೆ. ಹಸ್ತದಲ್ಲಿ(ಅ)ಭಯವಿರುತ್ತದೆ ; ಸಹಾಯ ಧನ ಮುಂತಾಗಿ ಮಂಜೂರು ಮಾಡುವ ಸಾಮರ್ಥ್ಯ ಆ ಅಭಯ ಹಸ್ತದಲ್ಲಿರುತ್ತದೆ. ಅವರ ಮಾತಿಗೆ ಬೆಲೆ ಕೊಡದಿದ್ದರೆ ಮಟ್ಟ ಹಾಕುವ ಭಯ ಹಸ್ತವೂ ಆಗಿರುತ್ತದೆ. ಆ ಹಸ್ತದ ಮಹತ್ವ ನಮ್ಮ ನಿಮ್ಮಂಥ ಬಡಪಾಯಿಗಳಿಗೇನು ಗೊತ್ತು ?

ವಿವೇಕಾನಂದ, ಬಸವೇಶ್ವರ ನಗರ, ಬೆಂಗಳೂರು. -ನಿಮ್ಮ ವಿರುದ್ಧ ಒಂದು ದೊಡ್ಡ ಹೋರಾಟವನ್ನೇ ಹಮ್ಮಿಕೊಳ್ಳಬೇಕೆಂದು ಕೆಲವು ಮಠಾಧೀಶರು, ಸಮಾಜದ ಗಣ್ಯರು ಸಿದ್ಧರಾಗುತ್ತಿದ್ದಾರೆ. ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು ?

★ ನನಗೆ ಸಂತೋಷವೆನಿಸುತ್ತದೆ. ಏಕೆಂದರೆ ಯಾವುದೇ ಹೋರಾಟದ ಮನೋಭಾವವಿಲ್ಲದ ವೀರ-ಶವರಾಗಿ ಇರುವ ಜನರಲ್ಲಿ ಸ್ವಲ್ಪವಾದರೂ ಚಟುವಟಿಕೆ ಶುರುವಾದರೆ ಇದಕ್ಕಿಂತ ಸಂತೋಷದ ಸಂಗತಿ ಏನಿದ್ದೀತು ? ಹತ್ತು ವರ್ಷದ ತನಕ ಮಾತನಾಡದ ಮಗು 10 ವರ್ಷಕ್ಕೆ ಅಪ್ಪಾ, ಅಮ್ಮಾ ಎಂದರೆ ತಾಯಿ ತಂದೆಯರಿಗೆ ಸಂತೋಷವೆನಿಸುವ ಹಾಗೆ ನಮಗೂ ಸಂತೋಷ. ಚಿಕ್ಕವೀರ ರಾಜೇಂದ್ರ, ಟಿ.ವಿ. ಧಾರಾವಾಹಿ, ವಚನ-ನಿರ್ವಚನದ ಪ್ರಶಸ್ತಿ ವಿತರಣೆ, ಮಹಾಚೈತ್ರ ಪಠ್ಯ ರದ್ದತಿ, ದಶ ವಾರ್ಷಿಕ ಕಾರ್ಯಕ್ರಮ ಜನಗಣತಿ 'ಜಾಗೃತಿ'-ಮುಂತಾಗಿ ಏನೊಂದು ರೀತಿಯಲ್ಲಿ ಸ್ಪಂದಿಸದ ಜನರು ಯಾವ ವಿಷಯದಲ್ಲಾದರೂ ಸರಿ ಜಾಗೃತರಾಗಿ ಒಟ್ಟಾದರೆ ಸಾಕು.

ಕುಸುಮಾ ಮೃತ್ಯುಂಜಯಪ್ಪ, ದಾವಣಗೆರೆ. -ದಾವಣಗೆರೆಯಲ್ಲಿ ದಿ.3ರಂದು ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರು ಮಹಿಳಾ ಸಂಘಟನೆಗಳವರಿಗೆ ಪ್ರತಿ ತಾಲ್ಲೋಕಿನಿಂದಲೂ ಶರಣ ವಾಣಿ ಕೆಸೆಟ್ಟು ಕುರಿತು ನ್ಯಾಯಾಲಯದಲ್ಲಿ ದಾವೆ ಹೂಡಿರಿ ಎಂದು ಕರೆ ನೀಡಿದರು. ಇದರಿಂದ ನಿಮಗೆ ಭಯವಾಗದೆ ?

★ ಏಕೆ ಭಯವಾಗಬೇಕು ? ಒಂದನೆಯದಾಗಿ ಶರಣ ವಾಣಿ ಕುರಿತಾಗಿ ಬೆಂಗಳೂರು ಜುರಿಸ್ ಡಿಕ್ಷನ್ ಬಿಟ್ಟು ಬೇರೆ ಕಡೆ ಕೇಸ್ ಮಾಡಲು ಬರದು. ಎರಡನೆಯದಾಗಿ ಮಾಡಿರುವ ಬದಲಾವಣೆ ತಾತ್ವಿಕ ಹಿನ್ನೆಲೆಯದೇ ವಿನಾ ಯಾರಿಗೂ ಮಾಡಿರುವ ಅನ್ಯಾಯವಲ್ಲ. ಬಹಳವೆಂದರೆ ಕೇಸ್ ಮಾಡಿದಾಗ ಮಾಡಿದವರ ಹಣವು ಅಪವ್ಯಯವಾಗುತ್ತದೆ. ಇದು ನಮಗೆ ವ್ಯಥೆಯನ್ನುಂಟು ಮಾಡುತ್ತದೆ. ಏಕೆಂದರೆ

ನಮಗೆ ಬರುವ ಹಣ ಪರಮ ಪವಿತ್ರವಾದುದು. ನಿಜ ಶರಣರು ಸತ್ಯಶುದ್ಧ ಕಾಯಕ ಮಾಡಿ ಕಾಣಿಕೆ ರೂಪದಲ್ಲಿ ನಾವು ಧರ್ಮಪ್ರಚಾರ ಮಾಡಲೆಂದು ಕೊಡುತ್ತಾರೆ. ಕೋರ್ಟ್ ಕಚೇರಿ ಎಂದು ಆ ಹಣವನ್ನು ಅಪವ್ಯಯ ಮಾಡಲು ನಾವು ಇಚ್ಛಿಸುವುದಿಲ್ಲ. ಆದರೆ ನಾವು ಏನು ಮಾಡೋಣ, "ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯ" ಎಂಬಂಥ ಜನರು ಕೋರ್ಟಿನಲ್ಲಿ ದಾವೆ ಹೂಡಿದಾಗ ನಾವು ಅನಿವಾರ್ಯವಾಗಿ ಖರ್ಚು ಮಾಡಬೇಕಾಗಿ ಬಂದಾಗ ಗುರು ಬಸವಣ್ಣನವರಲ್ಲಿ ಕ್ಷಮೆ ಕೇಳುತ್ತೇವೆ. ಅವರಿಗೆ ಗೊತ್ತಿದೆ 'ಪಾಪ' ಯಾರದು ಎಂಬುದು. ಮೇಲಾಗಿ ನಮ್ಮ ವಕೀಲರು ಅತ್ಯಂತ ಶ್ರದ್ಧಾವಂತ ಭಕ್ತರು. ಅವರು ಉಚಿತ ಸೇವೆ ಸಲ್ಲಿಸುತ್ತಾರೆ. ಬೇರೆ ಊರುಗಳಲ್ಲಿ ವಕೀಲರು ಫೀಸ್ ಪಡೆಯುವುದಾದರೆ ಅಲ್ಲಿಯ ರಾಷ್ಟ್ರೀಯ ಬಸವ ದಳದವರೇ ನಿರ್ವಹಿಸುತ್ತಾರೆ. ಈ ಎಲ್ಲ ಕಾರಣಗಳಿಂದಾಗಿ ನಮಗೆ ಚಿಂತೆಯಿಲ್ಲ, ಭಯವಿಲ್ಲ.

ಸುನಂದಾ ರಾಚಪ್ಪ, ದಾವಣಗೆರೆ. - ಕೆಲವು ಪೀತ ಪತ್ರಿಕೆಗಳವರು ವಿಪರೀತ ಸುಳ್ಳು ಬರೆಯುತ್ತಾರೆ. ಅಲ್ಲಿ ನೀರಿದೆ ಎಂದು ಬರೆದರು ಎಂದು ನಂಬಿ ನೋಡಲು ಹೋದರೆ ಕೆಸರು ಸಹ ಇರದು. ಇಂಥವರ ಮೇಲೆ ಏಕೆ ಕ್ರಮ ಕೈಗೊಳ್ಳಬಾರದು ?

★ ಬರೆದು ಸಮಯವನ್ನು, ಮುದ್ರಿಸಿ ಕಾಗದವನ್ನು ವ್ಯರ್ಥ ಮಾಡುತ್ತಾರೆ ಅಷ್ಟೆ. ಅಗಸನ ಮಾತನ್ನು ಶ್ರೀರಾಮ ನಂಬಿ ಸೀತೆಯನ್ನು ಕಾಡಿಗೆ ಅಟ್ಟದಂತೆ. ಅದನ್ನೆಲ್ಲ ಓದಿ ತಲೆಕೆಡಿಸಿಕೊಳ್ಳುವಷ್ಟು ಬಸವ ಭಕ್ತರು ದಡ್ಡರಲ್ಲ. ಆದ್ದರಿಂದ ಉದಾಸೀನತೆಯೇ ಪೀತ ಪತ್ರಿಕೆಗಳಿಗೆ ಕೊಡುವ ಸೂಕ್ತ ಮದ್ದು.

ಹೆಸರು ಬೇಡ, ಬಸವ ಮಂಟಪದ ಭಕ್ತೆ, ಬೆಂಗಳೂರು. - ಓರ್ವ ದೊಡ್ಡ ಶ್ರೀಮಂತರ ಮನೆಗೆ ಒಬ್ಬ ದೊಡ್ಡ ಗುರುಗಳನ್ನು ಕರೆಸಿದ್ದರು. ನಾವು ಅವರ ಇಷ್ಟಲಿಂಗಾರ್ಚನೆ ನೋಡುವ ಕುತೂಹಲದಿಂದ ಇದ್ದೆವು. ಆದರೆ ಸ್ನಾನ ಮಾಡಿಕೊಂಡು ಬಂದು ಪೂಜಾ ಕೋಣೆಯೊಳಕ್ಕೆ ಹೋಗಿ ಬಾಗಿಲು ಹಾಕಿಕೊಂಡರು. ಹೊರಗಡೆ ಅವರ ಶಿಷ್ಯ ಢಣಾ ಢಣಾ ಗಂಟೆ ಬಾರಿಸುತ್ತಿದ್ದ. ನಂತರ ಬಾಗಿಲು ತೆಗೆದಾಗ ಭಕ್ತರು ಪಾದಪೂಜೆ ಮಾಡಿದರು. ಕಾಣಿಕೆ ಕೊಟ್ಟರು, ಗುರುಗಳು ಹೊರಟುಬಿಟ್ಟರು. ಪೂಜೆಯನ್ನೂ ತೋರಿಸಲಿಲ್ಲ, ಬೋಧೆಯನ್ನೂ ಮಾಡಲಿಲ್ಲ. ಎಂತೆಂತಹ ದೊಡ್ಡ ಅಧಿಕಾರಿಗಳು, ಶ್ರೀಮಂತರು ಇದ್ದರು. ಇಂಥ ಜಾಗದಲ್ಲಿ ನೀವಾದರೆ ಸಮಯದ ಸದುಪಯೋಗ ಮಾಡಿಕೊಳ್ಳುವಂತೆ ಬೋಧೆ ಮಾಡುತ್ತಿದ್ದಿರಿ, ಪೂಜೆ ತೋರಿಸುತ್ತಿದ್ದಿರಿ ಎನ್ನಿಸಿ ಜೀವ ಮರಮರ ಮರುಗಿತು.

★ ಗುರುವಿಗೆ ತಕ್ಕ ಶಿಷ್ಯರಾಗಿದ್ದಾರೆ ಇಂದಿನ ಲಿಂಗಾಯತರು. ಊಡದ ಹಸು ಉಣ್ಣದ ಕರುವಿನಂತೆ ಉಭಯತರ ಸಂಬಂಧ. ಬಹುಶಃ ನಿಮ್ಮಂತಹವರ ಎದುರಿಗೆ ಪೂಜೆ ಮಾಡಿದರೆ ಎಲ್ಲವನ್ನೂ ಚಿಕಿತ್ಸಕ ದೃಷ್ಟಿಯಿಂದ ನೋಡಿ ವಿಮರ್ಶಿಸುವಿರಿ ಎಂದು ಎಲ್ಲೋ ಸ್ವಾಮಿಗಳು ಬಾಗಿಲು ಜಡಿದುಕೊಂಡು ಪೂಜೆ ಮಾಡಿದಂತೆ ತೋರುತ್ತದೆ. ಒಳಗೆ ಅವರು ಯಾವ ಮಂತ್ರಗಳನ್ನು ಹೇಳುತ್ತಾರೋ ಅದು ಸಹ ನಿಮಗೆ ಕೇಳಬಾರದೆಂದೇ ಶಿಷ್ಯನು ಗಂಟೆ ಬಾರಿಸುತ್ತಿರಬಹುದು. ನಮ್ಮ ಮಠಾಧೀಶರು ಅನೇಕರಿಗೆ ಧರ್ಮ ಪ್ರಚಾರದ ಕಳಕಳಿಯೇ ಇಲ್ಲದುದು ವಿಷಾದನೀಯ. ಆದ್ದರಿಂದ ಭಕ್ತರೇ ಇಂದು ಜಾಗೃತರಾಗಿ ಧರ್ಮಪ್ರಚಾರವನ್ನು ಮಾಡಬೇಕು.

ಕೆ.ವೀರೇಶ. ತಿಮ್ಮಪ್ಪಯ್ಯನಹಳ್ಳಿ, -ಚಿತ್ರದುರ್ಗದ ಬೃಹನ್ಮಠದ ಶರಣರು ಸ್ವಾಮಿ ಪದವನ್ನು ತ್ಯಾಗಮಾಡಿ ಶರಣರು ಎಂದು ಬರೆದುಕೊಳ್ಳುತ್ತಾರಲ್ಲ. ಇದು ಸರಿಯೆ ?

★ ಸರಿಯಲ್ಲ. ಒಂದೊಂದು ಪದವು ವಿಶಿಷ್ಟ ಪದಸೂಚಕವಾಗಿರುತ್ತದೆ. ಕ್ರೈಸ್ತರಲ್ಲಿ ಮಾಂಕ್ ಎಂಬ ಸ್ಥಾನವನ್ನು, ಬೌದ್ಧರಲ್ಲಿ ಭಿಕ್ಕು ಎಂಬ ಸ್ಥಾನವನ್ನು ಸೂಚಿಸುವಂತೆ ಲಿಂಗಾಯತ ಧರ್ಮದಲ್ಲಿ ತ್ಯಾಗಿಯಾದ ಜಂಗಮನಿಗೆ ಸ್ವಾಮಿ ಎಂಬ ಪದ ಅನ್ವಯವಾಗುತ್ತದೆ. ಅವರಿಗೆ ಅದು ಬೇಡವಾದರೆ ಧರ್ಮಪೀಠದ

ಅಧಿಕಾರ ತ್ಯಾಗ ಮಾಡಬೇಕೇ ವಿನಾ ಸ್ವಾಮಿ ಪದವನ್ನಲ್ಲ. ವಿಶ್ವವಿದ್ಯಾಲಯದ ವೈಸ್ ಛಾನ್ಸಲರ್ ಒಬ್ಬರಿದ್ದಾರೆ ಎಂದುಕೊಳ್ಳೋಣ. ಆತನಿಗೆ ಆ ಹುದ್ದೆ ಇಷ್ಟವಿಲ್ಲಧಿದ್ದರೆ ವೈಸ್ ಛಾನ್ಸಲರ್ ಪದವಿಗೆ ರಾಜೇನಾಮೆ ಕೊಡಬೇಕೇ ವಿನಾ ಆ ಹುದ್ದೆಯ ಹೆಸರು ತೆಗೆದು ವಿಶ್ವವಿದ್ಯಾಲಯದ ಕಾರ್ಯಕರ್ತ ಎಂದು ಮಾಡಿ, ತಾನು ಮುಂದುವರಿಯಬಾರದು.

ಆಳವಾದ ಅಧ್ಯಯನ, ಅನುಭಾವದ ಪಕ್ವತೆ, ಸ್ವತಂತ್ರ ವಿಚಾರಶಕ್ತಿ ಇಲ್ಲದ ಶಿವಮೂರ್ತಿ ಶರಣರು ಪತ್ರಿಕೆ, ಟಿ.ವಿಗಳಲ್ಲಿ ಕಾಣಿಸಿಕೊಳ್ಳಲು ಮತ್ತು ಕ್ರಾಂತಿಕಾರಿ ಎನ್ನಿಸಿಕೊಳ್ಳಲು ಏನೇನೋ ಹುಚ್ಚುಚ್ಚಾರ ಮಾಡಹೋಗಿ ಅಪಹಾಸ್ಯಕ್ಕೆ ಈಡಾಗುತ್ತಿದ್ದಾರೆ. ಅವರು ಸೂರೆ ಮಾಡುವ ಹಣಕ್ಕೆ ಮರುಳಾಗಿ ಅವರ ಸುತ್ತ ಉಪಗ್ರಹಗಳಂತೆ ಸುತ್ತುವ ಜನರು ಅವರು ಸರಿದಾರಿಯಲ್ಲಿ ನಡೆಯಲಾರದಂತೆ ಮಂಕು ಕವಿಸುತ್ತಿದ್ದಾರೆ. ನಾವು ಅವರು ಇಬ್ಬರೂ ಒಂದೇ ಊರಿನವರಾದ್ದರಿಂದ ಭ್ರಾತೃಪ್ರೇಮದಿಂದಾಗಿ ನನಗೆ ಅವರ ಬಗ್ಗೆ ಬಹಳ ಮರುಕ ಎನ್ನಿಸುತ್ತಿದೆ.

ಶರಣ. ಹೆಚ್.ಕೆ. ಕಲ್ಲಪ್ಪ, ತುಮಕೂರು. -ಅನೇಕ ಮಠಾಧೀಶರು, ಸ್ವಾಮಿಗಳು ತೋರುತ್ತಿರುವ ವರ್ತನೆ, ಮಾಡುತ್ತಿರುವ ಆಚರಣೆಯಿಂದ ಬೇಸತ್ತ ಜನರು ಕಾವಿಯ ಬಗ್ಗೆ ತುಂಬಾ ತಿರಸ್ಕಾರ ತಾಳುತ್ತಿದ್ದಾರೆ. ಬಿಳಿಯ ವಸ್ತ್ರ ಧರಿಸಿ, ಷಟ್ಕೋನದ ಟೋಪಿ, ಕಾವಿಯ ಸ್ಕಾರ್ಫ್‌ನ್ನು ಹಾಕಿದರೆ ಜಾಸ್ತಿ ಗೌರವಿಸುತ್ತಾರೆ. ಆದ್ದರಿಂದ ಕಾವಿ ಧಾರಣೆಗಿಂತ ಶ್ವೇತ ವಸ್ತ್ರಧಾರಣೆ ಮಾಡಿ ಧರ್ಮ ಪ್ರಚಾರ ಮಾಡುವುದೇ ಶ್ರೇಷ್ಠ ಎಂದು ನನ್ನ ಅಭಿಪ್ರಾಯ.

★ ಲೌಕಿಕದಲ್ಲಿ ಇದ್ದು ಕಾಯಕ-ಗಳಿಕೆಯ ಜೊತೆಗೆ ಧರ್ಮ ಪ್ರಚಾರ ಮಾಡುತ್ತೇವೆ ಎನ್ನುವವರಿಗೆ ಶ್ವೇತ ವಸ್ತ್ರಧಾರಣೆಯೇ ಸೂಕ್ತ. ಆದರೆ ಧರ್ಮ ಪ್ರಸಾರ, ಸಮಾಜ ಸೇವೆಗೆ ತನ್ನನ್ನು ತಾನು ಪೂರ್ಣವಾಗಿ ಅರ್ಪಿಸಿಕೊಳ್ಳಬಯಸುವ ತ್ಯಾಗಿಗೆ ಕಾವಿಧಾರಣೆಯೇ ಸೂಕ್ತ. ಕಾವಿ ಒಂದು ಲಾಂಛನ. ಧರಿಸಿದವರು ಯಾರೋ ಕೆಲವರು ತಪ್ಪು ಮಾಡಿದರೆ ಆ ಲಾಂಛನದಲ್ಲೇ ತಪ್ಪಿರುವುದಿಲ್ಲ. ಆದ್ದರಿಂದ ಕಾವಿಧರಿಸಿದ ಅನೇಕರು ಮಾಡುವ ತಪ್ಪನ್ನು ಸರಿಪಡಿಸಲೋಸುಗವೇ ತ್ಯಾಗ ಜೀವನ ಧರಿಸಿ ಕಾವಿ ತೊಟ್ಟರೆ ಅಂಥ ಧೀರ ಸನ್ಯಾಸಿಗಳಿಂದ ಸಮಾಜಕ್ಕೆ ಹೆಚ್ಚಿನ ಕೊಡುಗೆಯಾಗುವುದು. ನೂರು ಆಡುಗಳು ಹೊರಲಾರದ ಭಾರವನ್ನು ಒಂದು ಆನೆ ಹೊರಬಲ್ಲುದಲ್ಲವೆ ? ಲಿಂ|| ಪೂಜ್ಯ ಲಿಂಗಾನಂದ ಅಪ್ಪಾಜಿಯವರ ಸಾಧನೆಯನ್ನೇ ಅವಲೋಕಿಸಿದರೆ ಈ ಮಾತು ಅರ್ಥವಾಗುತ್ತದೆ.

ಮಮತಾ ಪಾಟೀಲ, ಶಿಗ್ಗಾಂವ. - ಒಂದು ತಣ್ಣಗಾಯಿತು ಎನ್ನುವುದರಲ್ಲಿ ನೀವು ಇನ್ನೊಂದು ಏನನ್ನೋ ಮಾಡುತ್ತೀರಿ. ನಮಗಂತೂ ನಿಮ್ಮ ಬಗ್ಗೆ ಗೌರವ ಅಭಿಮಾನಗಳಿವೆ. ಆದರೆ ಮಠಾಧೀಶರು ಹುಯಿಲೆಬ್ಬಿಸಿದಾಗ ಒಮ್ಮೊಮ್ಮೆ ಏನೂ ತೋಚದಂತಾಗುತ್ತದೆ.

★ ಓರ್ವ ಉತ್ತಮ ಸರ್ಜನ್ ಇರುತ್ತಾನೆ. ಆತನ ಬಗ್ಗೆ ವಿಶ್ವಾಸವಿಟ್ಟು ನಿಮ್ಮನ್ನು ಅಥವಾ ನಿಮ್ಮವರನ್ನು ಶಸ್ತ್ರ ಚಿಕಿತ್ಸೆಗೆ ಒಪ್ಪಿಸುತ್ತೀರಿ. ರೇಲ್ವೆ ಚಾಲಕನಲ್ಲಿ ವಿಶ್ವಾಸವಿಟ್ಟು ಟ್ರೇನಿನಲ್ಲಿ ಕೂರುತ್ತೀರಿ. ಬಸ್ ಚಾಲಕನಲ್ಲಿ ವಿಶ್ವಾಸವಿಟ್ಟು ಬಸ್ಸು ಹತ್ತುತ್ತೀರಿ. ಇದೂ ಹಾಗೆಯೇ. ಬಸವ ಸಂಸ್ಥಾಪಿತ ಲಿಂಗಾಯತ ಧರ್ಮವನ್ನು ಜಾಗತಿಕ ಧರ್ಮವನ್ನಾಗಿ ಮಾಡುವ ಮಹದುದ್ದೇಶದಿಂದ, ಶರಣ ಸಮಾಜವನ್ನು ತತ್ತ್ವನಿಷ್ಠವಾದ, ಶಿಸ್ತಿನ, ಆದರ್ಶ ಸಮಾಜವಾಗಿ ರೂಪಿಸಲು ಹಗಲಿರುಳು ನಾವು ಶ್ರಮಿಸುತ್ತಿದ್ದೇವೆ. ವಿಶ್ವಾಸವಿಡಿರಿ ; ಎಲ್ಲರಿಗೂ ಎಲ್ಲವನ್ನೂ ಮನವರಿಕೆ ಮಾಡಲು ಸಾಧ್ಯವಿಲ್ಲ. ಎಲ್ಲರೂ ಒಮ್ಮೆಗೇ ಅರ್ಥಮಾಡಿಕೊಳ್ಳುವುದೂ ಇಲ್ಲ. 'ಲಿಂಗದೇವ'ನ ಮಹತಿಯನ್ನರಿಯದೆ ಮೊದಲು ಕೂಗಾಡಿದ ಅನೇಕರು ಇಂದು ಆ ಅದ್ಭುತ ಸತ್ಯವನ್ನು ಕೇವಲ ನಾಲ್ಕುವರೆ ವರ್ಷಗಳಲ್ಲಿ ಅರಿತು

ಅಳವಡಿಸಿಕೊಳ್ಳುತ್ತಿಲ್ಲವೆ ?

ರಾಜಶೇಖರ ಪಾಟೀಲ್, ಹುಬ್ಬಳ್ಳಿ - ಮೊನ್ನೆ ಓರ್ವ ಸ್ವಾಮಿಗಳು, ಹೆಸರು ಬೇಡ, ನಿಮ್ಮನ್ನು ಟೀಕಿಸುತ್ತಾ ಹೀಗೆ ಹೇಳಿದರು. ಬಸವಣ್ಣನವರು ಮಠ ಕಟ್ಟಲು ವಿರೋಧಿಯಾಗಿದ್ದರು. ಆದರೆ ಬಸವಣ್ಣನವರ ಹೆಸರಿನಲ್ಲಿ ಊರೂರಿಗೆ ಮಠ, ಬಸವ ಮಂಟಪವನ್ನು ಮಾತೆ ಮಹಾದೇವಿಯವರು ಕಟ್ಟುತ್ತಿರುವುದು ವಿಪರ್ಯಾಸ ಎಂದು.

★ ಬಹುಶಃ ಆ ಸ್ವಾಮಿಗಳ ಆದರ್ಶದಲ್ಲಿ ಮಠ, ಬಸವ ಮಂಟಪ ಕಟ್ಟದೆ ಸ್ವಾಮಿಗಳು ಬಾರ್, ಪಬ್, ಸಿನೆಮಾ ಥಿಯೇಟರ್, ಪಂಚ ತಾರಾ ಹೋಟೆಲ್ ಕಟ್ಟಿ ಸ್ವಾಮಿಗಳಿಗೆ, ಭಕ್ತರಿಗೆ ಸಂತೋಷದಿಂದಿರಲು ಅವಕಾಶ ಮಾಡಿಕೊಡಬೇಕು ಎಂದಿರಬಹುದು. ನಮಗೆ ಮಾತ್ರ ಧರ್ಮಪಿತ ಬಸವಣ್ಣನವರು ಕಟ್ಟಿ ತೋರಿಸಿದ ಅನುಭವ ಮಂಟಪವೇ ಆದರ್ಶ. ಅನುಭವ ಮಂಟಪದ ಪ್ರತಿರೂಪವೇ ಬಸವ ಮಂಟಪ.

ಕಾಶೀನಾಥ ಬಿರಾದಾರ, ವಿದ್ಯಾರ್ಥಿ, ಬೆಂಗಳೂರು. -ನಮ್ಮ ಮಿತ್ರರಲ್ಲಿ ತೀವ್ರವಾದ ಚರ್ಚೆ ನಡೆದಿತ್ತು ; ವಚನಾಂಕಿತ ಕುರಿತು ಕೆಲವು ಎಂ.ಎಲ್.ಸಿಗಳು ಒಮ್ಮೆಗೇ ಹಾರಾಡಿ ತಣ್ಣಗಾಗಿ ಬಿಟ್ಟರಲ್ಲ ಏಕಿರಬಹುದು ಎಂದು. ಆಗ ಕುಚೋದ್ಯದ ಮಿತ್ರನೊಬ್ಬ ಎಷ್ಟು ಕ್ಯಾಷ್ ಪೆಟ್ರೋಲ್ ಬಿದ್ದಿತ್ತೋ ಅಷ್ಟು ದೂರ ಗಾಡಿ ಓಡಿದವು ಬಿಡ್ರಯ್ಯ ಎಂದು ಬಿಟ್ಟ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು ?

★ ನಮಗೂ ಇಂಥ ವದಂತಿಗಳು ಪುಂಖಾನುಪುಂಖವಾಗಿ ಬಂದು ಕಿವಿಯ ಮೇಲೆ ಬಿದ್ದವು. ಇದರಲ್ಲಿ ಸತ್ಯವೆಷ್ಟೋ ಸುಳ್ಳೆಷ್ಟೋ - ಇಂಥವುಗಳ ಬಗ್ಗೆ ಚರ್ಚೆ ಮಾಡಿ ಏಕೆ ತಲೆ ಕೆಡಿಸಿಕೊಳ್ಳೀರಿ ? ಶಕ್ತಿ, ಸಮಯ, ಹಣವನ್ನು ಉಪದ್ವ್ಯಾಪಿ ಹೋರಾಟಕ್ಕೆ ವ್ಯಯ ಮಾಡಲು ಮಠಾಧೀಶರಿಗೆ ಬಿಟ್ಟು ನೀವು ವಚನ ಸಾಹಿತ್ಯದ ವಿಧಾಯಕ ಅಧ್ಯಯನ, ಚಿಂತನೆ, ಅನುಷ್ಠಾನಗಳಿಗೆ ತೊಡಗಿರಿ. ಎಂ.ಎಲ್.ಸಿಗಳು ಗೌರವಾನ್ವಿತ ಸದನದ ಸದಸ್ಯರು ಅವರು ಅಸಂಸದೀಯವಾಗಿ ವರ್ತಿಸಿ ಸದನದ ಗೌರವಕ್ಕೆ ಚ್ಯುತಿ ತಂದರೂ ನಾವು ಸದನದ ಸದಸ್ಯರ ಗೌರವ ಕಾಪಾಡಬೇಕಲ್ಲವೆ ?

ಚಂದ್ರಿಕಾ ಮಲ್ಲಪ್ಪ, ಚಿತ್ರದುರ್ಗ. -ದಾವಣಗೆರೆಯಲ್ಲಿ ತಾವೇ ಬೀದಿಗಿಳಿದು ನಡೆದು ಹೋದ ಶಿವಮೂರ್ತಿ ಶರಣರು ಚಿತ್ರದುರ್ಗದಲ್ಲಿ ಡಿ.ಸಿ.ಯವರ ಬಳಿ ಹೋದಂತೆ ಕಾಣಲಿಲ್ಲ. ಅವರ ಪರವಾಗಿ ಆಡಳಿತಾಧಿಕಾರಿ ಎಸ್.ಕೆ.ಬಿ.ರಾಜನ್ ಅರ್ಪಿಸಿದರು. ತಮ್ಮ ಮಠವಿರುವಲ್ಲೇಕೆ ಅವರು ಹೋಗಲಿಲ್ಲ ?

★ ಜನಗಣತಿ ಜಾಗೃತಿ ಕಾರ್ಯಕ್ರಮದಲ್ಲಾಗಲೀ, ಮಹಾಚೈತ್ರ ರದ್ದತಿ, ಬಸವೇಶ್ವರ ವಿಶ್ವವಿದ್ಯಾಲಯ ನಾಮಕರಣ-ಇಂಥ ಸಮುದಾಯಕ್ಕೆ ಸಂಬಂಧಪಟ್ಟ ಒಂದೂ ಹೋರಾಟದಲ್ಲಿ ಭಾಗಿಗಳಾಗದೆ (ಒಳಗೊಳಗೆ ವಿರುದ್ಧ ಪಿತೂರಿ ಮಾಡಿ ಕೆಡಿಸಲೆತ್ನಿಸಿ) ಓರ್ವ ಮಹಿಳಾ ಗುರುಗಳ ವಿರುದ್ಧ ವೈಯಕ್ತಿಕ ದ್ವೇಷದಿಂದ ಪ್ರತಿಭಟನೆ ಮಾಡಲು ಬೃಹನ್ಮಠದ ಶ್ರೀಗಳು ಬೀದಿಗಿಳಿದ ಚಿತ್ರ ನೋಡಿ ಅನೇಕ ಕಡೆ ಜನರು ಜಿಗುಪ್ಸೆ ಪಟ್ಟಂತೆ, ಕೆಲವರಾದರೂ ಛೀಮಾರಿ ಹಾಕಿರಬಹುದು. ಅದಕ್ಕೇ ತಮ್ಮೂರಲ್ಲಿ ಹೋಗಿರಲಿಕ್ಕಿಲ್ಲ. ಈ ಎಲ್ಲ ಹೋರಾಟಗಳ ಹಿಂದೆ ಇರುವ ಸೂತ್ರಧಾರರು ಎಸ್.ಕೆ.ಬಿ. ರಾಜನ್ ಅವರೇ ಎಂದು ಎಲ್ಲರ ಅಂಬೋಣ. ಶಿವಮೂರ್ತಿ ಶರಣರು ಮುಗ್ಧರು ಎಂದು ಕೆಲವರು ಅನುಕಂಪ ತೋರಿಸುತ್ತಾರೆ. ಅವರು ಉಭಯತರಲ್ಲಿ ಯಾರು ಮುಗ್ಧರೋ ಯಾರು ಧೂರ್ತರೋ ಅರ್ಥವಾಗುತ್ತಿಲ್ಲ. ಅಂತೂ ತೆರೆಯ ಹಿಂದೆ ನಿಂತು ಗೊಂಬೆಗಳನ್ನು ಕುಣಿಸುತ್ತಿದ್ದ ನಿಜ ಸೂತ್ರಧಾರಿ ಲಿಂಗಾಯತ ಪರಂಪರೆಯ ಮಠದ ಆಡಳಿತಾಧಿಕಾರಿ ರಾಜನ್, ಅಖಿಲ ಭಾರತ ವೀರಶೈವ ಮಹಾಸಭೆ ಚಿತ್ರದುರ್ಗ ಘಟಕದ ಅಧ್ಯಕ್ಷರಾಗಿ ಬಹಿರಂಗವಾಗಿ ಜಿಲ್ಲಾಧಿಕಾರಿಗಳ ಮುಂದೆ ಒಮ್ಮೆಯಾದರೂ ನಿಜರೂಪದಲ್ಲಿ ಕಾಣಿಸಿಕೊಂಡುದು ಸಮಾಧಾನ ತಂದಿತು.

ಪರಮ ಪೂಜ್ಯ ಮಹಾಜಗದ್ಗುರು ಮಾತಾಜಿಯವರಿಗೆ
ಭಕ್ತಿಯ ನುಡಿ ಕಾಣಿಕೆ

1. ಅಜ್ಞಾನದ ಕತ್ತಲೆಯಲ್ಲಿ ನಾನು ಮಲಗಿದಾಗ
ಸುಜ್ಞಾನದ ಬೆಳಕನ್ನು ಹಿಡಿದು ಮೇಲಕ್ಕೆತ್ತಿದಿರಿ
ಭವದುಃಖಗಳಲ್ಲಿ ಸಿಲುಕಿ ಬಳಲಿದಾಗ ಹೆತ್ತತಾಯಿಯಂತೆ ಎನ್ನ ಸಂತೈಸಿದಿರಿ
ಹೇ ಮಾತೆಯೇ, ಎನ್ನ ಅರಿವಿನ ಗುರು ನೀವಾದಿರಾಗಿ,
ಚೆನ್ನ ಸಚ್ಚಿದಾನಂದನ ಚೆನ್ನಸತಿಯೇ ನಿಮಗೆ ಶರಣು ಶರಣಾರ್ಥಿ.

2. ಆರೇನೆಂದರೂ ನೀವು ಬಸವಾತ್ಮಜೆಯೇ.
ಬಸವ ಧರ್ಮದ ಪುನರುತ್ಥಾನ ಮಾಡಿ,
ಧರ್ಮಗುರು ಬಸವಣ್ಣನ ಎಲ್ಲರ ಮನೆ ಮನಕ್ಕೂ ತೋರಿ,
ಲಿಂಗಾಯತ ಘನಧರ್ಮಕ್ಕೆ ಪಟ್ಟಕಟ್ಟಿ,
ನಿಜ ಲಿಂಗಾಯತರನ್ನೆಲ್ಲ ಶರಣ ಮೇಳದಲ್ಲಿ ಒಂದುಗೂಡಿಸಿ,
ಎಲ್ಲರಲ್ಲೂ ಬಸವ ಬೆಳಕನ್ನು ಕಾಣಬಯಸಿ
ಲಿಂಗದೇವನ ಲೀಲೆಯ ಎಲ್ಲೆಡೆ ಮೆರೆಸಿದ,
ಎನ್ನ ಪರಮಗುರು ವಿರಾಗಿಣಿಯೇ,
ಚೆನ್ನಸಚ್ಚಿದಾನಂದ ಪ್ರಿಯೆ ಮಹಾಗುರುಮಾತೆ ಬಸವಾತ್ಮಜೆಯೇ
ನಿಮಗೆ ಶರಣು ಶರಣಾರ್ಥಿ.

3. ಎನ್ನ ಸುಖ-ದುಃಖ ನಿನ್ನದಯ್ಯಾ, ಎನ್ನ ನೋವು-ನಲಿವು ನಿನ್ನದಯ್ಯಾ
ಎನ್ನ ಒಳಿತು-ಕೆಡುಕು ನಿನ್ನದಯ್ಯಾ
ಬಳ್ಳಿಗೆ ಹಣ್ಣು ಭಾರವೇ? ಚೆನ್ನ ಸಚ್ಚಿದಾನಂದ ಸುತ ಗುರುಬಸವಾ.

4. ನೀ ಅಂದು ಬಂದೆ ಶಿವಬೆಳಕು ಚೆಲ್ಲಲು
ನೊಂದು ಬೆಂದವರನು ಇಂಬಿಟ್ಟು ಕೊಳ್ಳಲು ,
ಜನಮನದಲ್ಲಿ ದಿವ್ಯಶಕ್ತಿಯ ಜಾಗೃತಗೊಳಿಸಲು,
ಈ ನಿನ್ನ ಮಾತೃಹೃದಯಕೆ ಒಲಿದು
ನೆರೆದರೆಲ್ಲ ಶಿವಪ್ರೇಮಿಗಳು,
ಶಿವ ಬೆಳಕಲಿ ಬೆಳಗಿದರವರೆಲ್ಲ ತಮ್ಮ ಅರಿವಿನ ಅನುಭಾವದಿಂದಾಗಿ
ಚೆನ್ನ ಸಚ್ಚಿದಾನಂದನ ಕಾರುಣ್ಯ ಸುತ
ನೀನಾದ ಕಾರಣ, ಹೊಸ ಧರ್ಮವ ನೀಡಿ
ಪರಮ ಗುರುವಾದೆ ನೀನು.

5. ಬದುಕಲಿ ನಾ ಬೆಂದು ಕಣ್ಣೀರು ಸುರಿಸಿದಾಗ
ಜೊತೆ ಯಾರು ಇಲ್ಲೆಂದು ನಿಮ್ಮ ಸ್ಮರಿಸಿದಾಗ
ನೀವ್ ಬಂದಿರಿಂದು ಅಭಯ ಹಸ್ತ ನೀಡಲೆಂದು
ನೊಂದ ಈ ಜೀವಕ್ಕೆ ಬೆಳಕ ತೋರಲೆಂದು
ಚೆನ್ನ ಸಚ್ಚಿದಾನಂದನಾಣೆಯಾಗಿ ಇದು ಸತ್ಯ, ಇದು ಸತ್ಯ !

-ಸವಿತಾ ಜಮ್ಮಿಹಾಳ, ಧಾರವಾಡ

ಅಕ್ಕ ಮಹಾದೇವಿಯ ವಚನಾಂಕಿತ ಕುರಿತು ಆಕ್ಷೇಪಿಸಿದವರು ಯಾರ್ಯಾರು ?
ಒಂದು ಸಮಗ್ರ ಸಮೀಕ್ಷೆ

-ಮಾತಾಜಿ

ಇದಕ್ಕಿದ್ದ ಹಾಗೆಯೇ ವಿಧಾನ ಪರಿಷತ್ತಿನಲ್ಲಿ ಶರಣ ವಾಣಿ ಧ್ವನಿ ಸುರುಳಿ ಕುರಿತು ಸದನದ ಸದಸ್ಯರು ಒಮ್ಮೆಲೇ ಕೂಗಾಡಿದಾಗ ಇಡೀ ಕರ್ನಾಟಕದ ಕಣ್ಣು ಶರಣ ವಾಣಿಯ ಮೇಲೆ ಬಿತ್ತು. ಜೊತೆಗೆ ಬಸವ ವಚನ ದೀಪ್ತಿಯ ಪ್ರಸ್ತಾಪವಾಯಿತು. ಕ್ರಾಂತಿಯ ಕಿಡಿ ಕಲ್ಯಾಣ ಕಿರಣದ ಪ್ರಸ್ತಾಪವೂ ಆಯಿತು. (31 ವರ್ಷಗಳ ಸುದೀರ್ಘ ಸೇವೆ ಮಾಡಿರುವ ಕಲ್ಯಾಣ ಕಿರಣ ಇಡೀ ರಾಜ್ಯದ ಜನರ ಗಮನಕ್ಕೆ ಬರುವಂತಾದುದು ಹೆಮ್ಮೆಯ ಸಂಗತಿ)

ಅಕ್ಕ ಮಹಾದೇವಿಯ ವಚನಾಂಕಿತ ಬದಲಾಯಿಸಲ್ಪಟ್ಟದೆ ಎಂಬ ಸುದ್ದಿ ಎಬ್ಬಿಸಿದ್ದಕ್ಕಾಗಿ ಬಹುಮಾನ ಕೊಡಬೇಕಾದರೆ ಯಾರಿಗೆ ಕೊಡಬಹುದು ?

1. ಮಾತಾಜಿಯವರು ಇನ್ನಷ್ಟು ಬದಲಾವಣೆ ಮಾಡಬಹುದು ಎಂದು ನೆಪ ಹೇಳಿ ರಾಷ್ಟ್ರೀಯ ಬಸವ ದಳ ಬಿಟ್ಟು ಸ್ವತಂತ್ರ ರಾಷ್ಟ್ರೀಯ ಬಸವ ದಳ ಕಟ್ಟಿಕೊಂಡ ಬೀದರಿನ ಅನ್ನಪೂರ್ಣ ಹಂಗರಗಿಯವರಿಗೋ? (ರಾಷ್ಟ್ರೀಯ ಬಸವ ದಳ ಎಂಬ ಪದದ ಮೋಹವೇಕೋ. ಪೂರ್ಣ ಬೇರೆಯೇ ಆದ ಹೆಸರನ್ನು ಇಟ್ಟುಕೊಳ್ಳಬಹುದಿತ್ತು. ಏನು ಮಾಡುವುದು ಕೆಲವರಿಗೆ ರಾಷ್ಟ್ರೀಯ ಬಸವ ದಳ ಎಂಬ ಅಕ್ಕಿಯ ಮೇಲೂ ಆಸೆ ; ಬಸವ ಕೇಂದ್ರದವರೆಂಬ ನೆಂಟರ ಮೇಲೂ ಪ್ರೀತಿ.)

2. ಲಂಕೇಶ್ ಪತ್ರಿಕೆಯಲ್ಲಿ (28-2-2001) ಚಳ್ಳಕೆರೆ ಎರ್ರಿಸ್ವಾಮಿ ಎಂಬ ಲೇಖಕರು ಒಂದು ಲೇಖನವನ್ನು, ಬರೀ ಸುಳ್ಳುಗಳನ್ನು ಪೋಣಿಸಿ ಬರೆದರು.

3. ಮಾರ್ಚ 3ರಂದು ಸಭೆ ಕರೆದ ಶಿವಮೂರ್ತಿ ಶರಣರಿಗೆ ಈ ಬಹುಮಾನ ದೊರೆಯಬೇಕೋ ?

ದಾವಣಗೆರೆಯಲ್ಲಿ ಸಾಕಷ್ಟು ಜನ ಶಿವಮೂರ್ತಿ ಶರಣರ ಕರೆಗೆ ಓಗೊಟ್ಟು ಬರದುದರಿಂದ ಶಾಲಾ ಮಕ್ಕಳನ್ನು ಸೇರಿಸಿಕೊಂಡು ಪ್ರಥಮ ಪ್ರತಿಭಟನಾ ಪ್ರದರ್ಶನವು ನಡೆಯಿತು.

ಓದುಗರ ಪತ್ರ- ವಿದ್ಯಾರ್ಥಿನಿಯರಿಗೇಕೆ ಶಿಕ್ಷೆ ?

ಮಾನ್ಯರೆ,

ದಿನಾಂಕ 5-3-2001ರ ಸೋಮವಾರ ನಗರದಲ್ಲಿ ಮಾತೆ ಮಹಾದೇವಿಯವರ ವಿರುದ್ಧ ಪ್ರತಿಭಟನಾ ರ್‍ಯಾಲಿ ನಡೆಯಿತು. ಈ ರ್‍ಯಾಲಿಯನ್ನು ನಗರದ ಬಸವತತ್ತ್ವಾಭಿಮಾನಿಗಳು ಕರೆದಿದ್ದು, ಅನೇಕ ಸಂಘ ಸಂಸ್ಥೆಗಳು ಭಾಗವಹಿಸಿ ಪ್ರತಿಭಟನೆ ನಡೆಸಿದ್ದು ಸರಿ. ಆದರೆ, ಈ ಪ್ರತಿಭಟನೆಯಲ್ಲಿ ಏನೂ ಅರಿಯದ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯ ವಿದ್ಯಾರ್ಥಿಗಳನ್ನು ಮಧ್ಯಾಹ್ನ 12 ಗಂಟೆಯಿಂದ 3 ಗಂಟೆಯವರೆಗೆ ಜಯದೇವ ವ್ಯಾಪಾರ ಸಂಕೀರ್ಣ ಒಳಾಂಗಣದಿಂದ ಹೊರಟು ಜಿಲ್ಲಾಧಿಕಾರಿಗಳ ಕಛೇರಿವರೆಗೆ ಬಿಸಿಲಿನಲ್ಲಿ ನಡೆಸಿಕೊಂಡು ಹೋಗಿದ್ದು ಯಾವ ಪುರುಷಾರ್ಥಕ್ಕಾಗಿ ? ಸ್ವಲ್ಪ ತಿಳಿಸುತ್ತೀರಾ ಬಸವಾಭಿಮಾನಿಗಳೇ ?

ಅಲ್ಲಿ ಮಾತೆ ಮಹಾದೇವಿಯವರು ಚನ್ನಮಲ್ಲಿಕಾರ್ಜುನ ಎಂಬಲ್ಲಿ ಲಿಂಗದೇವ ಎಂದು ಬರೆದರು ಎಂದು ಪ್ರತಿಭಟನಾ ರ್‍ಯಾಲಿ ಕರೆದರು. ಅವರು ಬರೆಯುತ್ತಲೇ ಇರುತ್ತಾರೆ. ಇವರು ರ್‍ಯಾಲಿ ಕರೆಯುತ್ತಲೇ ಇರುತ್ತಾರೆ. ಅದಕ್ಕಾಗಿ ಶಾಲಾ ಮಕ್ಕಳು, ಅದರಲ್ಲೂ ವಿದ್ಯಾರ್ಥಿನಿಯರನ್ನು ಬಿಸಿಲಿನಲ್ಲಿ ಕಾಯಿಸುವ ಶಿಕ್ಷೆ ಏಕೆ.

ಇವರಿಗೆ ನಿಜವಾಗಿ ಕಾಳಜಿಯಿದ್ದರೆ ಜಿಲ್ಲಾಧಿಕಾರಿಗಳ ಕಛೇರಿ ಎದುರು ಆಮರಣಾಂತ ಉಪವಾಸ ಕುಳಿತುಕೊಳ್ಳಲಿ. ಅದು ಬಿಟ್ಟು ಪರೀಕ್ಷೆ ಸಮಯ ಹತ್ತಿರದಲ್ಲಿದೆ. ಈ ರೀತಿ ಪ್ರತಿಭಟನೆಗೆ ವಿದ್ಯಾರ್ಥಿನಿಯರನ್ನು ಕರೆಸುವ ಅಗತ್ಯವಿತ್ತ ?

ಮಕ್ಕಳಿಂದ ರ್‍ಯಾಲಿ ನಡೆಸಿ ತಮ್ಮ ತಮ್ಮ ಫೋಟೋ ಹಾಕಿಸಿಕೊಳ್ಳೋ ಬಸವಾಭಿಮಾನಿಗಳಿಗೆ ಏನೂ ಅರಿಯದ ಮುಗ್ಧ ವಿದ್ಯಾರ್ಥಿನಿಯರೇ ಬೇಕೆ ? ಶಾಲಾಡಳಿತಕ್ಕೆ ಹೇಳುವವರು ಕೇಳುವವರು ಯಾರೂ ಇಲ್ಲವೆ, ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ತಿಪ್ಪೇಸ್ವಾಮಿ ಎಲ್ಲಿ ಮಲಗಿದ್ದರು ಸ್ವಲ್ಪ ತಿಳಿಸುತ್ತೀರಾ. ಈಗ ತಾಲಿಬಾನ್‌ನಲ್ಲಿ ವಿಶ್ವಕ್ಕೆ ಶಾಂತಿ ದೂತ ಬುದ್ಧನ ಪ್ರತಿಮೆಗಳನ್ನು ಕೆಲವು ದುಷ್ಟರು ನಾಶಗೊಳಿಸುತ್ತಿದ್ದು, ಇಡೀ ವಿಶ್ವವೇ ಈ ಬಗ್ಗೆ ತಲೆತಗ್ಗಿಸಿರಬೇಕಾದರೆ ಆ ಬಗ್ಗೆ ಖಂಡಿಸಿ ಹೇಳಿಕೆ ನೀಡದ ದುರ್ಗದ ಸ್ವಾಮಿಗಳು ಇಂದು ಪ್ರತಿಭಟನೆ ರ್‍ಯಾಲಿ ನೇತೃತ್ವ ವಹಿಸಿ ಮಾತೆ ಮಹಾದೇವಿ ಮಾಡಿದ್ದು ತಪ್ಪು ಎಂದು ಶಿಕ್ಷೆ ನೀಡಿದ್ದು ವಿದ್ಯಾರ್ಥಿನಿಯರಿಗೆ'.

- ಎಂ.ಬಿ. ಜಯನಂದ ಮತ್ತು ರವೀಂದ್ರ,
3ನೇ ಮೇನ್, 4ನೇ ಕ್ರಾಸ್, ಜಾಲಿ ನಗರ, ದಾವಣಗೆರೆ
(ಕೃಪೆ : ಮಾರ್ಚ್ 6, ಜನತಾವಾಣಿ, ದಾವಣಗೆರೆ)

ಈ ಓದುಗರ ಪತ್ರವು ಶಾಲಾ ಮಕ್ಕಳನ್ನು ಸೇರಿಸಿಕೊಂಡು ಪ್ರದರ್ಶನವು ನಡೆಯಿತು ಎಂಬುದನ್ನು ಸಾಬೀತು ಪಡಿಸುತ್ತದೆ.

ಧಾರವಾಡದಲ್ಲಿ ಪ್ರತಿಭಟನೆ ನಡೆಸಲು ಯತ್ನಿಸಿದರು. ಜನರಿಂದ ಪ್ರೋತ್ಸಾಹ ದೊರೆಯಲಿಲ್ಲ. ಯಾಕೋ ಬೀದರ-ಗುಲಬರ್ಗಾಗಳ ಬಸವ ಕೇಂದ್ರದವರು ಹೊದ್ದು ಮಲಗಿದಂತೆ ಕಾಣುತ್ತದೆ. ಗದಗಿನಲ್ಲಿ 20 ಜನ ಜಿಲ್ಲಾಧಿಕಾರಿಗಳ ಬಳಿಗೆ ಹೋಗಿ ಬಂದರು. ಗಡದ್ದಾದ ಊಟ ಎಲ್ಲಿ ಸಿಕ್ಕರೇನು ಎಂದು ಕ್ಯಾಂಪಿನಿಂದ ಕ್ಯಾಂಪಿಗೆ ಜಿಗಿಯುವ ಮತ್ತು ಎಲ್ಲಾ ಕ್ಯಾಂಪಿನಲ್ಲೂ ಇದ್ದು ಲಾಭ ಪಡೆಯುವ ಶ್ರೀ ಹಳ್ಯಾಳರ ನೇತೃತ್ವದಲ್ಲಿ ಗದಗಿನಲ್ಲಿ ಪ್ರದರ್ಶನವಾಯಿತು. ಚಿತ್ರದುರ್ಗದಲ್ಲಿ ಅತ್ಯಂತ ಕೆಳಮಟ್ಟದ ಪ್ರದರ್ಶನ ಪ್ರಮುಖ ಸೂತ್ರಧಾರಿ ಎಸ್.ಕೆ.ಬಿ.ರಾಜನ್ ಅವರ ನೇತೃತ್ವದಲ್ಲಿ ಆಯಿತು. ಇವಿಷ್ಟೂ ಚಿತ್ರದುರ್ಗದ ಬೃಹನ್ಮಠದವರು ಏರ್ಪಡಿಸಿದವು. ಇನ್ನು ಬೇರೆ ಕೆಲವರಿಂದ ಅಲ್ಲಲ್ಲೇ ಆದವು. ವಿಧಾನ ಪರಿಷತ್ತಿನಲ್ಲಿ ಕೆಲವರಿಂದ ಪ್ರಸ್ತಾಪವಾಯಿತು.

ಆದರೆ ಹಿಂದಿನ ಪ್ರಸಂಗದಲ್ಲಿ ಧರ್ಮಪಿತರ ಕೆಲವು ವಚನಗಳಲ್ಲಿ ಕೂಡಲ ಸಂಗಮದೇವ ತೆಗೆದು ಲಿಂಗದೇವ ಮಾಡಿ ಬಸವ ವಚನ ದೀಪ್ತಿ ಮುದ್ರಿಸಿದಾಗ ಆದಷ್ಟು ಅವಾಂತರ ಈಗ ಆಗದೆ ತುಂಬಾ ದುರ್ಬಲವಾದ ವಿರೋಧವು ವ್ಯಕ್ತವಾಯಿತು ಎಂಬುದು ಬಹಳ ಗಮನಾರ್ಹ. ಚಿತ್ರದುರ್ಗದ ಬೃಹನ್ಮಠದ ಶ್ರೀಗಳು ಸಾಕಷ್ಟು ಸಮಯ, ಹಣ, ಶಕ್ತಿ ಅಪವ್ಯಯ ಮಾಡಿಕೊಂಡು, ಧರ್ಮಪಿತರು ಹೇಳುವಂತೆ, "ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯಾ" ಎಂಬುದನ್ನು ಪ್ರತ್ಯಕ್ಷ ಮಾಡಿ ತೋರಿಸುವಂತೆ ಜನರನ್ನು ಪ್ರಚೋದಿಸಲು ಯತ್ನಿಸಿದರೂ ಪ್ರತಿಭಟನೆಯು ಕಾವೇರಲಿಲ್ಲ. ಏನು ಕಾರಣಗಳಿರಬಹುದು ?

1. ಅಕ್ಕಮಹಾದೇವಿಯ ವಚನಾಂಕಿತವಾದ ಚನ್ನಮಲ್ಲಿಕಾರ್ಜುನ ಎಂಬುದನ್ನು ತೆಗೆಯದೆ, ಅದಕ್ಕೆ ವಿವರಣೆಯಾಗಿ ಮಾತ್ರ ಮಹಾದೇವಿಯಕ್ಕ ಪ್ರಿಯ ಲಿಂಗದೇವಾ ಎಂದು ಬಳಸಿದುದು ಪ್ರಮುಖ ಕಾರಣ. ಚಿತ್ರದುರ್ಗದ ಬೃಹನ್ಮಠದ ಶ್ರೀಗಳ ಹುಯಿಲಿನಿಂದ ರೋಷಗೊಂಡು ಕೆಸೆಟ್ಟು ಕೇಳಿದವರು ಚನ್ನಮಲ್ಲಿಕಾರ್ಜುನ ಹಾಗೆಯೇ ಇರುವುದು ನೋಡಿ, ತಣ್ಣಗಾಗುತ್ತಿರುವರು(ಎಂದಿನಿಂದಲೂ ನಮ್ಮ

ಮೇಲೆ ಕಿಡಿಕಾರಿಕೊಂಡೇ ಬರುತ್ತಿರುವ ಕೆಲವು ಅಕ್ಕನ ಬಳಗದವರು, ಕೆಲವು ಮಠಾಧೀಶರ ಚೇಲಾಗಳು ಮಾತ್ರ ತಣ್ಣಗಾಗುವುದಿಲ್ಲ. ಇದೇನು ಅನಿರೀಕ್ಷಿತ ಸೋಜಿಗವಲ್ಲ.) ಬೃಹನ್ಮಠದವರು ಎಬ್ಬಿಸಿದ ಮತ್ತೊಂದು ಬಿರುಗಾಳಿ "ಮಹಾದೇವಿ ಪ್ರಿಯ ಲಿಂಗದೇವ ಎಂದು ತಮ್ಮ ಹೆಸರು ಹಾಕಿಕೊಂಡಿದ್ದಾರೆ, ಲಿಂಗದೇವ ಎಂದು ಲಿಂಗಾನಂದ ಸ್ವಾಮಿಗಳ ಹೆಸರು ಹಾಕಿದ್ದಾರೆ. ಧ್ವನಿ ಸುರುಳಿಯಲ್ಲಿರುವುದು "ಮಹಾದೇವಿಯಕ್ಕ" ಎಂಬ ಪದ. ಅಕ್ಕಮಹಾದೇವಿಯನ್ನು ಶರಣರು ಕರೆದಿರುವುದು ಮಹಾದೇವಿಯಕ್ಕ ಎಂದೇ. ಹೀಗಾಗಿ ಧ್ವನಿ ಸುರುಳಿ ಕೇಳಿದಾಗ ಎಲ್ಲರಿಗೂ ಮನವರಿಕೆಯಾಗುತ್ತದೆ.

ಇನ್ನು " ಲಿಂಗದೇವ " ಪದ ನಿಜ ಬಸವ ಭಕ್ತರಿಗೆ, ಏಕ ದೇವೋಪಾಸಕರಿಗೆ ಬಲು ಆಪ್ಯಾಯಮಾನ. ಸೃಷ್ಟಿಕರ್ತನನ್ನು ಲಿಂಗಾಯತ ಧರ್ಮವು ಸೈದ್ಧಾಂತಿಕವಾಗಿ ಕರೆಯುವ ಅಮೂಲ್ಯ ಪದ " ಲಿಂಗದೇವ ". ಬಾನು ಭುವಿಗಳನ್ನೆಲ್ಲ ತುಂಬಿದ ಲಿಂಗದೇವನು ಸುಮಾರು ನಾಲ್ಕುವರೆ ವರ್ಷಗಳಲ್ಲಿ ಬಸವ ಭಕ್ತರ ಹೃನ್ಮನ ಬುದ್ಧಿಗಳನ್ನೆಲ್ಲ ವ್ಯಾಪಿಸಿಕೊಂಡು ಬಿಟ್ಟಿದ್ದಾನೆ. ಪ್ರತಿಯೊಂದು ಪದಕ್ಕೂ ವಾಚ್ಯಾರ್ಥ (etymological) ಲಕ್ಷ್ಯಾರ್ಥ (essential)ಎಂದು ಎರಡು ಇರುತ್ತವೆ. ತಾಯಿಯು ಮಗುವನ್ನು ಮುದ್ದಿಕ್ಕುತ್ತ "ನನ್ನ ಚಿನ್ನ" ಎನ್ನುತ್ತಾಳೆ. ಚಿನ್ನ ಎನ್ನುವ ಪದದ ವಾಚ್ಯಾರ್ಥ ಬೆಲೆ ಬಾಳುವ, ಕಲಂಕಿತಗೊಳ್ಳದ ಲೋಹ ಎಂದು. ಇಲ್ಲಿ ತಾಯಿಯು ಚಿನ್ನ ಎಂದಾಗ ನನ್ನ ಮುದ್ದು ಮರಿ ಎಂದು ಅರ್ಥ ಮಾಡಬೇಕೇ ವಿನಾ ಆ ಮಗುವು ಚಿನ್ನದ ಗಟ್ಟಿ ಎಂದು ಆಭರಣ ಮಾಡಲು ಒಯ್ಯಬಾರದು. ಹಾಗೆ ಅಕ್ಕಮಹಾದೇವಿ ಚನ್ನಮಲ್ಲಿಕಾರ್ಜುನಾ ಎಂಬ ಮುದ್ರಿಕೆಯೊಂದನ್ನೇ ಬಳಸಿದ್ದರೂ ಒಂದು ಹಂತದವರೆಗೆ ಶಿವನ ಒಂದು ರೂಪವಾದ ಶ್ರೀಶೈಲದ ಚನ್ನಮಲ್ಲಿಕಾರ್ಜುನನಿಗೆ ಅನ್ವಯಿಸಿದರೆ ನಂತರದಲ್ಲಿ ಅನ್ವಯಿಸುವುದು ನಿರಾಕಾರ, ನಿರ್ಗುಣನಾದ ಲಿಂಗದೇವನಿಗೆ ; ಸಾವಿಲ್ಲದ, ಕೇಡಿಲ್ಲದ, ರೂಪಿಲ್ಲದ, ಕುಲ, ಸೀಮೆಯಿಲ್ಲದ ಎಡೆಯಿಲ್ಲದ ನಿಸ್ಸೀಮ ಚೆಲುವಂಗೆ. ದರ್ಶನ ಶಾಸ್ತ್ರ, ತತ್ತ್ವಜ್ಞಾನ ದೃಷ್ಟಿಯಿಂದ ಇದನ್ನು ಅರಿಯುವುದು ಅತ್ಯಂತ ಅಗತ್ಯವಿದೆ.

ಈ ಹಿಂದೆ, ಲಿಂಗದೇವ ವಚನಾಂಕಿತ ಪ್ರಸಂಗದಲ್ಲಿ ಸತ್ಯ ಮನವರಿಕೆಯಾಗದೆ ಕೆಲವು ಬಸವ ಭಕ್ತರು, ಕೆಲವು ಕಾಲ ನಮ್ಮ ಮೇಲೆ ಮುನಿದಿದ್ದರೂ ಈಗ ಸರಿಯಾಗಿದ್ದಾರೆ. ಈಗ ತಾತ್ತ್ವಿಕ, ಸೈದ್ಧಾಂತಿಕ ತಿಳುವಳಿಕೆ ಗಟ್ಟಿಗೊಂಡುದರಿಂದ ನಿಜ ಬಸವ ಪಥಿಕರು ಈಗ ಗಾಬರಿಗೊಳ್ಳಲಿಲ್ಲ, ಪ್ರಚೋದಿತರಾಗಲಿಲ್ಲ, ಬೃಹನ್ಮಠದ ಶ್ರೀಗಳ ಕುತಂತ್ರದ ಬಲೆಗೆ ಸಿಕ್ಕಿಕೊಳ್ಳಲಿಲ್ಲ

2. ಚಿತ್ರದುರ್ಗ ಬೃಹನ್ಮಠದವರು ಈಗ ಬಸವಾ ಬಸವಾ ಎಂದು ಜಪಿಸತೊಡಗಿದ್ದರೂ ಉಳಿದ ಕೆಲವು ಆಚರಣೆ, ನಡೆ - ನುಡಿ, ಕುತಂತ್ರ-ದೌರ್ಜನ್ಯಗಳಲ್ಲಿ ಹೆಸರು ಕೆಡಿಸಿಕೊಂಡಿರುವುದರಿಂದ ಅವರ ಮಾತಿನ ತೂಕ ಕಡಿಮೆಯಾಗಿರುವುದನ್ನು ಈ ಪ್ರತಿಭಟನಾ ಚಳುವಳಿ ಟುಸ್ಸೆಂಬುದರ ಮೂಲಕ ಸಾಬೀತು ಪಡಿಸಿದೆ. ತೆಹಲ್ಕಾ ಡಾಟ್‌ಕಾಂನವರು ಹೂಡಿದ ಷಡ್ಯಂತ್ರ ಹೇಗೆ ಬಯಲಾಯಿತೋ ಹಾಗೆ ಚಿತ್ರದುರ್ಗ ಬೃಹನ್ಮಠದವರು ನಾಲ್ಕುವರೆ ವರ್ಷಗಳ ಅವಧಿಯಲ್ಲಿ ಮಾಡಿದ ದುಷ್ಟ ತಂತ್ರಗಳು ಬಯಲಾಗಿ ಸಾತ್ವಿಕರು, ಸಜ್ಜನರು ಅವರನ್ನು ಬೆಂಬಲಿಸುವುದನ್ನು ಕಡಿಮೆ ಮಾಡಿದ್ದಾರೆ. ಅವರಿಗೆ ಇರುವುದು ಮಾತಾಜಿಯವರ ಮೇಲೆ ವೈಯಕ್ತಿಕ ದ್ವೇಷ ; ಅದಕ್ಕೆ ವಚನಾಂಕಿತ ಬದಲಾವಣೆಯಾಯಿತೆಂದು ತಾತ್ತ್ವಿಕ ನೆಪ ಮುಂದಿಡುತ್ತಾರೆ ಎಂಬುದನ್ನು ಜನರು ಅರ್ಥಮಾಡಿಕೊಂಡಿದ್ದಾರೆ.

3. ಸುಮಾರು 4 ವರ್ಷಗಳ ಅವಧಿಯಲ್ಲಿ ನಮ್ಮ ವಿರುದ್ಧ ಹಲವಾರು ಸ್ವಾಮಿಗಳು ಬೃಹನ್ಮಠದವರ ನೇತೃತ್ವದಲ್ಲಿ ಒಂದಾದರು. ಇವರಿಗೂ ಶಕ್ತಿವರ್ಧನೆಗೆ ಅದು ಅಗತ್ಯವಿತ್ತು. ಆದರೆ ಇವರ ನುಂಗುವ ಸ್ವಭಾವ ಈ ಅವಧಿಯಲ್ಲಿ ಅವರಿಗೆ ಮನವರಿಕೆಯಾಯಿತು ಅಂತ ಕಾಣುತ್ತೆ. ಏಕೆಂದರೆ ಹಣ, ಸನ್ಮಾನ, ಬಿರುದು, ಶಾಲುಗಳ ಆಮಿಷ ಒಡ್ಡಿ ಇನ್ನಿತರ ಮಠದ ವಿಶೇಷ ಭಕ್ತ (ಭುಕ್ತ) ರನ್ನು ತಮ್ಮ ಕಡೆಗೆ

ಒಲಿಸಿಕೊಳ್ಳುವುದು ; ಗುರು - ಶಿಷ್ಯರಲ್ಲಿ ಕದನ ತಂದಿಕ್ಕುವುದಯ, ಖೋಟಾ ಟ್ರಸ್ಟ್ ರಚಿಸಿ ಗೊಂದಲ ಹುಟ್ಟಿಸುವುದು. ಬಲವಾದ ರಾಜಕಾರಣಿಗಳನ್ನು ತಮ್ಮೆಡೆಗೆ ಸೆಳೆದುಕೊಂಡು ಸಂಘ-ಸಂಸ್ಥೆಗಳನ್ನು, ಮಠಗಳನ್ನೇ ನುಂಗುವುದು. ಅಬ್ಬಬ್ಬಾ ಏನು ಮಹಿಮೆ ! ಇದನ್ನೆಲ್ಲ ಕಂಡು ಅನೇಕರು ಬೆಚ್ಚಿಬಿದ್ದರು.

ಸಂಕೇಶ್ವರದ ಶಿವನಗೌಡ ಪಾಟೀಲರು ತುಂಬಾ ಚೆನ್ನಾಗಿ ಒಂದು ಕಥೆ ಕೇಳಿ ಬೃಹನ್ಮಠದವರ ಈ ಸ್ವಭಾವವನ್ನು ಚಿತ್ರಿಸಿದರು.

ಒಂದು ದಿನ ಕಾಡಿನಲ್ಲಿ ಗಿಡದ ನೆರಳಲ್ಲಿ ಮೊಲವೊಂದು ಕುಳಿತಿತ್ತು. ತಂಗಾಳಿಯು ಬೀಸುತ್ತಿತ್ತು. ಅದಕ್ಕೆ ಜೊಂಪು ಹತ್ತಿತ್ತು. ಆಗ ಗಾಳಿ ಬೀಸಿ ನಾಲ್ಕಾರು ಎಲೆಗಳು ಬಿದ್ದವು. ಇದು ಗಾಬರಿಗೊಂಡು ಪ್ರಳಯವಾಗುತ್ತೆ, ಆಕಾಶ ಕಳಚಿ ಬೀಳುತ್ತೆ ಎಂದು ಓಡತೊಡಗಿತು. ಮೊಲ ಓಡುವುದನ್ನು ನೋಡಿ ಇನ್ನಿತರ ಪ್ರಾಣಿಗಳು ಕೇಳಿದವು. ಅವೂ ಗಾಬರಿಯಿಂದ ಓಡತೊಡಗಿದವು. ನರಿಯೊಂದು ಈ ಓಟದ ದಂಡು ನೋಡಿ ಕಾರಣ ಕೇಳಿತು. ಮನಸ್ಸಿನಲ್ಲೇ ಮುಸಿ ಮುಸಿ ನಕ್ಕಿತು. ಅದಕ್ಕೆ ಹುಲಿರಾಯನನ್ನು ಒಲಿಸಿಕೊಳ್ಳಬೇಕಾಗಿತ್ತು. ಅದಕ್ಕಾಗಿ ಉಪಾಯ ಹೂಡಿತು. " ಎಲ್ಲಿಗೆ ಅಂತ ಓಡುತ್ತೀರಿ ? ಇಲ್ಲೊಂದು ಸುರಕ್ಷಿತವಾದ ಸ್ಥಳವಿದೆ. ಯಾವ ಪ್ರಳಯವಾದರೂ ನಿಮಗೆ ಏನೇನೂ ಆಗದು" ಎಂದು ನಂಬಿಸಿ, ಕರೆದೊಯ್ದಿತು. ಅಲ್ಲೊಂದು ಹುಲಿಯ ಗವಿಯಿತ್ತು. ಹುಲಿಗೆ ಮರೆಯಲ್ಲಿರಲು ಹೇಳಿ ಆ ಪ್ರಾಣಿಗಳನ್ನು ಒಳಗೆ ಸುರಕ್ಷಿತವಾಗಿರಿ ಎಂದು ಗವಿಯೊಳಕ್ಕೆ ನುಗ್ಗಿಸಿ, ನಂತರ ಹುಲಿ - ನರಿ ಎರಡೂ ಸೇರಿ ಒಂದು ಕಲ್ಲನ್ನು ಅಡ್ಡ ಇಟ್ಟು ತಮಗೆ ಅಗತ್ಯವೆನಿಸಿದಾಗ ಒಂದೊಂದೇ ಪ್ರಾಣಿಯನ್ನು ನುಂಗ ತೊಡಗಿದವು.

ಲಿಂಗದೇವನ ಪ್ರಸಂಗದ ವೇಳೆಯಲ್ಲಿ ಬೃಹನ್ಮಠದವರು ಎಬ್ಬಿಸಿದ ಬೊಬ್ಬೆಯಲ್ಲಿ ಆಗಲೇ ಬಾಯೊಳಗೆ ಅರ್ಧ ಹೋಗಿ ಹೊರಬಂದಂತಹ ಅನೇಕ ಮಠಾಧೀಶರು ಈ ದೃಷ್ಟಾಂತ ಕಥೆ ಓದಿ, ಒಳಗೊಳಗೇ ಖುಷಿ ಪಡುವುದರಲ್ಲಿ ಸಂದೇಹವಿಲ್ಲ. ಹೀಗಾಗಿ ಅನೇಕರು ಬಸವ ಕೇಂದ್ರಗಳಿಂದ ಮೆಲ್ಲನೆ ಜಾರಿ ಪುನಃ ಸ್ವತಂತ್ರರಾಗಿ ಅಕ್ಕಮಹಾದೇವಿ ವಚನಾಂಕಿತ ವಿಷಯಕ್ಕೆ ಕೈ ಹಾಕಲು ಪ್ರಯುತ್ನವನ್ನೇ ಮಾಡಿಲ್ಲ

ಇನ್ನು ಈ ವಿರೋಧಾತ್ಮಕ ಪ್ರತಿಭಟನೆಯಲ್ಲಿ ಭಾಗಿಗಳಾದವರನ್ನು ವರ್ಗೀಕರಿಸಿ ಕೆಲವೊಂದು ನಿರ್ಣಯಕ್ಕೆ ನಾವು ಬರಬಹುದು

1. ಸೂತ್ರಧಾರಿಗಳಾದ ಬೃಹನ್ಮಠದವರು :

ಇವರ ಬಗ್ಗೆ ಸಾಕಷ್ಟು ವಿಶ್ಲೇಷಣೆಯಾಗಿದೆ. ಕಬಳಿಸುವ ಪ್ರವೃತ್ತಿ ಮತ್ತು ವೈಯಕ್ತಿಕ ದ್ವೇಷ - ಮಾತ್ಸರ್ಯದಿಂದ ಪ್ರೇರಿತರಾಗಿ ಇವರು ನಮ್ಮ ಬಗ್ಗೆ ಅಪಪ್ರಚಾರ ಮಾಡಲು ಏನು ಸಿಗುತ್ತದೆ ಎಂದು ಹೊಂಚು ಹಾಕುತ್ತಿರುತ್ತಾರೆ. ಇವರಿಗೆ ಸ್ವತಂತ್ರವಾಗಿ ಬಸವ ಕೇಂದ್ರಗಳಿಗೆ ತಮ್ಮ ಬೋಧೆಯಿಂದ, ಬರಹದಿಂದ ಜನರನ್ನು ಆಕರ್ಷಿಸಿ ಸಂಸ್ಥೆ ಕಟ್ಟಲು ಬರದು. ಹೀಗಾಗಿ ಯಾರೋ ಬೆಳೆಸಿದ ಹೊಲದಿಂದ ತೆನೆಗಳನ್ನು ಕದಿಯುವಂತೆ ನಮ್ಮ ರಾಷ್ಟ್ರೀಯ ಬಸವ ದಳಗಳಲ್ಲಿ ಅತೃಪ್ತರಾಗಿದ್ದವರನ್ನು ತಮ್ಮ ಕಡೆ ಕರೆದುಕೊಂಡು ಬಸವ ಕೇಂದ್ರ ಮಾಡುತ್ತಾರೆ.

ರಾಷ್ಟ್ರೀಯ ಬಸವ ದಳಗಳಲ್ಲಿ ತಮ್ಮ ದುಡ್ಡು ಖರ್ಚು ಮಾಡಿಕೊಂಡು ಭಕ್ತಿ ಮಾಡುವ ಪರಿಪಾಠವಿದೆಯೇ ವಿನಾ ಎಲ್ಲಿಂದಲೋ ಹಣವು ಹರಿದು ಬರುವುದಿಲ್ಲ. ಕೆಲವರು ಹಣದ ಆಸೆಯಿಂದ, ಮತ್ತೆ ಕೆಲವರು ಪದಾಧಿಕಾರಿಗಳಾಗುವ ಆಸೆಯಿಂದ, ಮತ್ತೆ ಕೆಲವರು ಬಿರುದು ಶಾಲುಗಳಿಂದ ಸಮ್ಮೋಹಿತರಾಗಿ ಹೋಗುವುದುಂಟು. "**ಶಿವಭಕ್ತಿಯು ಕರ್ಮವುಂ ಎಂದೂ ಒಂದಾಗಿರದು** " ಎಂದು ಹರಿಹರ ಕವಿ ಹೇಳುವಂತೆ "**ಬಸವ ತತ್ತ್ವವು ಗೂಂಡಾಗಿರಿಯು ಎಂದೂ ಒಂದಾಗಿರದು** " ಎಂದು ಅಪ್ಪಿ ತಪ್ಪಿ ಅತ್ತ ಹೋದ ನಿಜ ಬಸವ ಭಕ್ತರಿಗೆ ಈ ಹೊತ್ತಿಗೆ ಮನವರಿಕೆಯಾಗಿರಲೂ ಸಾಕು.

ಅಂಗುಲಿ ಮಾಲನು ದಾರಿಯಲ್ಲಿ ದರೋಡೆ, ಕೊಲೆ ಇತ್ಯಾದಿ ಮಾಡಿ ಒಂದೊಂದು ಘಟನೆಗೆ ಒಂದು ಗುರುತಾಗಿ ಸತ್ತವರ ಹೆಬ್ಬೆಟ್ಟುಗಳನ್ನು ಸರವಾಗಿ ಪೋಣಿಸಿಕೊಳ್ಳುತ್ತಿದ್ದನಂತೆ. ಹಾಗೆ ಇವರು,

1. ಮೈಸೂರಲ್ಲಿ ಬಸವ ಮಂದಿರದಲ್ಲಿ ನಡೆಯುತ್ತಿದ್ದ ರಾಷ್ಟ್ರೀಯ ಬಸವ ದಳದವರ ಪ್ರಾರ್ಥನೆ ನಿಲ್ಲಿಸಿದೆವು.
2. ದಾವಣಗೆರೆಯಲ್ಲಿ ನಡೆಯುತ್ತಿದ್ದ ಪ್ರವಚನ ನಿಲ್ಲಿಸಿದೆವು.
3. ಮೈಸೂರಲ್ಲಿ ನಡೆಯುತ್ತಿದ್ದ ಪ್ರವಚನ ನಿಲ್ಲಿಸಿದೆವು.
4. ಭದ್ರಾವತಿಯ ಅಕ್ಕಮಹಾದೇವಿ ಮಂದಿರದಲ್ಲಿ ಪ್ರಾರ್ಥನೆಗೆ ಜಾಗಕೊಡದಂತೆ ಮಾಡಿ ಪ್ರಾರ್ಥನೆ ನಿಲ್ಲಿಸಿದೆವು.
5. ಚಿತ್ರದುರ್ಗದ ರಾಷ್ಟ್ರೀಯ ಬಸವ ದಳದ ಬಸವ ಮಂಟಪವನ್ನು ದೌರ್ಜನ್ಯದಿಂದ ಕಿತ್ತುಕೊಂಡು ಅಲ್ಲಿ ನಡೆಯುತ್ತಿದ್ದ ಪೂಜೆ - ಪ್ರಾರ್ಥನೆ - ನೆನಹು ನಿಲ್ಲಿಸಿ ಈಗ ಬಾಡಿಗೆಗೆ ಕೊಟ್ಟು ಹಣ ಪಡೆಯುತ್ತಿದ್ದೇವೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಛೇ ! ಎಂತೆಂತಹ ದಾಖಲೆಯ ಕೆಲಸಗಳು !
6. ಕಾವೇರಿ ಟಿ. ವಿಯಲ್ಲಿ ಬರುತ್ತಿದ್ದ ಮಾತಾಜಿಯವರ ಪ್ರವಚನಗಳನ್ನು ನಿಲ್ಲಿಸಲು ಅದರ ಮುಖ್ಯಸ್ಥರನ್ನು ಕರೆಸಿ, ಹಾಕಬಾರದೆಂದು ಹೇಳಿ ನಿಲ್ಲಿಸಿದವನು ನಾನೇ ಎಂದು ದಿ: 3-3-2001ರಂದು ದಾವಣಗೆರೆಯಲ್ಲಿ ಸೇರಿದ ಮಹಿಳಾ ಸಂಘಟನೆಗಳ ಸಭೆಯಲ್ಲಿ (ಉತ್ತರ ಕುಮಾರನಂತೆ) ಶಿವಮೂರ್ತಿ ಶರಣರು ಹೇಳಿದರಂತೆ.

ಈ ಅಟ್ಟಹಾಸ ದೇವರು ಮೆಚ್ಚುವಂಥದೆ ? ಧರ್ಮಗುರು ಬಸವಣ್ಣನವರು ಅನುಮೋದಿ-ಸುವಂಥದೆ ? "ನನ್ನ ಶತ್ರುವೇ ಆಗಿರಲಿ. ತನ್ನ ಪ್ರತಿಭೆ-ವಾಕ್ಚಾತುರ್ಯದಿಂದ ನಮ್ಮ ಧರ್ಮವನ್ನು ಪ್ರಚಾರ ಮಾಡುತ್ತಿದ್ದಾರೆ. ಎದ್ದು ಬಿದ್ದು ಮಹಾಭಾರತ-ರಾಮಾಯಣಗಳ ಗೋಜಲಿನಲ್ಲಿ ಸಿಕ್ಕಿದ್ದ ಜನರಿಗೆ ಒಳ್ಳೆಯ ಸುಜ್ಞಾನ ನೀಡುತ್ತಿದ್ದಾರೆ." ಎಂಬ ಸಂತೋಷ, ಸಮಾಧಾನ ಬೇಡವೆ ? ಕುಕೃತ್ಯಗಳನ್ನೇ ಬೃಹನ್ಮಠದವರು ಸುಕೃತ್ಯಗಳೆಂದು, ತಾವು ಮಾಡಬೇಕಾದ ಕರ್ತವ್ಯಗಳೆಂದು ತಿಳಿದಂತೆ ಕಾಣುತ್ತದೆ.

2. ಪೂಜ್ಯ ಸಿದ್ಧಗಂಗಾ ಶ್ರೀಗಳು :

ಇವರ ಹೇಳಿಕೆ ಒಂದೇ ಒಂದು ಸಲ ಬಂದಿತು. ನೆಲಮಂಗಲದಲ್ಲಿ ದಿ: 7-3-2001 ರಂದು ಗ್ರಾಮಾಂತರ ಬಸವ ಜಯಂತಿ ಮಾಡಿದಾಗ.

ಕನ್ನಡ ಪ್ರಭಾ(8-3-2001 ಸಂಚಿಕೆ) ವರದಿಯ ಪ್ರಕಾರ -

" ಬಹಳ ವರ್ಷಗಳ ಹಿಂದೆಯೇ ಜನತೆಯ ಸಮಾನತೆಗೆ ಕೊಡುಗೆಯನ್ನಿತ್ತ ವಚನ ಸಾಹಿತ್ಯ ಮತ್ತು ಶ್ಲೋಕಗಳನ್ನು ವಿಕೃತಗೊಳಿಸುತ್ತಿರುವುದು ಖಂಡನಾರ್ಹ ಬೆಳವಣಿಗೆಯಾಗಿದೆ. " ಎಂದು ಹೇಳಿದ್ದಾರೆ. ಇದರಲ್ಲಿ ನಮ್ಮ ಹೆಸರನ್ನೇನೂ ಪ್ರಸ್ತಾಪಿಸಿರದಿದ್ದರೂ ಬಹಳ ಬಿಸಿ ಸುದ್ದಿಯನ್ನಾಗಿ ಚಿತ್ರದುರ್ಗದ ಬೃಹನ್ಮಠದವರು ಮಾಡಿದ್ದರಿಂದ ಅಕ್ಕಮಹಾದೇವಿ ವಚನಾಂಕಿತಕ್ಕೆ ಸಂಬಂಧಿಸಿ ಇರಬಹುದು ಎಂದು ಊಹಿಸಬೇಕಾಗಿದೆ. ತಮ್ಮ ಆಚರಣೆಯಲ್ಲಿ ಬಸವಾದಿ ಪ್ರಮಥರ ತತ್ತ್ವ - ಸಿದ್ಧಾಂತ, ಆಚಾರ - ವಿಧಿ ವಿಧಾನಗಳನ್ನು ಸಂಪೂರ್ಣವಾಗಿ ವಿಕೃತಗೊಳಿಸಿರುವುದರಿಂದ ಪೂಜ್ಯ ಶ್ರೀ ಸಿದ್ಧಗಂಗಾ ಶ್ರೀಗಳಿಗೆ ವಚನ ಸಾಹಿತ್ಯದ ಶುದ್ಧಿ - ಅಶುದ್ಧಿ, ವಿಕೃತಿ - ಸುಕೃತಿಯ ಬಗ್ಗೆ ಮಾತನಾಡಲು ಯಾವ ನೈತಿಕ ಹಕ್ಕೂ ಉಳಿದಿಲ್ಲ

ಒಂದು ಸತ್ಯ ಸಂಗತಿಯನ್ನು ಮೊದಲ ಬಾರಿ ಹೇಳುತ್ತಿದ್ದೇನೆ. ಪಂಚಾಚಾರ್ಯ ಗುಂಪಿನ ಮಠಾಧೀಶರ ಬಗ್ಗೆ ನಾವು ಹೆಚ್ಚು ಗಂಭೀರವಾಗಿ ಚಿಂತಿಸಿಲ್ಲ. ಏಕೆಂದರೆ ಅವರು ನಮ್ಮವರಲ್ಲ ಎಂದು ಪ್ರಾಜ್ಞ ಬಸವ ಪಥಿಕರು ಎಂದೋ ತಿಳಿದಿದ್ದಾರೆ. ಬಸವ ಗುರುವಿನ ಹೆಸರನ್ನು ಪ್ರಸ್ತಾಪಿಸುವ ವಿರಕ್ತ ಮಠಾಧೀಶರ ಬಗ್ಗೆ ಬಸವ ಭಕ್ತರಿಗೆ ತುಸು ಅಭಿಮಾನ. ಅದರಲ್ಲೂ ಜ್ಞಾನದಾಸೋಹ ಮಾಡುವಲ್ಲಿ

ಮುಂದಿರದಿದ್ದರೂ ವಿದ್ಯಾದಾಸೋಹದಲ್ಲಿ ಸಿದ್ಧಗಂಗಾ ಪೂಜ್ಯರು ಅಗ್ರಗಣ್ಯರಾಗಿರುವುದರಿಂದ ಅವರ ಬಗ್ಗೆ ಹೆಚ್ಚಿನ ಗೌರವ - ಅಭಿಮಾನ ಇರುವುದು ಸಹಜ. ಆದರೆ ಅವರು ಉಳಿದೆಲ್ಲ ವಿರಕ್ತರಿಗಿಂತ ಹೆಚ್ಚಿನ ಮೂಢನಂಬಿಕೆ, ಬಹುದೇವತೋಪಾಸನೆಯಲ್ಲಿ ನಿರತರಾಗಿರುವುದರಿಂದ (ಜನವರಿ - ಫೆಬ್ರವರಿ ಕಲ್ಯಾಣ ಕಿರಣದಲ್ಲಿ ವಿವರಗಳಿರುವುದರಿಂದ ಪುನರಾವರ್ತನೆ ಮಾಡುವುದಿಲ್ಲ) ಕಂಡ ಕಂಡ ದೇವತೆಗಳ ಪ್ರತಿಷ್ಠಾಪನೆ, ಕುಂಭಾಭಿಷೇಕ ಮುಂತಾದಕ್ಕೆ ಹೋಗುವುದರಿಂದ " ಇದು ಲಿಂಗಾಯತ ಧರ್ಮವಲ್ಲ ; ಧರ್ಮಗುರು ಬಸವಣ್ಣನವರು ಪೂಜಿಸಲು ಹೇಳಿದ್ದು ಸೃಷ್ಟಿಕರ್ತ ಲಿಂಗದೇವನನ್ನು ಕೂಡಲ ಸಂಗಮೇಶ್ವರ ಸ್ಥಾವರ ಲಿಂಗವನ್ನಲ್ಲ " ಎಂದು ಘೋಷಿಸಿ ಕೂಡಲ ಸಂಗಮದೇವದ ಬದಲು ಲಿಂಗದೇವಾ ವಚನಾಂಕಿತ ಇಟ್ಟುದು. ಈ ಬದಲಾವಣೆ ಇಂಥವರಿಗಾಗಿ, ಇವರಿಗಾಗಿಯೇ ಆಗಿದ್ದು ಎಂದು ಧೃಢೀಕರಿಸಲು ಬಯಸುತ್ತೇನೆ.

ವಾದದ ಮಧ್ಯೆ ಓರ್ವರು ಕೇಳಿದರು, " ಹಾಗಾದರೆ ಲಿಂಗದೇವ ವಚನಾಂಕಿತ ವಾಪಸ್ಸು ಪಡೆಯುವುದಿಲ್ಲವೆ ? " ಎಂದು. ನಾನು ನಕ್ಕು ಹೇಳಿದೆ, " ಪಡೆಯುತ್ತೇನೆ ; ಎಲ್ಲ ವಿರಕ್ತ ಸ್ವಾಮಿಗಳು ಮುಖ್ಯವಾಗಿ ಸಿದ್ಧಗಂಗಾ ಸ್ವಾಮಿಗಳು ಏಕ(ಲಿಂಗ) ದೇವ ನಿಷ್ಠೆ ಅಳವಡಿಸಿಕೊಂಡಾಗ " ಎಂದೆ.

" ಅವರು 'ಅಳವಡಿಸಿಕೊಂಡರೆ ಆಗ-----"

" ಅವರಲ್ಲಿ ಆ ಆತ್ಮಬಲವಿಲ್ಲ. ಒಂದು ವೇಳೆ ಅಳವಡಿಸಿಕೊಂಡರೆ ಅವರಿಂದಾಗಿ ಅವರ ಅನುಯಾಯಿಗಳೂ ಏಕ (ಲಿಂಗ) ದೇವ ನಿಷ್ಠೆ ಅಳವಡಿಸಿಕೊಂಡರೆ ಅಷ್ಟರೊಳಗೆ " ಲಿಂಗದೇವ " ದ ಪರಿಕಲ್ಪನೆಯ ಮಹತ್ವ ಅರ್ಥವಾಗಿರುತ್ತದೆ. ಆಗ ಎಲ್ಲರೂ ಲಿಂಗದೇವವೇ ಇರಲಿ ಎಂದು, ತೆಗೆಯ ಹೋದರೆ ವಿರೋಧಿಸುತ್ತಾರೆ. " ಎಂದೆ. ನನ್ನ ಮಾತಿನಲ್ಲಿರುವ ಕಟುಸತ್ಯವನ್ನು ನೀವೆಲ್ಲ ಅರಿತುಕೊಳ್ಳುವಿರೆಂದು ಭಾವಿಸುವೆ.

ಗ್ರಾಮಾಂತರ ಬಸವ ಜಯಂತಿ

ಒಂದು ಸಾಮಾನ್ಯ ವಿಷಯದಲ್ಲಿಯೂ ಅನೇಕರಿಗೆ ಚಿಂತನ ಶಕ್ತಿ ಇರುವುದಿಲ್ಲ. ಜಗತ್ತಿನ ಯಾವುದೇ ಧರ್ಮದವರನ್ನು ತೆಗೆದುಕೊಳ್ಳಿರಿ. ಜಯಂತಿಗಳನ್ನು ಆಯಾ ಮಹಾಪುರುಷರು ಹುಟ್ಟಿದ ದಿನ ಮಾಡುತ್ತಾರೆ. ಅಂದೇ ಜ್ಞಾನ ಗೋಷ್ಠಿಯನ್ನು ಏರ್ಪಡಿಸಿದರೆ ಉಪನ್ಯಾಸಕರು ಸಿಗುವುದಿಲ್ಲ ಎಂದು ಉಪನ್ಯಾಸವನ್ನು ಬೇರೆ ದಿನ ಇಟ್ಟರೂ ಬಸವ ಜಯಂತಿಯಂದು ಪೂಜೆ, ತೊಟ್ಟಿಲು ಕಾರ್ಯಕ್ರಮ, ಮೆರವಣಿಗೆ, ಉತ್ಸವ, ಪಥ ಸಂಚಲನ ತಪ್ಪದೇ ಇಡಬೇಕು. ಅದು ಬಿಟ್ಟು ಮುಂದಿನ ಬಸವ ಜಯಂತಿ ಏಪ್ರಿಲ್ 26ಕ್ಕೆ, ಇದು ಹತ್ತಿರ ಬರುತ್ತಿದ್ದರೂ ನೆಲಮಂಗಲದಲ್ಲಿ ಮಾರ್ಚ್ 7ರಂದು ಗ್ರಾಮಾಂತರ ಬಸವ ಜಯಂತಿ ಮಾಡಿದ್ದಾರೆ. ಇದೇಕೆ ಹೀಗೆ ? ಎಂದರೆ ಬೇರೆ ಪದ ಹುಡುಕಲು ಸಿದ್ಧಗಂಗಾ ಮಠದವರಿಗೆ ಹೊಳೆದಿಲ್ಲ. " ಬಸವ ಜ್ಯೋತಿ " ಕಾರ್ಯಕ್ರಮ ಎನ್ನಬಹುದಲ್ಲವೆ ? ಜಯಂತಿಗೆ ಸಮಯದ ಮಿತಿ ಇರುತ್ತದೆ, ಬಸವ ಜ್ಯೋತಿಯನ್ನು, ಅದರ ನಿಮಿತ್ತ ಅನುಭವ ಗೋಷ್ಠಿಯನ್ನು ಯಾವಾಗ ಬೇಕಾದರೂ ಇಡಬಹುದು ; ಸಮಯದ ಮಿತಿ ಇರದು. ಪ್ರತಿಯೊಂದರಲ್ಲೂ ಚಿಂತನೆಯ ಅಗತ್ಯತೆ ಇದೆ. ನಮ್ಮವರ ಕೆಲವು ಮಠಗಳ ಹೆಸರು ನೋಡಿದರೆ ನಗು ಬರುತ್ತದೆ. ಬೇಲಿ ಮಠ, ತಿಪ್ಪೇಮಠ, ಗಾಂಜಾಂಮಠ ; ತಮ್ಮ ಮಠಗಳಿಗೆ ತಾತ್ವಿಕ ಹೆಸರು ಇಟ್ಟುಕೊಳ್ಳಲು ಸಹ ಬರದು. ಚಿಂತನೆಯನ್ನೇ ಮಾಡದೆ ಚಿಂತನೆ ಮಾಡಿ ಸಮಂಜಸವಾಗಿ ಸತ್ಯವನ್ನು ಹೇಳುವವರನ್ನೇ ಟೀಕಿಸಿದರೆ ಹೇಗೆ ?

3. ಪಂಚಾಚಾರ್ಯ ಸ್ವಾಮಿಗಳು :

ಪಂಚ ಪೀಠಗಳ ಐವರು ಗುರುಗಳು ಯಾಕೋ ವಚನಾಂಕಿತ ಕುರಿತು ದಿವ್ಯ ಮೌನಿಗಳಾಗಿರುವುದು ನನಗೆ ಸಂತೋಷ ತಂದಿದೆ. ಅವರು ವೀರಶೈವರು ; ವಚನ ಸಾಹಿತ್ಯವು ಲಿಂಗಾಯತ ಧರ್ಮಕ್ಕೆ

ಸಂಬಂಧಿಸಿದುದು ; ಆದ್ದರಿಂದ ಪರಧರ್ಮೀಯರ ವಿಷಯದಲ್ಲಿ ಹಸ್ತಕ್ಷೇಪ ಮಾಡಬಾರದೆಂಬ ವಿವೇಕ ಜ್ಞಾನದಿಂದಲೋ ಏನೋ ಅವರು ಸುಮ್ಮನಿದ್ದಾರೆ. ಅಥವಾ ಬಸವ ಪಥಿಕರೆಂದು ಅವರವರೇ ಕಚ್ಚಾಡುವಾಗ ತಮ್ಮ ಮೂಗು ತೂರಿಸುವಿಕೆ ಅನಗತ್ಯ ಎಂದೂ ಭಾವಿಸಿರಬಹುದು.

ಆದರೆ ಅವರ ಪರಂಪರೆಯ ತುಮಕೂರಿನ ಹಿರೇಮಠದ ಶಿವಾನಂದ ಸ್ವಾಮಿಗಳು, ಶಿವಗಂಗಾ ಮಠದ ಶ್ರೀ ಮಲಯ ದೇಶೀಕೇಂದ್ರ ಶಿವಾಚಾರ್ಯ ಸ್ವಾಮಿಗಳು ಪ್ರತಿಭಟನಾ ಪ್ರದರ್ಶನದಲ್ಲಿ ಪತ್ರಿಕಾ ಹೇಳಿಕೆ ಕೊಡುವುದರಲ್ಲಿ (ನನ್ನ ಗಮನಕ್ಕೆ ಬಂದಿರುವುದು) ಮುಂದಾಗಿದ್ದಾರೆ. ಇದು ಬಲು ಸೋಜಿಗದ ಸಂಗತಿ. ಏಕೆಂದರೆ ಬಹುದೇವತೋಪಾಸಕರು ವೇದಾಗಮ, ಪುರಾಣ, ಶೃತಿ - ಸ್ಮೃತಿಗಳ ಪಾಲಕರಾದ ಈ ಸ್ವಾಮಿಗಳಿಗೆ ಏಕದೇವೋಪಾಸನೆಯ ಸುದ್ದಿ ಏಕೆ ? ವಚನ ಸಾಹಿತ್ಯದ ಗೊಡವೆ ಏಕೆ ? ಇಷ್ಟು ದಿನ ವೀರಶೈವವು ಒಳಗೆ ಸೇರಿಕೊಂಡು ಮುಲುಗುತ್ತ ಇಲ್ಲದ ಗೊಂದಲಕ್ಕೆ ಕಾರಣವಾಗಿತ್ತು. 2001ರ ಜನಗಣತಿಯ ಸನ್ನಿವೇಶದಲ್ಲಿ ವೀರಶೈವವನ್ನು ಸ್ಪಷ್ಟವಾಗಿ ಹೊರಹಾಕಿದ್ದರಿಂದ ಬಹುಜನ ಲಿಂಗಾಯತರಲ್ಲಿ ಈಗ ಭ್ರಾಂತಿ ಇಲ್ಲ ; ಅವರ ಬುದ್ಧಿ ಮಂಕು ಕಳೆದುಕೊಂಡು ಪ್ರಜ್ವಲಿಸುತ್ತಿದೆ. ಆದ್ದರಿಂದ ಪರಮತೀಯರಾದ ವೀರಶೈವ ಪಂಚಾಚಾರ್ಯ ಸ್ವಾಮಿಗಳ ವಿರೋಧ ಕುರಿತು ವಿಮರ್ಶಿಸಿ ಪುಟವನ್ನು ಅಪವ್ಯಯ ಮಾಡುವ ಅಗತ್ಯವಿಲ್ಲ. ನಮಗೀಗ ಅವರನ್ನು ವಿಮರ್ಶಿಸುವ ಒಂದು ಕೆಲಸ ತಪ್ಪಿಹೋಗಿದೆ.

4. ಲೀಲಾದೇವಿ ರೇಣುಕ ಪ್ರಸಾದ :

ಇವರನ್ನು ಒಂದು ವರ್ಗಕ್ಕೆ ಸೇರಿಸಿ ವಿಮರ್ಶಿಸುವುದಕ್ಕಿಂದ ನಮ್ಮ - ಅವರ ವ್ಯಕ್ತಿಗತ ಸಂಬಂಧದ ಹಿನ್ನೆಲೆಯಲ್ಲಿ ವಿಮರ್ಶಿಸುವುದೇ ಒಳ್ಳೆಯದು. ಹಾವು - ಮುಂಗುಸಿ, ಹುಲಿ - ಜಿಂಕೆಗಳ ವೈರದಂತೆ ನಮ್ಮಗಳದು ಜನ್ಮಜಾತವಾದ ವೈರ. ಏಕೆಂದರೆ ಹುಟ್ಟಿನಿಂದ ಅವರು ಜಂಗಮರು (?)ನಾವು ಭಕ್ತರು(?) ಮೊಟ್ಟ ಮೊದಲ ಭೇಟಿ ಬಸವ ಕಲ್ಯಾಣದಲ್ಲಿ ಅಷ್ಟ ಶತಮಾನೋತ್ಸವದ ವೇದಿಕೆಯಲ್ಲಿ. ಅವರಿಗೆ ನಾನು ಸಂಪೂರ್ಣ ಅಪರಿಚಿತಳಾಗಿದ್ದರೂ ನೋಡುತ್ತಲೇ ಸಿಡಿಮಿಡಿ ಮಾಡಿದರು. ವೇದಿಕೆಯ ತುಂಬಾ ಹರಿದಾಡುತ್ತಿದ್ದ ಅವರು ನನಗೆ ಮಾತನಾಡಲು ಅವಕಾಶ ಕೊಡಲು ಸಿದ್ಧರಿರಲಿಲ್ಲ. ಜನರ ಆಗ್ರಹದ ಮೇರೆಗೆ ಅಂತೂ ಮಾತನಾಡಲು ಅವಕಾಶ ಸಿಕ್ಕಿತು. ಬಸವ ಪ್ರೇರಣೆಯಿಂದ ಆ ಶರಣಭೂಮಿಯಲ್ಲಿ ಮಹಿಳಾ ಜಗದ್ಗುರು ಪೀಠದ ಘೋಷಣೆ ಮಾಡಿಬಿಟ್ಟಾಗ ಲೀಲಾದೇವಿಯವರು ಮನಸ್ಸಿನಲ್ಲಿ ಎಷ್ಟು ಬೆಂದುಹೋದರೊ ? ಅವರ ಮಾವನವರಾದ ದಿ || ಶಿವಮೂರ್ತಿ ಶಾಸ್ತ್ರಿಗಳು ಹುಲಿಯಂತೆ ಚಂಗನೆ ಹಾರಿ ಬಂದರು, ಸದ್ಯ ನನ್ನ ಬಳಿಗಲ್ಲ ಪೂಜ್ಯ ಅಪ್ಪಾಜಿಯವರ ಬಳಿಗೆ. ಆಗ ಅವರಿಬ್ಬರ ಮಧ್ಯೆ ನಡೆದ ಪ್ರಶ್ನೋತ್ತರ ಸ್ವಾರಸ್ಯಕರ. ಇದು ಅನಿರೀಕ್ಷಿತ ಘೋಷಣೆ. ಅಪ್ಪಾಜಿಯವರಿಗೂ ಕೇಳಿ ಅಚ್ಚರಿಯಾಗಿತ್ತು. ಆದರೆ ಅವರು ವಿಚಲಿತರಾಗಿರಲಿಲ್ಲ

" ಏನ್ರೀ ; ನಿಮ್ಮ ಶಿಷ್ಯರು ಏನೇನೋ ಮಾತನಾಡಿಬಿಟ್ಟರು "

" ಏಕೆ ಸರಿಯಾಗೇ ಮಾತನಾಡಿದ್ದಾರಲ್ಲ ? "

" ಮಹಿಳಾಗುರು ಪೀಠ ಮಾಡ್ತಾರಂತೆ "

" ಏಕೆ ಮಾಡಬಾರದು ? "

" ಸ್ತ್ರೀ ಹೇಗೆ ಗುರುವಾಗ್ತಾಳೆ ? "

" ಏಕೆ ಆಗಲ್ಲ, ಮಾಡಿ ತೋರಿಸ್ತೀವಿ "

ಈ ಜಾತಿ ವೈರತ್ವ ಬೆಳೆಯುತ್ತಲೇ ಹೋಯಿತು. ಮುಂದೆ ಬಸವನ ಬಾಗೇವಾಡಿಯಲ್ಲಿ ಅಷ್ಟಶತಮಾನೋತ್ಸವ ಸಮಾರಂಭ. ಬಸವ ಕಲ್ಯಾಣದ ನಂತರ ಕೂಡಲ ಸಂಗಮದಲ್ಲಿ ನನ್ನ ಮತ್ತೊಂದು

ಭಾಷಣ ಕೇಳಿದ ದಿ॥ ದೇವರಾಜ ಅರಸ್ ಅವರು ತುಂಬಾ ಪ್ರಭಾವಿತರಾಗಿ ಸಮೀಪ ಬಂದು ಅಭಿನಂದಿಸಿ ಹೋದರು. ಬಸವನ ಬಾಗೇವಾಡಿಯಲ್ಲಿ ಕಾರ್ಯಕ್ರಮ ಏರ್ಪಾಡಾದಾಗ ಮುದ್ದಾಂ ಪ್ರತಿನಿಧಿಗಳನ್ನು ಕಳಿಸಿ, ಭಾಷಣ ಮಾಡಲು ಆಹ್ವಾನಿಸಿದರು.

ಒಂದು ಸ್ವಾರಸ್ಯಕರ ಘಟನೆ ನಡೆಯಿತು. ಧಾರವಾಡದಿಂದ ನಾನು ತೆಲಗಿ (ಬಸವನ ಬಾಗೇವಾಡಿ ರೋಡ್ ಸ್ಟೇಷನ್)ಗೆ ಟ್ರೇನಿನಲ್ಲಿ ಬಂದು ಇಳಿದೆ. ತಹಸೀಲ್ದಾರರು ಕರೆಯಲು ಜೀಪು ತೆಗೆದುಕೊಂಡು ಬಂದಿದ್ದರು. ಮಹಿಳಾ ಉಪನ್ಯಾಸಕರನ್ನು ಇಳಿಸಿದ್ದ ಪ್ರವಾಸಿ ಮಂದಿರಕ್ಕೆ ನನ್ನನ್ನು ಕರೆದೊಯ್ದರು. ಒಳಗಡೆ ಶ್ರೀಮತಿ ಲೀಲಾದೇವಿ, ಸರಸ್ವತಿ ಗೌಡರ್, ಶಾಂತಾದೇವಿ ಮಾಳವಾಡ ಮುಂತಾದ ಅನೇಕರು ಇದ್ದರು. ಆಗಲೇ ರಾತ್ರಿ 1ಗಂಟೆ. ತಹಸೀಲ್ದಾರರು ಬಾಗಿಲು ಬಡಿದು " ಮಾತೆ ಮಹಾದೇವಿ ಬಂದಿದ್ದಾರೆ, ಒಳಗೆ ಬರಬೇಕಾಗಿದೆ. ಬಾಗಿಲು ತೆರೆಯಿರಿ " ಎಂದ ತಕ್ಷಣ ಮಾತನಾಡುವ ಸದ್ದು ನಿಂತು, ಎಲ್ಲರೂ ಗಾಢ ನಿದ್ರೆಯಲ್ಲಿದ್ದಂತೆ ಮಾಡಿದರು. ತಹಸೀಲ್ದಾರರಿಗೆ ಏನು ಮಾಡಬೇಕೋ ತಿಳಿಯಲಿಲ್ಲ, "ಎಂಥಾ ಹೆಣ್ಣುಮಕ್ಕಳು ! ಪರಸ್ಪರ ಸಹಕರಿಸಬೇಕೆಂದಿಲ್ಲ." ಎಂದು ಗೊಣಗಿ. ಇನ್ನೊಂದು ಹೊಸ ಪ್ರವಾಸಿ ಮಂದಿರ ಆಗಿದ್ದು, ಇನ್ನೂ ಉದ್ಘಾಟನೆಯಾಗದೆ ಕಾಯುತ್ತಿತ್ತು. ಜೀಪ್ ಡ್ರೈವರ್ ಮೂಲಕ ಆಫೀಸಿನಿಂದ ಕೀಲಿಕೈ ತರಿಸಿ ಫಸ್ಟ್ ಕ್ಲಾಸ್ ಪ್ರವಾಸಿ ಮಂದಿರದೊಳಕ್ಕೆ ನಮ್ಮಗಳನ್ನು ಕಳಿಸಿ ಹೋದರು. ಮೊದಲಿನ ಪ್ರವಾಸಿ ಮಂದಿರಕ್ಕಿಂತ ಇದು ಅತ್ಯುತ್ತಮವಾಗಿತ್ತು. ಅಪ್ಪ ಬಸವಣ್ಣನ ಲೀಲೆಗೆ ನಾನು ಬೆರಗಾದೆ. ನಮ್ಮಲ್ಲಿ ಅಲ್ಲಿಗಿಂತ ನೀರಿನ ಅನುಕೂಲತೆ, ಸ್ನಾನದ ಕೋಣೆ ಉತ್ತಮ ದರ್ಜೆಯದಾದ್ದರಿಂದ ಇನ್ನಿತರ ಅನುಕೂಲತೆ ಚೆನ್ನಾಗಿತ್ತು. ಅಲ್ಲಿ ವಿಪರೀತ ಜನ ಹೆಣ್ಣು ಮಕ್ಕಳಿದ್ದರು. ಅವರು ಒಬ್ಬೊಬ್ಬರೇ ಬಂದು "ಇಲ್ಲಿ ಸ್ನಾನ ಮಾಡುತ್ತೇವೆ " ಎಂದರು. " ಮಾಡಿಕೊಳ್ಳಿರಿ " ಎಂದು ಹೇಳಿದೆ.

ಆಗ, ನಾನು ತೀರಾ ಮುಗ್ಧೆ, ವಯಸ್ಸು 22, ಮಹಿಳಾ ಗುರುಪೀಠವನ್ನು ಮಾಡಿರಲಿಲ್ಲ ; ವಚನಾಂಕಿತವನ್ನು ಬದಲು ಮಾಡಿರಲಿಲ್ಲ. ಇವರೆಲ್ಲರಿಗೂ ಅಪರಿಚಿತೆ. ಆದರೂ ನನ್ನ ಮೇಲೆ ಮತ್ಸರ - ದ್ವೇಷ. ಏಕೆ ? ಎಂದು ಹಲವು ಬಾರಿ ಚಿಂತಿಸಿದ್ದುಂಟು. ರೂಪವತಿಯರಿಗೆ ರೂಪವೇ ಶತ್ರುವಂತೆ, ಹಾಗೆ ವಾಕ್ ಪ್ರತಿಭೆ ಮಾತ್ಸರ್ಯವನ್ನು ಹುಟ್ಟಿಸುತ್ತಲೇ ಇರುತ್ತದೆ. ಸರ್ಕಾರದ ವತಿಯಿಂದ ಬೆಂಗಳೂರಲ್ಲಿ ಅಷ್ಟಶತಮಾನೋತ್ಸವ ನಡೆದಾಗ ಮರೆಯದೆ ಶ್ರೀ ದೇವರಾಜ ಅರಸುರವರು ಆಹ್ವಾನಿಸಿದರು. ಬಂದಾಗ, ರೇಲ್ವೆ ಸ್ಟೇಷನ್‌ಗೆ ಗಾಡಿ ಕಳಿಸಿ ಮನೆಗೆ ಕರೆಸಿಕೊಂಡು ಅವರು, ಅವರ ಶ್ರೀಮತಿ ಮತ್ತು ಮಕ್ಕಳು ಭಕ್ತಿ-ಗೌರವಗಳಿಂದ ಕಂಡರು. ನಮ್ಮ ಭಾಷಣ ಅವರಿಗೆ ಬಹಳ ಇಷ್ಟವಾಗುತ್ತದೆ ಎಂದರು. ಅವರೊಂದು ಪ್ರಶ್ನೆ ಕೇಳಿದರು, "ನಾನು ಲಿಂಗಾಯತನಲ್ಲ ; ಆದರೆ ಬಸವಣ್ಣನವರ ವಿಚಾರವಾದದ ಬಗ್ಗೆ ತುಂಬಾ ಅಭಿಮಾನ. ನಿಮ್ಮ ವಿಚಾರ ಪ್ರತಿಪಾದನೆಯ ಶೈಲಿ, ಪ್ರತಿಭೆ ನನಗೆ ಬಹಳ ಮೆಚ್ಚುಗೆಯಾಗಿವೆ. ಒಂದು ಪ್ರಶ್ನೆ, --- ನನಗೂ ಈ ಪ್ರಶ್ನೆ ಕಾಡುತ್ತಿದೆ: ನಾನು ಅವರಿಗೆಲ್ಲ ಏನೂ ಕೆಟ್ಟುದು ಮಾಡಿಲ್ಲ; ತ್ಯಾಗಿಯಾಗಿ ಸಮಾಜ ತಪ್ಪು ತಿಳಿಯಬೇಡಿರಿ. ನಿಮ್ಮವರೇ(ವೀರಶೈವರು) ನಿಮ್ಮನ್ನು ತುಂಬಾ ದ್ವೇಷಿಸುತ್ತಾರಲ್ಲಾ ಏಕೆ ? ". "ನಿಜ ಸೇವೆಗೆ, ಧರ್ಮ ಪ್ರಚಾರಕ್ಕೆ ನಿಂತಿದ್ದೇನೆ. ಆದರೂ ದ್ವೇಷಿಸುತ್ತಾರೆ. ನನಗೂ ತಿಳಿಯುತ್ತಿಲ್ಲ " ಎಂದೆ. ಈ ಪ್ರಶ್ನೆಗೆ ಇಂದಿಗೂ ಉತ್ತರ ಸಿಕ್ಕಿಲ್ಲ, ಸಿಗುವುದೂ ಇಲ್ಲ. ಬಹುಶಃ ಬಹುಪಾಲು ಅಕ್ಕನ ಬಳಗಗಳ ಮಹಿಳಾ ಮಣಿಯರಿಗೆ ಸನ್ಯಾಸಿನಿಯರನ್ನು ಕಂಡರೆ ಈರ್ಷೆ, ಮತ್ಸರ, ದ್ವೇಷ, ತಿರಸ್ಕಾರ ಇದ್ದಂತೆ ತೋರುತ್ತದೆ. ಆದಕ್ಕೇ ಅವರು ಕೆತ್ತಿಸುವ ಅಕ್ಕಮಹಾದೇವಿಯ ಮೂರ್ತಿಗಳಿಗೆ ದೊಡ್ಡ ಬಾರ್ಡರ್ ಸೀರೆ ಉಡಿಸಿ ಕೈ ತುಂಬಾ ಬಂಗಾರದ ಬಳೆ ತೊಡಿಸಿ, ಕೊರಳಲ್ಲಿ ನೆಕ್‌ಲೇಸ್ ಹಾಕಿಸಿ, ಹಣೆಗೆ ಕುಂಕುಮವಿಟ್ಟು ಅಕ್ಕಮಹಾದೇವಿಯಲ್ಲಿ ತಮ್ಮ ಪ್ರತಿಬಿಂಬ ಕಾಣಲೆತ್ನಿಸಿ ಸಂತೋಷ ಪಡುತ್ತಾರೆ. ಇರಲಿ, ಶ್ರೀಮಂತರ

ಅಕ್ಕಮಹಾದೇವಿ ಶ್ರೀಮಂತ ಮಹಿಳೆಯಾಗಿ ತೋರಲಿ ; ಇದೇನು ಅಕ್ಕನಿಗೆ ಮಾಡುವ ಅಪಚಾರವಲ್ಲ ! ಏಕೆಂದರೆ ಶ್ರೀಮಂತ ಮಠಾಧೀಶರೇ ಇರಲಿ, ಗಣ್ಯರೇ ಇರಲಿ, ಮಹಿಳೆಯರೇ ಇರಲಿ ಅವರು ಮಾಡುವ ಎಲ್ಲ ತಪ್ಪುಗಳು ಕ್ಷಮ್ಯ.

ವಿಷಯಾಂತರವಾಯಿತು; ಅನಿವಾರ್ಯ. ಲೀಲಾದೇವಿ ಮತ್ತು ನಮ್ಮ ಮಧ್ಯದ ಜಾತಿವೈರತ್ವದ ಕಥೆ ಅರ್ಥವಾಯಿತಲ್ಲವೆ ?

ಮಹಾಚೈತ್ರ ಪಠ್ಯ ಪುಸ್ತಕವಾಯಿತು. ಅದು ಅವರ ಮೈದುನ ಶಿವಪ್ರಕಾಶ್ ಶರಣರನ್ನು ಹೀನಾಮಾನವಾಗಿ ನಿಂದಿಸಿದ ಕೃತಿ. ಅದನ್ನು ರದ್ದು ಮಾಡಲು ಹೋರಾಟ ಕೈಗೊಂಡಾಯಿತು. ಹೋರಾಟ ಯಶಸ್ವಿಯಾಯಿತು. ಹೀಗಾಗಿ ಮೊದಲೇ ಹಳಸಿದ ಸಂಬಂಧ ಇನ್ನಷ್ಟು ಹಳಸಿತು. ಯಾವ ರೀತಿ ಸೇಡು ತೀರಿಸಿಕೊಳ್ಳಬೇಕು ಎಂದು ಕಾಯುತ್ತಿದ್ದ ಲೀಲಾದೇವಿಯವರಿಗೆ ಅವರು ಕನ್ನಡ ಮತ್ತು ಸಂಸ್ಕೃತಿ ಸಚಿವೆಯಾಗಿದ್ದಾಗ ಬಸವ ವಚನ ದೀಪ್ತಿ ಸಿಕ್ಕಿತು. ಆ ದ್ವೇಷದ ಭರದಲ್ಲಿ ತಮ್ಮ ಅಧಿಕಾರ ವ್ಯಾಪ್ತಿ ಮೀರಿ ಮುಟ್ಟುಗೋಲು ಹಾಕಿಸಿದರು. ಹೈಕೋರ್ಟಿನಲ್ಲಿ ನಿಲ್ಲಲಿಲ್ಲ. ಮುಟ್ಟುಗೋಲು ಆಜ್ಞೆಯನ್ನು ಸರ್ಕಾರ ವಾಪಸ್ಸು ಪಡೆಯಿತು. ನಂತರ ಬೇರೊಂದು ಕಲಂ ಪ್ರಕಾರ ಮುಟ್ಟುಗೋಲು ಹಾಕಿತು. ಇದರಿಂದ ಬಸವ ತತ್ತ್ವಾನುಯಾಯಿಗಳಿಗೆ ಏನೇನೂ ತೊಂದರೆಯಾಗಿಲ್ಲ. ನಮಗೆ ಮಠಾಧೀಶರಿಂದ ಅಲ್ಲಲ್ಲೇ ಕಿರುಕುಳ ಆಗಿರಬಹುದು. ಒಂದು ಸತ್ಯದ ಸ್ಥಾಪನೆಯ ದುರ್ಗಮ ದಾರಿಯಲ್ಲಿ ಇವೆಲ್ಲ ಸಹಜ. ಪುಸ್ತಕ ಮುಟ್ಟುಗೋಲು ಹಾಕಿದರೇನಂತೆ ಜನರು ಲಿಂಗದೇವ ಪದದ ಮಹತಿ ಅರಿತು ಪೂಜೆ, ಪ್ರಾರ್ಥನೆ, ವಚನ ಪಠಣಗಳಲ್ಲಿ ಲಿಂಗದೇವನನ್ನು ಅಳವಡಿಸಿಕೊಂಡಿದ್ದಾರೆ.

ಹೀಗೆ ವಿನಾ ಕಾರಣ 1968 ರಿಂದಲೂ ವೈರತ್ವ ಸಾಧಿಸಿಕೊಂಡೇ ಬಂದ ಶ್ರೀಮತಿ ಲೀಲಾದೇವಿ ರೇಣುಕ ಪ್ರಸಾದ ಅವರು ಬಸವಾದಿ ಶರಣರ ಬಗ್ಗೆ ಮಾತನಾಡುತ್ತಾರೆ ಎಂದ ಮಾತ್ರಕ್ಕೆ ಆ ತತ್ತ್ವಕ್ಕೆ ತಮ್ಮನ್ನು ತಾವು ಪ್ರಾಮಾಣಿಕವಾಗಿ ಸಮರ್ಪಿಸಿಕೊಂಡವರು ಎಂದೇನಲ್ಲ. ಇವರು ವೀರಶೈವದ ಅನುಸರಿಗಳಾಗಿ ಪಂಚಪೀಠದವರ ಅನುಯಾಯಿಗಳಾಗೇ ಇರಲಿ. ಧರ್ಮಗುರುವೆಂದು ಬಸವಣ್ಣನವರನ್ನು ಒಪ್ಪದ ಮೇಲೆ, ವಚನ ಸಾಹಿತ್ಯವು ಲಿಂಗಾಯತ ಧರ್ಮದ ಸಂವಿಧಾನ ಎಂದು ಮನ್ನಿಸದ ಮೇಲೆ ಇವರಿಗೆ ಬಸವಣ್ಣ, ಅಕ್ಕಮಹಾದೇವಿ, ವಚನ ಸಾಹಿತ್ಯ ಇದರ ಆಗುಹೋಗು ಏನೇನೂ ಸಂಬಂಧಿಸಿಲ್ಲ. ಆದ್ದರಿಂದ ದಿ: 23-3-2001 ರಂದು ಲೀಲಾದೇವಿ ಅವರು ನೀಡಿದ ಹೇಳಿಕೆ ಖಂಡನಾರ್ಹ

5. ರಾಜಕಾರಣಿಗಳು :

ಮಹಾದೇವ ಬಣಕಾರ್, ಬಸವರಾಜ ಬೊಮ್ಮಾಯಿ ಇತ್ಯಾದಿ ರಾಜಕಾರಣಿಗಳಿಗೆ ಇದ್ದಕ್ಕಿದ್ದಂತೆಯೇ ವಿಶೇಷ ಪ್ರೇರಣೆಯುಂಟಾಗಿ ವಿಧಾನ ಪರಿಷತ್ತಿನಲ್ಲಿ ಬಾಯಿಗೆ ಬಂದಂತೆ ಹಾರಾಡಿದರು. ವಿಶ್ವಬಂಧು ಮರುಳಸಿದ್ಧನ ಹೆಸರಿನಲ್ಲಿ ಒಂದು ವಚನ ಬರೆದು ಐತಿಹಾಸಿಕ ವ್ಯಕ್ತಿ ಎಂದು ಸಿದ್ಧಪಡಿಸಲು ಮಹಾದೇವ ಬಣಕಾರರು ಬಹಳ ಶ್ರಮಿಸಿದ್ದಾರೆ ಎಂದು ಒಮ್ಮೆ ಲಿಂ॥ ಪೂಜ್ಯ ಅಪ್ಪಾಜಿ ಹೇಳಿದ್ದರು. ನಾನೇನೂ ಆ ವಚನವನ್ನು ಹುಡುಕಲು ಹೋಗಲಿಲ್ಲ. ಆದರೆ ಬಹುಪಾಲು ರಾಜಕಾರಣಿಗಳ ನಡೆ-ನುಡಿ-ಚರಿತ್ರೆ, ಚಾರಿತ್ರ್ಯ ಕುರಿತು ಬರೆದರೆ ಲೇಖನಿಯ ಮಸಿ ಸಹಿತ ಹೆಪ್ಪುಗಟ್ಟಬಹುದೇನೋ ಎಂಬ ಆತಂಕದಿಂದ ಅದನ್ನೇನೂ ಬರೆಯಹೋಗದೆ ತತ್ತ್ವಜ್ಞಾನ (philosophy), ಸಿದ್ಧಾಂತ (metaphysics), ದರ್ಶನಶಾಸ್ತ್ರ (Mysticism)· ಈ ಬಗ್ಗೆ ಇವರುಗಳಿಗೆ ಎಷ್ಟು ಜ್ಞಾನವಿದೆ ? ದಿನದ ಅಥವಾ ವರ್ಷದ ಎಷ್ಟು ಸಮಯವನ್ನು ವಚನ ಶಾಸ್ತ್ರದ ಅಧ್ಯಯನಕ್ಕೆ, ಅನುಷ್ಠಾನಕ್ಕೆ ಮೀಸಲಿಡುವುದಿರಲಿ,

ವಿನಿಯೋಗಿಸುತ್ತಾರೆ ಎಂದು ಕೇಳಬಯಸುತ್ತೇನೆ. ನೋಟು ಕೊಟ್ಟು ಓಟು ತಗೊಂಡು ಆರಿಸಿ ಬಂದವರೇ ಇರಲಿ, ವಿಧಾನ ಪರಿಷತ್‌ನ ನಾಮಕರಣಗೊಂಡ ಸದಸ್ಯರೇ ಇರಲಿ ಇವರು ಜ್ಞಾನಿಗಳೇ, ಅನುಭಾವಿಗಳೇ, ತ್ಯಾಗಿಗಳೇ, ಯೋಗಿಗಳೇ ? ಧಾರ್ಮಿಕ ಸಭೆ ನಡೆಯುವಾಗ ಒಂದು ಗಂಟೆ ಸಿಗರೇಟ್ ಸೇದಲಾರದೆ ಇರಲಾಗದ್ದಕ್ಕೆ ಎದ್ದು ಹೋಗಿ ಸಿಗರೇಟ ಸೇದುವ ಕಥೆ ಬೇಕೆ ? ವೈದ್ಯರು ಸೇದಲೇ ಕೂಡದು ಎಂದರೆ ರಗ್ಗು ಹೊದ್ದುಕೊಂಡು ಸೇದುವವರ ಕಥೆ ಬೇಕೆ ? ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿರುವಾಗಲೇ ಕದ್ದು ಹೊರಹೋಗಿ ಮಾದಕ ಪೇಯಗಳನ್ನು ಸೇವಿಸುವವರ ಕಥೆ ಬೇಕೇ ? ಇಂಥ ಕಥೆ ನೂರಾರು. ಆದರೆ ಇಂಥವರಿಗೆಲ್ಲ ಒಮ್ಮೆಲೆ ವಚನ ಶಾಸ್ತ್ರದ ಬಗ್ಗೆ ಕಾಳಜಿ ಚಿಮ್ಮಿದ್ದು ಹೇಗೆ ? ಸದನದ ಸ್ವಾತಂತ್ರ್ಯವನ್ನು ದುರುಪಯೋಗ ಪಡಿಸಿಕೊಳ್ಳುವುದು ಶಿಷ್ಟಾಚಾರವೆ ?

ಮಹಾದೇವ ಬಣಕಾರ್ ಒಂದು ವೇಳೆ ಪಾಕಿಸ್ಥಾನದ ಸರ್ವಾಧಿಕಾರಿ ಪರ್ವೇಜ್ ಮುಶ್ರಫ್‌ರಂತೆ ಸರ್ವಾಧಿಕಾರಿಯಾಗಿದ್ದು ಇದು ಪಾಕಿಸ್ಥಾನವಾಗಿದ್ದರೆ ವಿಚಾರಣೆ ಇಲ್ಲದೆ ಬಂಧಿಸಿ ನಮ್ಮನ್ನು ಜೈಲಿಗೆ ಅಟ್ಟುತ್ತಿದ್ದರೇನೋ ! ಇದು ಭಾರತ ದೇಶ, ಇಲ್ಲಿ ಪ್ರಜಾಪ್ರಭುತ್ವವಿದೆ, ಸಂವಿಧಾನವಿದೆ; ಸಂವಿಧಾನದ ಆಶ್ರಯದಲ್ಲಿ ತಪ್ಪು-ಒಪ್ಪು ನಿರ್ಧರಿಸುವ ನ್ಯಾಯಾಲಯಗಳಿವೆ. ಕಾನೂನು ಕಟ್ಟಳೆಗಳಿವೆ. ದ್ವೇಷ ಮಾತ್ಸರ್ಯಗಳಿಂದ ಮಠಾಧೀಶರು ನೀಡುವ ಆದೇಶಗಳೇ ಸಂವಿಧಾನದ ಕಟ್ಟಳೆಗಳಲ್ಲ ಎಂಬುದನ್ನು ಮಹಾದೇವ ಬಣಕಾರರಂಥವರು ಅರಿಯುವುದು ಒಳ್ಳಿತು. ಈ ಕೂಗಾಟದಿಂದ ಸದನದ ಗೌರವಕ್ಕೆ ಚ್ಯುತಿ ತಂದಿದ್ದಾರೆ ಎಂದು ಹೇಳಿದರೆ ತಪ್ಪಾಗದು.

6. ವೀರಶೈವ ಮಹಾಸಭೆ :

ಗ್ರಾಮಾಂತರ ಬಸವ ಜಯಂತಿಯ ಸಮಾರಂಭದಲ್ಲಿ ನೆಲಮಂಗಲದಲ್ಲಿ ಮಾತನಾಡುತ್ತ ಭೀಮಣ್ಣ ಖಂಡ್ರೆ ಹೇಳಿದ್ದಾರೆ. (ಇವರನ್ನು ರಾಜಕಾರಣಿಗಳೆಂಬ ನನ್ನ 5ನೆಯ ವರ್ಗದಲ್ಲಿ ಸೇರಿಸುವ ವಿಚಾರ ಮೊದಲಿಗೆ ಇತ್ತು. ಈಗ ಅವರು ಮಾಜಿ ರಾಜಕಾರಣಿಯಾಗಿರುವುದರಿಂದ ವೀರಶೈವ ಮಹಾಸಭಾ ಅಧ್ಯಕ್ಷರಾಗಿರುವುದರಿಂದ 6ನೆಯ ವಿಷಯಕ್ಕೆ ಸಂಬಂಧಿಸಿ ವಿಶ್ಲೇಷಿಸೋಣ ಎಂದುಕೊಂಡಿದ್ದೇನೆ)

ಭೀಮಣ್ಣ ಖಂಡ್ರೆ ಅವರು ಮಾತನಾಡಿ, ''ಬಸವಣ್ಣನವರ ಹೆಸರೇಳಿ ಧ್ಯಾನಿಸಿದ ಫಲ ಹೆಸರು, ಹಣ ಗಳಿಸಿದವರು ಇಂದು ವಚನ ಸಾಹಿತ್ಯವನ್ನು ಧ್ವಂಸ ಮಾಡಿದ್ದು, ''ಮಹಾದೇವಿ ಲಿಂಗಪ್ರಿಯ'' ಎಂದು ತಿರುಚಿರುವುದು ಖಂಡನೀಯ. ದುರುದ್ದೇಶವಾದ ಹೇಳಿಕೆ ಮತ್ತು ಬರಹ ಅಕ್ಷಮ್ಯ ಅಪರಾಧವಾಗಿದೆ'' ಎಂದು ನುಡಿದರು. (ಕನ್ನಡ ಪ್ರಭ ದಿ. 8-3-2001)

ಭೀಮಣ್ಣ ಖಂಡ್ರೆಯವರ ಮಾತುಗಳು ಬೇಗನೆ ಅರ್ಥವಾಗುವುದಿಲ್ಲ- ಭಾಷೆ ಮತ್ತು ಶೈಲಿ ಎರಡೂ ದೃಷ್ಟಿಯಿಂದ. ಹೀಗಾಗಿ ಅವರು ಏನು ಹೇಳಿದರೋ ಪತ್ರಿಕಾ ಪ್ರತಿನಿಧಿಗಳು ಏನು ಅರ್ಥಮಾಡಿಕೊಂಡರೋ ! ಅವರು ಹೇಳಿದ ಮಾತು '' ಬಸವಣ್ಣನವರ ಹೆಸರು ಹೇಳಿ ಧ್ಯಾನಿಸಿದ ಫಲ ಹೆಸರು ಹಣ ಗಳಿಸಿದ್ದಾರೆ.'' ಎಂಬುದು ಅಕ್ಷರಶಃ ಸತ್ಯ. ಕಷ್ಟವೇ ಬರಲಿ, ಸುಖವೇ ಬರಲಿ, ಲಿಂಗನಿಷ್ಠೆ, ಧರ್ಮಗುರು ಬಸವಣ್ಣನವರ ನಿಷ್ಠೆಯಿಂದಾಗಿಯೇ ನಮಗೆ ಅಸಾಧ್ಯ ಸಾಧ್ಯವಾಯಿತು. ಅಭೇದ್ಯ ಭೇದ್ಯವಾಯಿತು. ಎಂತೆಂಥಾ ಶ್ರೀಮಂತ ಮಠಾಧೀಶರಿಂದ ಸಾಧಿಸಲಾಗದ ಬಸವ ಧರ್ಮ ಸಮ್ಮೇಳನಗಳು, ಶರಣ ಮೇಳ-ಮಠಾಧೀಶರ ಕಿರುಕುಳದ ಮಧ್ಯೆ ಹೇಗೆ ಸಾಧ್ಯವಾಯಿತು ? ಇಡೀ ಶ್ರೀಮಂತ ಮಠಾಧೀಶರು, ರಾಜಕಾರಣಿಗಳು, ವೀರಶೈವ ಗಣ್ಯರು ಒಂದು ಕಡೆ ; ತಮ್ಮ ಪಾಡಿಗೆ ತಾವು ಕಾರ್ಯಕ್ರಮ ಮಾಡಿಕೊಂಡು ಸುಮ್ಮನಿರುವರೆ ? ನಮಗೆ ಕಿರುಕುಳ ಕೊಡುವುದು ಬೇರೆ ಸೇರಿಕೊಳ್ಳುತ್ತೆ.

ಇಂಥ ಸಂಕಷ್ಟದ ಮಧ್ಯದಲ್ಲೂ ಬಸವ ಭಕ್ತರ ನೆರವಿನಿಂದ ದೆಹಲಿಯ ಲಾಲ್ ಕಿಲ್ಲಾ ಮೈದಾನದಲ್ಲಿ, ಮುಂಬೈಯ ಆಜಾದ್ ಮೈದಾನದಲ್ಲಿ ಸಮ್ಮೇಳನ ಮಾಡಿದೆವು. ಇದರ ಹಿಂದಿನ ಬಲ ಹಣದ್ದಲ್ಲ ರಾಜಕೀಯದ್ದಲ್ಲ ಕೇವಲ ಬಸವ ಕೃಪೆ. ಅದರ ಪರಿಣಾಮವೇ ಕೀರ್ತಿ ಮತ್ತು ಹಣ. ಅದಕ್ಕೇ ನಾವು ಹೇಳುವುದು ; '' ವೀರಶೈವ ಮಹಾಸಭೆಯವರೇ ಧರ್ಮಗುರು ಬಸವಣ್ಣನವರನ್ನು ಕಡೆಗಣಿಸಿ ಸಮಾಜವನ್ನು ಕಟ್ಟಲು ಹೋಗಬೇಡಿರಿ. ನಂಬಿರಿ ; ನಿಮಗೆ ಹಣ - ಕೀರ್ತಿ ಎರಡೂ ಲಭ್ಯವಾಗುತ್ತವೆ.'' ಎಂದು. ಆದರೆ ಖಂಡ್ರೆಯವರ ಮುಂದಿನ ಮಾತು '' ಇಂದು ವಚನ ಸಾಹಿತ್ಯವನ್ನು ಧ್ವಂಸ ಮಾಡಿದ್ದು '' ಎಂಬುದು ಪೂರಾ ಸುಳ್ಳು. ಉರ್ದು - ಕನ್ನಡ - ಹಿಂದಿ ಎಲ್ಲ ಮಿಶ್ರಣ ಮಾಡುವ ಅವರಿಗೆ ಒಂದೊಂದು ಪದಕ್ಕೆ ಆಯಾ ಭಾಷೆಯಲ್ಲಿ ವಿಶಿಷ್ಟ ಅರ್ಥವಿರುತ್ತದೆ ಎಂಬುದು ತಿಳಿದಂತೆ ಕಾಣದು. ಧ್ವಂಸದ ಅರ್ಥವೇನು ?

ಭೂಗತವಾಗಿದ್ದ ಸಾಹಿತ್ಯವನ್ನು ಕಷ್ಟ ನಷ್ಟ ಸೋಸಿ ಹೊರ ತಂದವರು ಲಿಂ || ಫ. ಗು. ಹಳಕಟ್ಟಿ ವಿಶ್ವವಿದ್ಯಾಲಯಕ್ಕೆ ಸೀಮಿತವಾಗಿದ್ದ ವಚನ ಸಾಹಿತ್ಯವನ್ನು ಮನೆಮನೆಗೆ ಮುಟ್ಟಿಸಿದ್ದು ನಮ್ಮ ಸಂಸ್ಥೆ. ಈ ಯಾವ ಮಠಾಧೀಶರು ಧರ್ಮಗುರು ಬಸವಣ್ಣನವರ, ಅಕ್ಕಮಹಾದೇವಿಯ ಫೋಟೋ ಸಹಿತ ಮುದ್ರಿಸಿರಲಿಲ್ಲ. ತಮ್ಮ, ತಮ್ಮ ಕರ್ತೃ ಗದ್ದುಗೆಗಳ ಫೋಟೋ ಮುದ್ರಿಸಿಕೊಂಡಿದ್ದರು. ನಾನು ಏನು ಮಾಡಿದ್ದೇನೆ ಎಂಬುದನ್ನು ಸಹ ತಿಳಿಯಲಾರದ ಭೀಮಣ್ಣ ಖಂಡ್ರೆ ''ಮಹದೇವಿ ಲಿಂಗಪ್ರಿಯ'' ಎಂದು ತಿರುಚಿದ್ದೇನೆ ಎಂದು ನುಡಿದು ತಮ್ಮ ವಿದ್ವತ್ತನ್ನು ಪ್ರದರ್ಶಿಸಿಕೊಂಡಿದ್ದಾರೆ. ಇನ್ನು ಇಂಥ ತ್ರಿಭಾಷಾ ಪಂಡಿತರಿಗೆ ತತ್ತ್ವಜ್ಞಾನ, ದರ್ಶನಶಾಸ್ತ್ರ ಅರ್ಥವಾಗುವುದುಂಟೆ ? ಬುದ್ಧಿಯನ್ನು ತೊಡಗಿಸದೆ ನಾಲಿಗೆಯನ್ನು ಹರಿಯ ಬಿಡುವ ಹವ್ಯಾಸ ಇಂಥ ಕೆಲವರದು.

ವೀರಶೈವವಾದಿ ಮಹಾಸಭಾವೇ ಇರಲಿ, ಮಠಾಧೀಶರೇ ಇರಲಿ ಇಲ್ಲವೇ ವೀರಶೈವ - ಲಿಂಗಾಯತಗಳನ್ನು ಕಲಬೆರಕೆ ಮಾಡಿ ದ್ವಿಪಾತ್ರಗಳನ್ನು ಅಭಿನಯಿಸುವ ಚಿತ್ರದುರ್ಗದ ಬೃಹನ್ಮಠದವರೇ ಇರಲಿ, ಇನ್ನು ಮೇಲೆ ಅವರು ಒಂದು ತತ್ತ್ವಕ್ಕೆ ಬದ್ಧರಾಗಬೇಕು. ಎರಡೂ ಮುಖವಾಡ ಧರಿಸುವ ಅಪ್ರಾಮಾಣಿಕತೆ ಬಿಡಬೇಕು. ವೀರಶೈವ ಪದ ಇಟ್ಟುಕೊಂಡ ಮೇಲೆ ವೇದಾಗಮ ಪುರಾಣಗಳ ಆಶ್ರಯಕ್ಕೆ ಹೋಗಬೇಕು. ಲಿಂಗಾಯತ ಪದ ಬಳಸಿದ ಮೇಲೆ ವಿಶ್ವಗುರು ಬಸವಣ್ಣನವರನ್ನು ಧರ್ಮಗುರು ಎಂದೊಪ್ಪಿ ವಚನ ಸಾಹಿತ್ಯಕ್ಕೆ ಬದ್ಧರಾಗಬೇಕು. ವೀರಶೈವರಿಗೆ ಲಿಂಗಾಯತ ಧರ್ಮದ ಸಂವಿಧಾನವಾದ ವಚನ ವಾಙ್ಮಯದ ಆಗುಹೋಗು ಎಷ್ಟೂ ಸಂಬಂಧಿಸಿಲ್ಲ. ವಿಶ್ವಗುರು ಬಸವಣ್ಣನವರನ್ನು '' ಅಪ್ಪ '' ಎಂದು ಭಾವಿಸಿದರೆ ಮಾತ್ರ ಅಪ್ಪನಿಂದ ಬಂದ ಆಸ್ತಿ-ವಚನ ಸಾಹಿತ್ಯದ ಮೇಲೆ ಹಕ್ಕುಂಟು, ಇಷ್ಟು ದಿನ ವೀರಶೈವವಾದಿಗಳು ವಂಚಿಸಿದಂತೆ ಇನ್ನು ಲಿಂಗಾಯತರನ್ನು, ಲಿಂಗಾಯತವನ್ನು ವಂಚಿಸಲು ಅವಕಾಶ ನೀಡುವುದಿಲ್ಲ. ವೀರಶೈವ ಮಹಾಸಭೆಯವರ ಆಕ್ರೋಶ ನನ್ನ ಮೇಲೆ ಏಕೆ ಕೇಂದ್ರೀಕೃತವಾಗಿದೆ ಎಂದರೆ 800 ವರ್ಷಕಾಲ ಸತ್ಯವನ್ನು ಮುಚ್ಚಿಟ್ಟ ಕುತಂತ್ರವನ್ನು ಈಗ ನಾನು ಬಯಲಿಗೆ ಎಳೆದಿರುವುದರಿಂದ. ನಾವೇನು ವೀರಶೈವ ಮಹಾಸಭೆಯವರಿಗೆ, ಲೀಲಾದೇವಿ ಪ್ರಸಾದರಿಗೆ ಬಸವಣ್ಣನವರನ್ನು ಧರ್ಮಗುರು ಎಂದು ಒಪ್ಪಿ ಎಂದು ಒತ್ತಾಯ ಮಾಡುವುದಿಲ್ಲ ; ಗೋಗರೆಯುವುದಿಲ್ಲ. ಒಪ್ಪದ ನೀವು ಲಿಂಗಾಯತ ಪದ ಬಳಸ ಬೇಡಿರಿ, ವಚನ ಸಾಹಿತ್ಯದ ತಂಟೆಗೆ ಬರಬೇಡಿ ಎಂದು ಸ್ಪಷ್ಟ ಎಚ್ಚರಿಕೆ ನೀಡುತ್ತಿದ್ದೇವೆ ಅಷ್ಟೆ.

ಈ ರೋಷದಿಂದ ನೀವು (ವೀರಶೈವವಾದಿಗಳು)ಬಸವ ವಚನ ದೀಪ್ತಿ ಮುಟ್ಟುಗೋಲು ಹಾಕಿಸಿದಿರಾ ? ಆದರೇನು ಧರ್ಮಪಿತ ಬಸವಣ್ಣನವರ ವಚನಗಳಲ್ಲಿ ಲಿಂಗದೇವ ನೆಲೆಗೊಂಡಿದ್ದಾನೆ ; ಪೂಜೆ - ಪ್ರಾರ್ಥನೆ - ವಚನ ಪಠಣದಲ್ಲಿ ಅಳವಟ್ಟಿದ್ದಾನೆ. '' ಶರಣ ವಾಣಿ '' ಮುಟ್ಟುಗೋಲು ಹಾಕಿಸುವಿರಾ ? ವಚನ ಪಠಣ ಮಾಡುವ ಶರಣ - ಶರಣೆಯರ ಮನದಲ್ಲಿ ಚನ್ನಮಲ್ಲಿಕಾರ್ಜುನ - ಮಹಾದೇವಿಯಕ್ಕ ಪ್ರಿಯ ಲಿಂಗದೇವನು ಆಗಲೇ ನೆಲೆಸಿ ಬಿಟ್ಟ, ಬದಲಾವಣೆ ನಮ್ಮ ಕೆಲಸ, ಪ್ರಚಾರದ ಹೊಣೆ ಚಿತ್ರದುರ್ಗ ಮಠದವರ ನೇತೃತ್ವದಲ್ಲಿ ನೀವು ಹೊತ್ತಿರುವುದರಿಂದ ನಿಮಗೆಲ್ಲ ಧನ್ಯವಾದಗಳು. ★

ಬಸವ ತತ್ತ್ವ ಪರೀಕ್ಷೆಗಳು(ಬಸವ ಶಕೆ 867) - ಫಲಿತಾಂಶ

ಬಸವ ತತ್ತ್ವ ಪ್ರವೇಶ (ಮೊದಲ ಪರೀಕ್ಷೆ)

ಒಂದನೆಯ ವರ್ಗ

ಶರಣರಾದ :

121. ವಿದ್ಯಾವತಿ ವಿಜಯಕುಮಾರ ಕಮನೂರಿ — ಬೆಳಗಾವಿ ಕೇಂದ್ರ

ಎರಡನೆಯ ವರ್ಗ

101. ಮಂಜುಳಾ. ರು. ಬಡಿಗೇರ — ಓಬಳಾಪುರ ಕೇಂದ್ರ (ಚಿತ್ರದುರ್ಗ ಜಿಲ್ಲೆ)
103. ಎಮ್. ನೇತ್ರಾವತಿ — ,,
106. ಆರ್. ಎರ್ರಿಸ್ವಾಮಿ — ,,
107. ಓ. ಯಲ್ಲಮ್ಮ — ,,
109. ಎಮ್. ಮಂಜುನಾಥ — ,,
110. ಟಿ. ಶ್ವೇತಾ — ,,
112. ಸಾವಿತ್ರಾ ಚನ್ನಬಸಪ್ಪ ರುದ್ರಗೌಡರ — ಬೆಳಗಾವಿ ಕೇಂದ್ರ
122. ಅಂಬರೀಶ ಹುಚ್ಚಪ್ಪ ಕನ್ನಾಳ — ,,

ಮೂರನೆಯ ವರ್ಗ

102. ಎಸ್. ಮಂಜುಳಾ — ಓಬಳಾಪುರ ಕೇಂದ್ರ (ಚಿತ್ರದುರ್ಗ ಜಿಲ್ಲೆ)
104. ಲಕ್ಷ್ಮೀದೇವಿ ಮಲ್ಲಿಕಾರ್ಜುನಪ್ಪ — ,,
105. ಕವಿತಾ ಗೋಮನಿ — ,,
108. ಜಿ. ಮಮತಾ — ,,

ಬಸವ ತತ್ತ್ವ ಪರಿಚಯ (ಎರಡನೆಯ ಪರೀಕ್ಷೆ)

ಎರಡನೆಯ ವರ್ಗ

201. ಸವಿತಾ ಅಡಿವೆಪ್ಪ ಸಿದ್ನಾಳ — ಬೆಳಗಾವಿ ಕೇಂದ್ರ
211. ಎ. ಅನುರಾಧಾ ತಂದೆ ಟಿ. ವೆಂಕಣ್ಣ — ರಾಯಚೂರು ಕೇಂದ್ರ
213. ಎಂ. ಪದ್ಮಾವತಿ ತಂದೆ ಯಂಕಪ್ಪ — ,,
215. ವಿಜಯಲಕ್ಷ್ಮಿ ತಂದೆ ಬಂದಪ್ಪ — ,,
217. ಎನ್. ಭಾಗ್ಯಲಕ್ಷ್ಮಿ ತಂದೆ ನರಸಪ್ಪ — ,,
213. ಅನುಷಾ ತಂದೆ ತಾಯಣ್ಣ — ,,
221. ಸಂತೋಷ ಕುಮಾರ ತಂದೆ ಗುರುರಾಜ — ,,

ಮೂರನೆಯ ವರ್ಗ

202. ಕಸ್ತೂರಿ ಅಶೋಕ ಬೆಂಡಿಗೇರಿ — ಬೆಳಗಾವಿ ಕೇಂದ್ರ
205. ರಾಮಪ್ಪ ದುಂಡಪ್ಪ ಮುಪ್ಪಗಿ — ,,
212. ಎಮ್. ಜಿ. ಮಲ್ಲಮ್ಮ ತಂದೆ ಗೊಲ್ಲಾಳಪ್ಪ — ರಾಯಚೂರು ಕೇಂದ್ರ
214. ಎ. ನಿರ್ಮಲಾ ತಂದೆ ಆನಂದ — ,,
216. ಜಮುನಾ ತಂದೆ ಭೀಮಣ್ಣ — ರಾಯಚೂರು ಕೇಂದ್ರ
219. ಚಂದ್ರಕಲಾ ತಂದೆ ಸಿದ್ದಪ್ಪ — ,,
220. ಹೇಮಾವತಿ ತಂದೆ ಸಿದ್ದಪ್ಪ — ,,

ಬಸವ ತತ್ತ್ವ ಪ್ರವೀಣ(ಮೂರನೆಯ ಪರೀಕ್ಷೆ)

ಎರಡನೆಯ ವರ್ಗ

305. ಲಗಮಣ್ಣಾ ಮಲ್ಲಪ್ಪ ಚೌಗಲಾ — ಬೆಳಗಾವಿ ಕೇಂದ್ರ

ಮೂರನೆಯ ವರ್ಗ

301. ಶಿವಬಸವ ರುದ್ರಪ್ಪ ಕುಕಡೊಳ್ಳಿ — ಬೆಳಗಾವಿ ಕೇಂದ್ರ

ಹುಬ್ಬಳ್ಳಿ
31-12-2000

ಶರಣೆ. ಶೋಭಾದೇವಿ ಪರಮಾದಿ
ನಿರ್ದೇಶಕರು, ಶ್ರೀ ಬಸವೇಶ್ವರ ದಿವ್ಯಜ್ಞಾನ ವಿದ್ಯಾಲಯ
ಹುಬ್ಬಳ್ಳಿ - 580024. ದೂರವಾಣಿ : 0836-306106

ಸನ್ಮಾನ್ಯ ಸಭಾಪತಿಗಳು
ಕರ್ನಾಟಕ ವಿಧಾನ ಪರಿಷತ್ತು
ವಿಧಾನ ಸೌಧ, ಬೆಂಗಳೂರು

ಬೆಂಗಳೂರು
ದಿನಾಂಕ : 12-3-2001

ಮಾನ್ಯರೇ,

ವಿಷಯ : ಕಡತದಿಂದ ಅಸಂಸದೀಯ ಪದಗಳನ್ನು ತೆಗೆಯಲು ಮನವಿ.

ದಿ. 9-3-2001ದಂದು ವಿಧಾನ ಪರಿಷತ್ ಅಧಿವೇಶನದಲ್ಲಿ ಕೆಲವು ಸದಸ್ಯರು ಇದ್ದಕ್ಕಿದ್ದ ಹಾಗೆಯೇ ಪ್ರಸ್ತಾಪ ಮಾಡಿ "ಶರಣ ವಾಣಿ" ಎಂಬ ಧ್ವನಿ ಸುರುಳಿಯಲ್ಲಿ ಅಕ್ಕ ಮಹಾದೇವಿಯ ವಚನಾಂಕಿತವನ್ನು ತಿರುಚಲಾಗಿದೆ, ಕೃತಿ ಚೌರ್ಯ ಮಾಡಲಾಗಿದೆ ಎಂದೆಲ್ಲ ಆರೋಪಿಸಿ ನಮ್ಮ ವೈಯಕ್ತಿಕ ನಿಂದೆಯನ್ನು ಸಹ ಮಾಡಿರುವುದು ವಾರ್ತಾ ಪತ್ರಿಕೆಗಳು ಮತ್ತು ಕಿರುತೆರೆಯ ವಾಹಿನಿಗಳ ವರದಿಗಳಿಂದ ತಿಳಿದುಬಂದಿದೆ.

ಈ ಬಗ್ಗೆ ಸ್ಪಷ್ಟೀಕರಣ ನೀಡಲು ಪತ್ರಿಕಾ ಗೋಷ್ಠಿಯನ್ನು ಇಂದು ಕರೆಯಲಾಗಿದ್ದು , ಪತ್ರಿಕಾ ಗೋಷ್ಠಿಯಲ್ಲಿ ಬಿಡುಗಡೆ ಮಾಡಿದ ಹೇಳಿಕೆಯನ್ನು ಸಹ ತಮ್ಮ ಗಮನಕ್ಕೆ ತರಲಾಗಿದೆ.

ಕೃತಿ ಚೌರ್ಯವಲ್ಲ : ಅಕ್ಕಮಹಾದೇವಿಯ ವಚನವನ್ನು ಅವರ ಹೆಸರಿನಲ್ಲಿಯೇ ಧ್ವನಿ ಮುದ್ರಿಸಲಾಗಿದೆ. ಆದ್ದರಿಂದ ಇದು ಕೃತಿಚೌರ್ಯವಲ್ಲ.

ವಚನಾಂಕಿತ ತೆಗೆಯಲಾಗಿಲ್ಲ : ಅಕ್ಕಮಹಾದೇವಿಯ ವಚನಾಂಕಿತ ಚನ್ನಮಲ್ಲಿಕಾರ್ಜುನ ಇದನ್ನು ಸಹ ತೆಗೆಯಲಾಗಿಲ್ಲ. ಇದಕ್ಕೆ ದಾರ್ಶನಿಕ ದೃಷ್ಟಿಯಿಂದ ಮಹಾದೇವಿಯಕ್ಕ ಪ್ರಿಯ ಲಿಂಗದೇವ ಎಂದು ವಿವರಣೆ ನೀಡಲಾಗಿದೆ.

ಮಹಾದೇವಿಯಕ್ಕ ಪ್ರಿಯ ಲಿಂಗದೇವ : ಮಹಾದೇವಿಯಕ್ಕ ಎಂದೇ ಅನುಭವ ಮಂಟಪದಲ್ಲಿನ ಶರಣರು ಅಕ್ಕಮಹಾದೇವಿಯನ್ನು ಸ್ತುತಿಸಿದ್ದಾರೆ. ಮೊದಲ ಹಂತದ ಸಗುಣೋಪಾಸನೆಯಲ್ಲಿ ಅಕ್ಕಮಹಾದೇವಿ ಶ್ರೀಶೈಲದ ಚನ್ನಮಲ್ಲಿಕಾರ್ಜುನನ ಆರಾಧಕಿಯಾಗಿದ್ದರೆ ಎರಡನೆಯ ಹಂತದ ನಿರ್ಗುಣೋಪಾಸನೆಯಲ್ಲಿ ನಿರಾಕಾರ ಸೃಷ್ಟಿಕರ್ತನ ಆರಾಧಕಳಾಗಿದ್ದಾಳೆ. ಅಕ್ಕಮಹಾದೇವಿಯ ಶ್ರೇಷ್ಠತಮ ಅನುಭಾವಿಕ ನಿಲುವನ್ನು ಸ್ಪಷ್ಟ ಪಡಿಸಲು 'ಚನ್ನಮಲ್ಲಿಕಾರ್ಜುನ' ಎಂಬ ಪದಕ್ಕೆ "ಮಹಾದೇವಿಯಕ್ಕ ಪ್ರಿಯ ಲಿಂಗದೇವ" ಎಂಬ ವಿವರಣೆ ಹಾಡಿಸಲಾಗಿದೆ.

ವೈಯಕ್ತಿಕ ದ್ವೇಷ, ಮಾತ್ಸರ್ಯ, ರಾಜಕೀಯ ದೃಷ್ಟಿ ಮುಂತಾದ ಅಂಶಗಳು ಸೇರಿ ಇಲ್ಲದ ತಪ್ಪನ್ನು ಹುಡುಕಲು ಯತ್ನಿಸುತ್ತಿರುವುದಲ್ಲದೆ ಜನರನ್ನು ಎತ್ತಿ ಕಟ್ಟಲು ರಕ್ತಪಾತ ಮುಂತಾದ ಪದಗಳನ್ನು ಸದನದ ಸದಸ್ಯರು ಬಳಸಿದ್ದು ನಿಜಕ್ಕೂ ಸದನದ ಗೌರವಕ್ಕೆ ಚ್ಯುತಿ ತರುವಂತಿದೆ.

ಆದ್ದರಿಂದ ತಾವು ಅಸಂಸದೀಯ ವೈಯಕ್ತಿಕ ನಿಂದೆಯ ಪದಗಳನ್ನು ಕಡತದಿಂದ ತೆಗೆದು, ಸದನದ ಗೌರವವನ್ನು ಕಾಪಾಡಬೇಕೆಂದು ಕೋರುತ್ತೇವೆ.

ವೈಯಕ್ತಿಕ ದ್ವೇಷ , ಮತಾಂಧತೆ, ಜಾತಿಪ್ರಜ್ಞೆ ಮುಂತಾದ ಸಣ್ಣತನದಿಂದ ಪ್ರೇರಿತರಾಗಿ ವರ್ತಿಸುತ್ತಿರುವ ಕೆಲವರ ಒತ್ತಾಯಕ್ಕೆ ಈಡಾಗಿ ಪ್ರಜಾಪ್ರಭುತ್ವದ ಸಾರವಾಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಚ್ಯುತಿ ತರಬಾರದೆಂದು, ಧ್ವನಿ ಸುರುಳಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಪ್ರಬುದ್ಧ ಕೆಲಸಕ್ಕೆ ಕೈ ಹಾಕದಂತೆ ಸರ್ಕಾರಕ್ಕೆ ಮಾರ್ಗದರ್ಶನ ಮಾಡಬೇಕೆಂದು ಕೋರುತ್ತೇವೆ. ★

ಧಾರವಾಡ ನಗರದಲ್ಲಿ ವಿಶ್ವಧರ್ಮ ಪ್ರವಚನ

ವಿಶೇಷ ಕಾರ್ಯಕ್ರಮ ಮತ್ತು ಪೀಠಾರೋಹಣ

ಧಾರವಾಡ ನಗರದ ಕಡಪಾ ಮೈದಾನದಲ್ಲಿ ದಿ: 9-2-2001 ರಿಂದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ದ್ವಿತೀಯ ಮಹಿಳಾ ಜಗದ್ಗುರುಗಳಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರಿಂದ ಪ್ರತಿ ದಿನ ಸಂಜೆ 6-30 ರಿಂದ 8-30 ರವರೆಗೆ ವಿಶ್ವ ಧರ್ಮ ಪ್ರವಚನವು ನಡೆಯುತ್ತಲಿದ್ದು ಏಪ್ರಿಲ್ 8, 9, 10ರಂದು ವಿಶೇಷ ಕಾರ್ಯಕ್ರಮಗಳು ಏರ್ಪಾಡಾಗಿವೆ.

1. ದಿ : 8-4-2001 ರಂದು ಚೈತ್ರ ಪೌರ್ಣಿಮೆ. ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿ ಮಹಿಳಾ ಜಗದ್ಗುರು ಪೀಠವು ಸ್ಥಾಪನೆಯಾಗಿ 31ವರ್ಷಗಳು ಪೂರೈಸಲಿವೆ. ಬೆಳಿಗ್ಗೆ 10-30ಕ್ಕೆ ಪೀಠಾರೋಹಣದ 31ನೆಯ ವಾರ್ಷಿಕೋತ್ಸವವನ್ನು ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮದ ನಂತರ ಗಣ ದಾಸೋಹ.

ಸಂಜೆ 4ರಿಂದ ವಿಶ್ವಗುರು ಬಸವಣ್ಣ, ಜಗನ್ಮಾತಾ ಅಕ್ಕಮಹಾದೇವಿಯವರ ಭಾವಚಿತ್ರದೊಡನೆ ಮೆರವಣಿಗೆ ಹಾಗೂ ಶರಣರಿಂದ ಪಥ ಸಂಚಲನ. ನಂತರ ಸಂಜೆ 6-30ಕ್ಕೆ ಕಡಪಾ ಮೈದಾನ (ಕಲಾ ಭವನದ ಮುಂದೆ) ದಲ್ಲಿ ಅನುಭವಗೋಷ್ಠಿ. ದಿ: 9-4-2001 ರಂದು ಸಂಜೆ 6-30ಕ್ಕೆ ಪ್ರವಚನ ಕಾರ್ಯಕ್ರಮ. ದಿ: 10-4-2001 ರಂದು ಸಂಜೆ 6-30ಕ್ಕೆ ವಿಶ್ವಧರ್ಮ ಪ್ರವಚನ ಕಾರ್ಯಕ್ರಮದ ಮುಕ್ತಾಯ ಸಮಾರಂಭ ಮತ್ತು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರಿಗೆ ಅಭಿನಂದನೆ.

ಬಸವ ಧರ್ಮ ಪೀಠಾಧ್ಯಕ್ಷರಾದ **ಪೂಜ್ಯ ಶ್ರೀಮನ್** ನಿರಂಜನ ಮಹಾ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ನಡೆಯಲಿರುವ ಈ ಕಾರ್ಯಕ್ರಮಗಳಲ್ಲಿ ಶರಣ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಹೃತ್ಪೂರ್ವಕವಾಗಿ ಕೋರುತ್ತೇವೆ.

ಭಾನುವಾರ ದಿ: 8-4-2001 ದಂದು ಬೆಳಿಗ್ಗೆ 10-30ಕ್ಕೆ ನಡೆಯಲಿರುವ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾರೋಹಣದಲ್ಲಿ ಭಾಗವಹಿಸಲು ಪರವೂರುಗಳಿಂದ ಬರುವ ಶರಣ ಬಂಧುಗಳಿಗೆ ಊಟ - ವಸತಿಗಳ ವ್ಯವಸ್ಥೆಯನ್ನು ಮಾಡಲಾಗಿದೆ.

ಶರಣರ ಬರವೆಮಗೆ ಪ್ರಾಣ ಜೀವಾಳ

ಪೂಜ್ಯ ಶ್ರೀ ಮಾತೆ ಬಸವರತ್ನಾದೇವಿ
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ
ಉಳವಿ ರಸ್ತೆ, ರೇಲ್ವೆ ಗೇಟ್ ಬಳಿ,
ಧಾರವಾಡ - 580 003
ದೂರವಾಣಿ : 0836 - 773005

(ಧಾರವಾಡದಿಂದ ಉಳವಿ ಬಹಳ ಹತ್ತಿರದಲ್ಲಿರುವುದರಿಂದ ಆಸಕ್ತರು ಹೋಗಿ ಬರುವಂತೆ ಕಾಲಾವಕಾಶ ಇರಿಸಿಕೊಂಡು ಬರಬಹುದು.)

2001 ಫೆಬ್ರವರಿ-ಮಾರ್ಚ್ ತಿಂಗಳಲ್ಲಿ

ವಿವಿಧೋದ್ದೇಶಗಳಿಗಾಗಿ ಕಾಣಿಕೆ ಕೊಟ್ಟ ದಾಸೋಹಿಗಳು

ಕೂಡಲ ಸಂಗಮದ ಬಸವ ಧರ್ಮ ಪೀಠದ ಕಟ್ಟಡ ನಿಧಿಗೆ

ಶರಣರುಗಳಾದ

1. ಶಾಂತಾದೇವಿ ಮಲ್ಲೇಶಪ್ಪ ಕುಸುಗಲ್, ಧಾರವಾಡ (ಸಿಂಗಲ್ ಕೋಣೆ)	ರೂ. 51,000=00
2. ಸುವರ್ಣಾ ಮಲ್ಲಿನಾಥ ಐನಾಪುರೆ, ಬೆಂಗಳೂರು (ಸಿಂಗಲ್ ಕೋಣೆ)	ರೂ. 51;000=00

ಬೆಂಗಳೂರಿನ ಬಸವ ಮಂಟಪದ ಮೇಲೆ ಕಟ್ಟಲಾಗುವ ವಿಶ್ವಕಲ್ಯಾಣ ಮಿಷನ್‌ನ ಮಹಿಳೆಯರ ಹಾಸ್ಟೆಲ್ ಸಲುವಾಗಿ

ಶರಣರುಗಳಾದ :

1.	ಜಗನ್ನಾಥ್ ಪನಸಾಲೆ, ಬೆಂಗಳೂರು	ರೂ. 50,000=00
2.	ಟಿ. ಸಿ. ಸುಮಾ D/o ಚನ್ನಬಸವಯ್ಯ	ರೂ. 25,000=00
3.	ಹೇಮಚಂದ್ರ ನೂರೊಂದಪ್ಪ ಷೇಣಿ, ಬೆಂಗಳೂರು	ರೂ. 11,111=00
4.	ಮಲ್ಲಮ್ಮ ಬಸವರಾಜ ಪಾಟೀಲ್, ಬೆಂಗಳೂರು	ರೂ. 11,111=00
5.	ಕೆ. ಜಿ. ಮಲ್ಲಿಕಾರ್ಜುನಯ್ಯ, ಬೆಂಗಳೂರು	ರೂ. 10,000=00
6.	ವಿಠ್ಠಲ್. ಎಂ. ಮುದುಗೋಳ್‌ಕರ್	ರೂ. 5000=00
7.	ಸರ್ವಮಂಗಳಾ ಗುಂಡಪ್ಪ ಮುದನೂರ್, ಬೆಂಗಳೂರು	ರೂ. 3001=00
8.	ರತ್ನಾ. ಎಂ. ಬಸವರಾಜ್, ಬೆಂಗಳೂರು	ರೂ. 3001=00
9.	ಕಮಲಾ ಪುಟ್ಟಪ್ಪ	ರೂ. 3001=00
10.	ಸುಮಿತ್ರಾ. ಎ. ಟಿ. ರಾಯರೆಡ್ಡಿ, ಬೆಂಗಳೂರು	ರೂ. 2101=00
11.	ಸರ್ವಮಂಗಳಾ ಶಿವಣ್ಣ, ದಿನ್ನೂರು	ರೂ. 1001=00
12.	ಲಲಿತಾ ಬಸವರಾಜ್ ಪಡಗಿ	ರೂ. 1215=00
13.	ಡಾ ॥ ಪಿ. ಬಸಪ್ಪ ಮತ್ತು ಹೆಚ್. ಡಿ. ಗೀತಾ	ರೂ. 1001=00
14.	ಶಿವಪ್ಪ ಚನ್ನಪ್ಪ, ಬೆಂಗಳೂರು	ರೂ. 1001=00
15.	ಹೇಮಾ ಮೂರ್ತಿ	ರೂ. 1101=00
16.	ಮಹಾದೇವ. ಎಂ. ಭಾವಿಕಟ್ಟಿ, ಬೆಂಗಳೂರು	ರೂ. 1001=00
17.	ಸೋಮರ್‌ಚಂದ್ ಸುರಾನಾ, ಬೆಂಗಳೂರು	ರೂ. 1001=00
18.	ಕೆ. ಗೌರಿ, ಬೆಂಗಳೂರು	ರೂ. 1001=00
19.	ಪಿ. ಪ್ರೇಮಾ, ಬೆಂಗಳೂರು	ರೂ. 1001=00
20.	ಡಾ॥ ಗಿರಿಜಾ ಶ್ರೀಮಂತ ಬೈರಪ್ಪನವರು	ರೂ. 1001=00
21.	ಡಿ. ಆರ್. ಮರುಳಸಿದ್ದಪ್ಪ	ರೂ. 1001=00

ಅನಾಥ ಮಕ್ಕಳ ವಿದ್ಯಾಭ್ಯಾಸಕ್ಕೆ

ಶರಣೆ. ಅಶ್ವತ್ಥಮ್ಮ ನಾರಾಯಣ್, ಬೆಂಗಳೂರು	ರೂ. 12,108=00
ಶರಣ. ಬಿ. ಎಲ್. ರಾಮಚಂದ್ರ	ರೂ. 2613=00

ಕಲ್ಯಾಣ ಕಿರಣ ಪತ್ರಿಕೆಯ ಒಡೆತನ
ಮತ್ತಿತರ ವಿವರಗಳ ಪ್ರಕಟಣೆ

ಪ್ರಾರೂಪ ೪ (ವಿಧಿ ೮)

೧. ಪ್ರಕಟಣೆಯ ಸ್ಥಳ	- ಬೆಂಗಳೂರು
೨. ಪ್ರಕಟಣೆಯ ನಿಯತಕಾಲಿಕತೆ	- ಮಾಸಿಕ
೩. ಮುದ್ರಕರ ಹೆಸರು	- ಸೋದರಿ ಕಸ್ತೂರಿ
ಭಾರತದ ಪ್ರಜೆಯೆ ?	- ಹೌದು
ವಿಳಾಸ	- ಪ್ರಭುದೇವ ಮುದ್ರಣಾಲಯ ಬಸವ ಗಂಗೋತ್ರಿ, ಕುಂಬಳಗೋಡು
೪. ಪ್ರಕಾಶಕರ ಹೆಸರು	- ಬಿ. ಶಂಭುಲಿಂಗಯ್ಯ
ಭಾರತದ ಪ್ರಜೆಯೇ	- ಹೌದು
ವಿಳಾಸ	- ಕಲ್ಯಾಣ ಕಿರಣ ಕಾರ್ಯಾಲಯ ಬಸವ ಮಂಟಪ, ರಾಜಾಜಿನಗರ ಬೆಂಗಳೂರು-೫೬೦೦೧೦
೫. ಸಂಪಾದಕರ ಹೆಸರು	- ಬಿ.ಶಂಭುಲಿಂಗಯ್ಯ
ಭಾರತದ ಪ್ರಜೆಯೆ ?	- ಹೌದು
ವಿಳಾಸ	- ಬಸವ ಮಂಟಪ ರಾಜಾಜಿನಗರ, ಬೆಂಗಳೂರು-೫೬೦೦೧೦
೬. ಪತ್ರಿಕೆಯ ಒಡೆತನ ವಹಿಸಿರುವ ವ್ಯಕ್ತಿಯ ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಸ ಶೇ. ೧ ಕ್ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರ ಹೆಸರು ಮತ್ತು ವಿಳಾಸ	- ವಿಶ್ವಕಲ್ಯಾಣ ಮಿಷನ್ (ರಿಜಿಸ್ಟರ್ಡ್ ರಿಲಿಜಿಯಸ್ ಚಾರಿಟಬಲ್ ಟ್ರಸ್ಟ್) ಬಸವ ಮಂಟಪ, ರಾಜಾಜಿನಗರ ಬೆಂಗಳೂರು-೫೬೦ ೦೧೦

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನನ್ನ ನಂಬಿಕೆಯಂತೆ ನಿಜವೆಂದು, ನಾನು ಬಿ.ಶಂಭುಲಿಂಗಯ್ಯ ಘೋಷಿಸುತ್ತೇನೆ.

ದಿನಾಂಕ 1-3-2001

ಪ್ರಕಾಶಕ
ಬಿ.ಶಂಭುಲಿಂಗಯ್ಯ
ಕಲ್ಯಾಣ ಕಿರಣ, ಬೆಂಗಳೂರು-೧೦

ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ
ಬಸವ ಮಂಟಪ ನಿರ್ಮಾಣಕ್ಕೆ ಧನ ದಾಸೋಹ ಮಾಡಿದವರು

ಶರಣರುಗಳಾದ :

1.	ಬಿ. ಜಿ. ಹೊಸಗೌಡರು, ಗಣನಾಯಕರು, ಹುಬ್ಬಳ್ಳಿ	ರೂ.	1,00,000=00
2.	ದೇವೇಂದ್ರಪ್ಪ ಬಸವಂತಪ್ಪ ಇಂಗಳಳ್ಳಿ, ಧಾರವಾಡ (ಬಸವಣ್ಣನವರ ಮೂರ್ತಿಗಾಗಿ)	ರೂ.	50,000=00
3.	ಪಾರ್ವತಮ್ಮ ಮಲ್ಲಯ್ಯ ಪ್ರಭುಸ್ವಾಮಿ ಮಠ, ಧಾರವಾಡ (ಅಲ್ಲಮ ಪ್ರಭು ಮೂರ್ತಿಗಾಗಿ)	ರೂ.	50,001=00
4.	ಸೂರ್ಯಕಾಂತ ಶಿವರಾಯಪ್ಪ ಶೀಲವಂತರ, ಹುಬ್ಬಳ್ಳಿ	ರೂ.	25,001=00
5.	ಅಶೋಕ ಶಿವರಾಯಪ್ಪ ಶೀಲವಂತರ, ಕಲಘಟಗಿ	ರೂ.	25,001=00
6.	ಈಶ್ವರಪ್ಪ ಮಲ್ಲಪ್ಪ ಸಾಣೇಕೊಪ್ಪ, ಧಾರವಾಡ	ರೂ.	25,001=00
7.	ಲೀಲಾವತಿ ಕಲ್ಲಪ್ಪ ಬಾಗೇವಾಡಿ, ಧಾರವಾಡ	ರೂ.	15,001=00
8.	ನೀಲವ್ವ ವೀರಭದ್ರಯ್ಯ ಸಾಲೀಮಠ	ರೂ.	11,111=00
9.	ಐ. ಆರ್. ಗೋರಬಾಳ. ಧಾರವಾಡ	ರೂ.	10,001=00
10.	ಶಂಕರಗೌಡ ಲಕ್ಷಣಗೌಡ ಗೌಡರ, ಧಾರವಾಡ	ರೂ.	10,001=00
11.	ರಾಮನ ಗೌಡ್ರು, ಬಾಲಪ್ಪ ಚನ್ನಪ್ಪಗೌಡ್ರು, ಧಾರವಾಡ	ರೂ.	10,001=00
12.	ಅಂಜನಾದೇವಿ ಶಿವಣ್ಣ ಶಿರೂರು, ಧಾರವಾಡ	ರೂ.	5,555=00
13.	ಶಾಂತಾದೇವಿ ಮಲ್ಲೇಶಪ್ಪ ಕುಸುಗಲ್, ಧಾರವಾಡ	ರೂ.	5,001=00
14.	ಈರಮ್ಮ ಚಂದ್ರಪ್ಪ ಕೂಸಪ್ಪನವರ, ಧಾರವಾಡ	ರೂ.	5,001=00
15.	ಮಹಾದೇವಿ ವಿರುಪಾಕ್ಷಿ ಗಿರೆಪ್ಪನವರ, ಧಾರವಾಡ	ರೂ.	5,001=00
16.	ಶಾಂತಾ ಚನ್ನಬಸಪ್ಪ ಅಂಗಡಿ, ಧಾರವಾಡ	ರೂ.	5,001=00
17.	ಮಹಾದೇವ ಬಸವಣ್ಣೆಪ್ಪ ನ್ಯಾಮತಿ, ಧಾರವಾಡ	ರೂ.	5,001=00
18.	ನೀಲಮ್ಮ ತೋಟಪ್ಪ ಮುಮ್ಮಿಗಟ್ಟಿ, ಧಾರವಾಡ	ರೂ.	5,001=00
19.	ಯಲ್ಲಮ್ಮ ಮಲ್ಲೇಶಪ್ಪ ಕರಡಿಗುಡ್ಡ, ಧಾರವಾಡ	ರೂ.	5,001=00
20.	ಸಾವಿತ್ರಿ ಆನಂದಪ್ಪ ಜಕರೆಡ್ಡಿ, ಧಾರವಾಡ	ರೂ.	5,001=00
21.	ಸರಸ್ವತಮ್ಮ ನಾಗಪ್ಪ ಗರಗದ, ಧಾರವಾಡ	ರೂ.	5,001=00
22.	ಯಲ್ಲೂಬಾಯಿ ದೊಡ್ಡಪ್ಪ ಕೊಂಬಳಿ, ಧಾರವಾಡ	ರೂ.	5,001=00
23.	ಗಂಗಮ್ಮ ಚಂದ್ರಕಾಂತ ಯಾದವಾಡ, ಧಾರವಾಡ	ರೂ.	5,001=00
24.	ಅನ್ನಪೂರ್ಣ ಪಟ್ಟೇದ, ಧಾರವಾಡ	ರೂ.	5,051=00
25.	ಜಯಮಂಗಲಾತಾಯಿ ಫಕೀರಪ್ಪ ಬೇವಿನಗಿಡದ	ರೂ.	5,001=00
26.	ಶಿವಣ್ಣ ಚನ್ನಬಸಪ್ಪ ಅಂಗಡಿ, ಧಾರವಾಡ	ರೂ.	5,001=00
27.	ಶಿವಾನಂದ ಗದಿಗೆಪ್ಪ ಅಬಲೂರು, ಧಾರವಾಡ	ರೂ.	5,001=00
28.	ಕಮಲಮ್ಮ ಗೋಧಿ, ಧಾರವಾಡ	ರೂ.	5,001=00
29.	ಲಕ್ಷ್ಮಿ ಶಿವಲಿಂಗಪ್ಪ ರೊಳ್ಳಿ, ಧಾರವಾಡ	ರೂ.	5,001=00
30.	ನಾಗರತ್ನಮ್ಮ. ಎಸ್. ಹಾಲಪ್ಪನವರ, ಧಾರವಾಡ	ರೂ.	5,001=00

31.	ಗದಿಗೆಪ್ಪ ಶಿವಪ್ಪ ಗೊಂದಿ, ಧಾರವಾಡ	ರೂ.	5,001=00
32.	ಪಾರ್ವತಿ ಶಂಕರ ಕರಡಿಗುಡ್ಡ, ಹುಬ್ಬಳ್ಳಿ	ರೂ.	5,001=00
33.	ದಾಕ್ಷಾಯಿಣಿ ಶರಣಪ್ಪ ಸಜ್ಜನರ, ಧಾರವಾಡ	ರೂ.	5,001=00
34.	ಪಾಂಡುರಂಗ ಗೋವಿಂದಪ್ಪ ಕುರಡಗಿ, ಧಾರವಾಡ	ರೂ.	5,001=00
35.	ಸುಶೀಲಾ ಸ್ಪೋಮಶೇಖರ್ ಮಾಡಿಕ, ಧಾರವಾಡ	ರೂ.	5,001=00
36.	ಅನಿತಾ ನಾಗಪ್ಪ ಬದರಿ, ಧಾರವಾಡ	ರೂ.	5,001=00
37.	ಲಿಂ॥ಸುಶೀಲಾ ಮಲ್ಲಪ್ಪ ಕವಳೀಕಾಯಿ, ಧಾರವಾಡ	ರೂ.	5,001=00
38.	ಶೇಖನಗೌಡ ಸಿದ್ದನಗೌಡ ದೊಡಗೌಡ್ರು, ಧಾರವಾಡ	ರೂ.	5,001=00
39.	ಫಕೀರಪ್ಪ ಅಸುಂಡಿ, ಧಾರವಾಡ	ರೂ.	5,001=00
40.	ದ್ಯಾಮಕ್ಕ ಯಲ್ಲಪ್ಪ ನಂದೆಣ್ಣನವರ, ಧಾರವಾಡ	ರೂ.	5,001=00
41.	ಕೃಷ್ಣಾಬಾಯಿ ಶಂಕರಗೌಡ ಪಾಟೀಲ, ಧಾರವಾಡ	ರೂ.	5,001=00
42.	ಶಾಂತಾದೇವಿ ಶಿವಪ್ಪ ಮುಮ್ಮಿಗಟ್ಟಿ, ಧಾರವಾಡ	ರೂ.	5,001=00
43.	ಎ. ಕೆ. ಕುಲಕರ್ಣಿ, ಧಾರವಾಡ	ರೂ.	5,001=00
44.	ಹೇಮಾವತಿ ಭೀಮನಗೌಡ್ರು ಸಂಕನಗೌಡ್ರು, ಧಾರವಾಡ	ರೂ.	5,001=00
45.	ಗಂಗಮ್ಮ ಸೋಬಾನದ, ಧಾರವಾಡ	ರೂ.	5,001=00
46.	ಪ್ರೇಮಾ ಪಾಟೀಲ್, ಧಾರವಾಡ	ರೂ.	2,001=00
47.	ಗಿರಿಜಾ ಬಸವರಾಜ ಹೊಸಮನಿ, ಧಾರವಾಡ	ರೂ.	1,111=00
48.	ರೇಣುಕಾ ಸಿದ್ದಪ್ಪ ಬ್ಯಾಳಿ, ಧಾರವಾಡ	ರೂ.	1,111=00
49.	ಮಹಾಂತೇಶ ಬಸವಣ್ಣೆಪ್ಪ ಕೋಳೂರ, ಧಾರವಾಡ	ರೂ.	1,001=00
		ರೂ.	1,111=00

ಶರಣ ಬಂಧುಗಳೇ,

ಧಾರವಾಡದ ಉಳವಿ ರಸ್ತೆಯಲ್ಲಿರುವ ಜಗನ್ಮಾತಾ ಅಕ್ಕಮಹಾದೇವಿ ಮಠದ ಆವರಣದಲ್ಲಿ ಬಸವಾಲಯ, ಶರಣಾಲಯ ಮತ್ತು ಬಸವ ಮಂಟಪಗಳನ್ನು ಕಟ್ಟಿಸುವ ಕಾರ್ಯವನ್ನು ಆರಂಭಿಸಿದ್ದು ಕೆಲಸವು ತ್ವರಿತಗತಿಯಲ್ಲಿ ನಡೆದಿದೆ. ಇಲ್ಲಿ ಪ್ರತಿ ವಾರವೂ ಸಾಮೂಹಿಕ ಪ್ರಾರ್ಥನೆ - ಶರಣ ಸಂಗಮ ಮತ್ತು ಪ್ರತಿ ಭಾನುವಾರ ಪ್ರಸಾದ ದಾಸೋಹವು ತಪ್ಪದೆ ನಡೆಯುತ್ತಲಿದೆ. ಶರಣರ ಜಯಂತಿಗಳನ್ನು, ಹಬ್ಬ - ಹುಣ್ಣಿಮೆ - ಉತ್ಸವಗಳನ್ನು ಆಚರಿಸುತ್ತಿರುವುದಲ್ಲದೆ ಪ್ರಸಾದ ದಾಸೋಹವು ನಡೆಯುತ್ತದೆ. ಈವರೆಗೂ ತೆಂಗಿನ ಗರಿಯ ಶೆಡ್ಡಿನಲ್ಲಿ ನಡೆಸಿಕೊಂಡು ಬರುತ್ತಿದ್ದು, ಅದೀಗ ಶಿಥಿಲವಾಗಿರುವುದರಿಂದ ಪ್ರಾರ್ಥನಾ ಮಂಟಪ ಮತ್ತು ದಾಸೋಹ ಶಾಲೆಯನ್ನು ಕಟ್ಟಲು ಸಂಕಲ್ಪಿಸಿ ಕಾರ್ಯಾರಂಭ ಮಾಡಲಾಗಿದೆ.

ಆದ್ದರಿಂದ, ಎಲ್ಲ ಸಹೃದಯರು ಉದಾರವಾದ ದೇಣಿಗೆ ನೀಡಿ ಕಟ್ಟಡವು ಬೇಗನೆ ಪೂರ್ಣಗೊಳ್ಳಲು ಸಹಕರಿಸಬೇಕೆಂದು ಕೋರುತ್ತೇವೆ. ನಗದು/ಬ್ಯಾಂಕ್ ಡ್ರಾಫ್ಟ್/ಚೆಕ್ ಕಳಿಸುವವರು ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ ಟ್ರಸ್ಟ್ (Jaganmata Akkamahadevi Ashrama Trust) ಎಂದು ಧಾರವಾಡಕ್ಕೆ ಕಳಿಸಬೇಕಾಗಿ ಕೋರಿಕೆ. ವಿಳಾಸ : ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ ಟ್ರಸ್ಟ್, ಉಳವಿ ರಸ್ತೆ, ರೇಲ್ವೆ ಗೇಟ್ ಬಳಿ, ಧಾರವಾಡ - 580003. ದೂರವಾಣಿ : 0836 - 773005

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ

ಪೀಠಾಧ್ಯಕ್ಷೆ



ಪಥ ಸಂಚಲನ ಮಾಡುತ್ತಿರುವ ಶರಣ - ಶರಣೆಯರ ಉದ್ದ ಸಾಲು



ಧಾರವಾಡದಲ್ಲಿ ಶಿವರಾತ್ರಿಯಂದು ನಡೆದ ಗಣಮೇಳದಲ್ಲಿ ಪಥ ಸಂಚಲನ

CPMG/KA/BGW-30 2001
R.NO. 19980/70 WPP (W) - 17

